ಮಾದಣ್ಣ ವಿರಚಿತ

ನನ್ನಯ್ಯಗಳ ಚಾರಿತ್ರ


ಸಂಪಾದಕ

ಜಿ. ಜಿ. ಮಂಜುನಾಥನ್





ಕನ್ನಡ ಅಧ್ಯಯನ ಸಂಸ್ಥೆ : : ಮೈಸೂರು ವಿಶ್ವವಿದ್ಯಾನಿಲಯ



ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ—೩೩೫

ಪ್ರಾಚ್ಯಕಾವ್ಯ ಮಾಲೆ—೪೯

ಪ್ರಧಾನ ಸಂಪಾದಕ

ಡಾ. ಹಾ. ಮಾ. ನಾಯಕ

ವಿಭಾಗ ಸಂಪಾದಕ

ಎನ್. ಬಸವಾರಾಧ್ಯ

ಮಾದಣ್ಣ ವಿರಚಿತ

ನನ್ನಯ್ಯಗಳ ಚಾರಿತ್ರ

ಮಾದಣ್ಣ ವಿರಚಿತ

ನನ್ನಯ್ಯಗಳ ಚಾರಿತ್ರ

ಸಂಪಾದಕ

ಜಿ. ಜಿ. ಮಂಜುನಾಥನ್



ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
1978

NANNAYYAGALA CHARITRA of Madanna ; edited by G. G. Manjunathan ; published by the Insititute of Kannada Studies, University of Mysore, Manasagangotri, Mysore-570 006
First edition 1978. pp. xii+64+364

ಬೆಲೆ : ರೂ. 15-00

ಮಾರಾಟಗಾರರು : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-570 012

ಮುದ್ರಣ : ಹರ್ಷ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು-570 008

ಮುನ್ನುಡಿ

ಕನ್ನಡ ಅಧ್ಯಯನಕ್ಕೆ ಸಂಬಂಧಪಟ್ಟ ಚಟುವಟಿಕೆಗಳೆಲ್ಲವನ್ನೂ ಕೇಂದ್ರೀಕರಿಸುವ ದೃಷ್ಟಿಯಿಂದ ೧೯೬೬ರ ಕೊನೆಯಲ್ಲಿ ಪ್ರಾಚ್ಯ ಸಂಶೋಧನಾಲಯದ ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಳಿಸಲಾಯಿತು. ಅಂದಿನಿಂದ ಈ ವಿಭಾಗವನ್ನು ಅಧ್ಯಯನ ಸಂಸ್ಥೆಯು 'ಸಂಪಾದನ ವಿಭಾಗ'ವೆಂದು ಹೆಸರಿಸಲಾಯಿತು. ಕ್ರಿ.ಶ. ೧೩೪೨ರಲ್ಲಿ ಪ್ರತಿಮಾಡಲಾಗಿರುವ ಹಾಗೂ ಅತ್ಯಂತ ಪ್ರಾಚೀನ ಉಪಲಬ್ಧ ಕಾಲ ನಮೂದಿತ ಹಸ್ತಪ್ರತಿಯಾಗಿರುವ ರನ್ನನ 'ಗದಾಯುದ್ಧ'ದ ಹಸ್ತಪ್ರತಿಯಿಂದ ಹಿಡಿದು ೧೮೫೦ರಲ್ಲಿ ಪ್ರತಿಮಾಡಲಾಗಿರುವ 'ಪ್ರಭಾವತಿ ಪರಿಣಯ'ದ ಹಸ್ತಪ್ರತಿಯವರೆಗೆ ಇಂದು ೫೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಹೊಂದಿರುವ 'ಸಂಪಾದನ ವಿಭಾಗ' ಅಧ್ಯಯನ ಸಂಸ್ಥೆಯ ಒಂದು ಪ್ರಧಾನ ಅಂಗವಾಗಿದೆ. ಕನ್ನಡ ಭಾಷಾ ಸಾಹಿತ್ಯಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಕೈಗೊಳ್ಳುವವರಿಗೆ, ಸಂಶೋಧಕರಿಗೆ, ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಇದು ಆಕರಗ್ರಂಥಗಳ ತವರಾಗಿದೆ, ಪ್ರೇರಣೆಯ ಸ್ರೋತವಾಗಿದೆ.

ಮುದ್ರಣ ಸೌಲಭ್ಯ ಈಗ್ಗೆ ಕೆಲವು ಶತಮಾನಗಳಿಂದೀಚೆಗೆ ಮಾನವ ಜನಾಂಗಕ್ಕೆ ದೊರೆತಿರುವ ವರ. ಈ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಓಲೆಗರಿ ಅಥವಾ ತಾಡಪತ್ರದ ಮೇಲೆ ಕಂಠದಿಂದ ಕೊರೆದು, ಅನನ್ಯಶ್ರದ್ಧೆಯಿಂದ ಆ ಸಾಹಿತ್ಯವನ್ನು ಅಭ್ಯಸಿಸಿ, ಅದನ್ನು ಕಾಯ್ದುಕೊಂಡು ಬಂದ ಹಿರಿಯರಿಂದ ಅಂದಿನ ಅಪೂರ್ವಸಾಹಿತ್ಯ ನಮ್ಮ ಸಂಪತ್ತಾಗಿ ಉಳಿದಿದೆ. ತನಗೆ ಪ್ರಿಯವೆನಿಸಿದ ಸಾಹಿತ್ಯ ಕೃತಿಗಳನ್ನು ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದು ಆ ಕಾಲದ ಒಂದು ಬಗೆಯ ಹವ್ಯಾಸವೇ ಆಗಿತ್ತು. ಈ ಕಾರಣದಿಂದಾಗಿಯೇ ಓಲೆಗರಿಯ ಒಂದು ಸಂಪುಟದಲ್ಲಿಯೇ ಅನೇಕ ಗ್ರಂಥಗಳನ್ನು ಗ್ರಂಥಭಾಗಗಳನ್ನು ಪ್ರತಿಲಿಪೀಕರಿಸಿರುವುದನ್ನು ಕಾಣುತ್ತೇವೆ. ಹಸ್ತಪ್ರತಿಗಳ ಅನೇಕ ಪ್ರತಿಗಳನ್ನು ಸಿದ್ಧಪಡಿಸಿ ಹಂಚುವುದನ್ನು ಪುಣ್ಯಕಾರ್ಯವೆಂದು ಬಗೆದು, ಆ ರೀತಿ ಮಾಡುತ್ತಿದ್ದುದಕ್ಕೂ ಉದಾಹರಣೆಗಳಿವೆ. ಪ್ರತಿಲಿಪೀಕರಣ ಹಲವರಿಗೆ ಜೀವನೋಪಾಯದ ಸಾಧನವಾಗಿಯೂ ಇತ್ತು. ಹಸ್ತಪ್ರತಿಗಳನ್ನು ಸುಂದರ ಸಂದರ್ಭೋಚಿತ ಚಿತ್ರಗಳಿಂದ ಅಲಂಕರಿಸುವ ವಾಡಿಕೆಯೂ ಇತ್ತು. ಇವು ನಮ್ಮ ಜನಗಳ ಸಾಹಿತ್ಯ-ಶಾಸ್ತ್ರ-ಕಲಾಭಿರುಚಿಯ ಪ್ರತೀಕವಾಗಿದೆ.

ಸಂಸ್ಕೃತಿ, ಇತಿಹಾಸ, ಭಾಷಾಚರಿತ್ರೆ-ಇವುಗಳ ಸಮಗ್ರ ಅರಿವಿಗೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯ ಅತ್ಯಾವಶ್ಯಕ. ಅಷ್ಟೇ ಅಲ್ಲ, ಕೋಶ ಅಥವಾ ನಿಘಂಟುಗಳ ರಚನೆಗೆ, ಅವುಗಳ ಮೂಲಘಟಕಗಳಾದ ಶಬ್ದಗಳ ಅರ್ಥನಿರ್ಧಾರಕ್ಕೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯಕೃತಿಗಳು ಅನಿವಾರ್ಯವಾಗುತ್ತವೆ. ಸಾಂಸ್ಕೃತಿಕ ಮತ್ತು ಐತಿಹಾಸಿಕ ಪುನರ್ರಚನೆಗೆ ಅಗತ್ಯವಾಗಿ ಬೇಕಾಗಿರುವ ಅನೇಕ ಗ್ರಂಥಗಳು ಇಂದಿಗೂ ಅನುಪಲಬ್ಧವಾಗಿವೆ. ಶಾಸನಗಳಲ್ಲಿ, ಅನ್ಯಕವಿಗಳ ಕೃತಿಗಳಲ್ಲಿ ಉಕ್ತವಾಗಿರುವುದರಿಂದ ಮಾತ್ರ ಹಲವು ಕವಿಗಳ ಮತ್ತು ಗ್ರಂಥಗಳ ಹೆಸರುಗಳು ತಿಳಿದುಬರುತ್ತವೆ.

'ಕಾವ್ಯ ಪ್ರಯೋಗ ಪರಿಣತಮತಿ'ಗಳಾಗಿದ್ದ ಕನ್ನಡ ಜನತೆಯ ಬಳಿ ಒಂದು ಕಾಲದಲ್ಲಿ ಇವೆಲ್ಲ ಲಭ್ಯವಾಗಿದ್ದಿರಬೇಕು. ನಾಡಿನ ಹಲವೆಡೆಗಳಲ್ಲಿ ಓಲೆಗರಿಯ ಸಾಹಿತ್ಯ ಅನೇಕ ಶತಮಾನಗಳವರೆಗೆ ತನ್ನ ವೈಭವವನ್ನು ಮೆರೆದಿತ್ತು. ಕಾವ್ಯಪಾರಾಯಣ ಸಾಂಸ್ಕೃತಿಕ ಜೀವನದ ಅಂಗವಾಗಿ ಪರಿಣಮಿಸಿತ್ತು. ಕಾಲಕ್ರಮದಲ್ಲಿ ದೇಶ ಕಾಲ ಪರಿಸರಗಳ ಪ್ರಭಾವ ದಿಂದ, ಜನತೆಯ ಅಜ್ಞಾನ, ಅಶ್ರದ್ಧೆ ಮತ್ತು ಔದಾಸೀನ್ಯಗಳ ಫಲವಾಗಿ ಅವು ಮೂಲೆ ಗುಂಪಾಗುತ್ತ ಬಂದು ಕೀಟಗಳಿಗೆ ಆಹಾರವಾಗತೊಡಗಿದವು. ಅವುಗಳನ್ನು ಸಂರಕ್ಷಿಸ ಲಾರದೆ ನದಿಯ ಪಾಲೋ, ಬೆಂಕಿಯ ಪಾಲೋ ಮಾಡುತ್ತಿದ್ದ ಉದಾಹರಣೆಗಳೂ ಅಸಂಖ್ಯವಾಗಿವೆ. ಮತ್ತೆ ಕೆಲವೆಡೆಗಳಲ್ಲಿ ನವರಾತ್ರಿಯಂದು ಬೆಳಕುಕಂಡು, ಪೂಜಾರ್ಹ ವಾಗಿ, ಹಾಲುಂಡು ಮತ್ತೆ ಕತ್ತಲ ಕೋಣೆಯ ಮೂಲೆ ಸೇರಬೇಕಾದ ದುಃಸ್ಥಿತಿ ಒದಗಿ ಹಲವಾರು ಅಮೂಲ್ಯ ಪ್ರತಿಗಳು ತ್ರುಟಿತವಾಗಿ ಹೋಗಿವೆ. ಇಂಥ ಮೌಢ್ಯವನ್ನು ದೂರ ಮಾಡಿ, ಹಸ್ತಪ್ರತಿಗಳನ್ನು ಹೊರಗೆಳೆದು, ಅವುಗಳನ್ನು ಕೊಂಡು ಇಲ್ಲವೆ ಎರವಲಾಗಿ ಪಡೆದು ಪರಿಷ್ಕರಿಸಿ, ಸಂಪಾದಿಸುವ ಹೊಣೆಯನ್ನು ಹೊತ್ತಿದೆ, ಈ ಸಂಸ್ಥೆಯ ಸಂಪಾದನ ವಿಭಾಗ.

ಅನುಪಲಬ್ಧವಾಗಿರುವ ಸಾಹಿತ್ಯರಾಶಿಯನ್ನು ಹೊರತರಲು ಉಪಲಬ್ಧ ಸಾಹಿತ್ಯಕ್ಕೆ ಪರಿಷ್ಕಾರ ನೀಡಲು ಹಸ್ತಪ್ರತಿಗಳ ಸಂಗ್ರಹಕಾರ್ಯ ಸತತವಾಗಿ ನಡೆಯಬೇಕಾ ಗಿದೆ. ಸಾಹಿತ್ಯಿಕ ಚಟುವಟಿಕೆಯ ಕೇಂದ್ರಗಳಾಗಿದ್ದ ಎಡೆಗಳಲ್ಲಿ, ಕವಿಗಳ ಕೀರ್ತಿ ಹರಡಿದ್ದ ಪ್ರದೇಶಗಳಲ್ಲಿ, ಜ್ಞಾನಗಂಗೆಯನ್ನು ಮನೆಮನೆಯ ಬಾಗಿಲಿಗೆ ಕೊಂಡೊಯ್ದ ಶಿವಶರಣರು ಮತ್ತು ದಾಸರುಗಳು ಸಂಚರಿಸುತ್ತಿದ್ದ ಸ್ಥಳಗಳಲ್ಲಿ ಅವರ ನೆನಪಿಗಾಗಿ ಮಠಗಳು ಸ್ಮಾರಕಗಳು ನಿರ್ಮಿತವಾಗಿರುವ ಕಡೆಗಳಲ್ಲಿ, ಅನುಯಾಯಿಗಳ ಮತ್ತು ಭಕ್ತರ ಮನೆ ಗಳಲ್ಲಿ, ಸಾಹಿತ್ಯೋಪಾಸಕರ ಬಳಿಯಲ್ಲಿ ಹೇಗೋ ಎಂತೋ ಸಂಗ್ರಹಿತವಾಗಿರುವ ಹಸ್ತಪ್ರತಿ ಗಳನ್ನು ಸಂಗ್ರಹಿಸಿ ರಕ್ಷಿಸಬೇಕಾಗಿದೆ. ಈ ಸಂಸ್ಥೆಯ ಹಸ್ತಪ್ರತಿಯ ಭಂಡಾರವನ್ನು ಈ ದೃಷ್ಟಿಯಿಂದ ಬೆಳಸಿಕೊಂಡು ಬರುವತ್ತ ಆದ್ಯಗಮನ ಕೊಡಲಾಗಿದೆ.

ಸಂಗ್ರಹಿಸಿದ ಪ್ರತಿಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುವುದೂ ಅತ್ಯಂತ ಮುಖ್ಯವಾದ ಹೊಣೆ. ಕೀಟಗಳ ಹಾವಳಿಗೆ ಸಿಕ್ಕಿ ಪ್ರತಿಗಳು ಶಿಥಿಲವಾಗದಂತೆ ನೋಡಿ ಕೊಳ್ಳುವ ದೃಷ್ಟಿಯಿಂದ ಸಾಧ್ಯವಾದಷ್ಟು ಸಲ ಅವುಗಳನ್ನು ಸ್ವಚ್ಛಗೊಳಿಸುವುದು, ಕೀಟನಿರೋಧಕತೈಲ ಲೇಪನಮಾಡುವುದು, ವಾಯುನಿಯಂತ್ರಿತ ಕೊಠಡಿಯಲ್ಲಿಟ್ಟು ಪ್ರಧೂಮನ ಉಪಚಾರ ನೀಡುವುದು (fumigation treatment), ತೀರ ತ್ರುಟಿತ ವಾದ ಹಸ್ತಪ್ರತಿಗಳನ್ನು ಮೈಕ್ರೋಫಿಲಂಗಳಲ್ಲಿ ಶಾಶ್ವತಗೊಳಿಸುವುದು ಅಗತ್ಯವಾಗುತ್ತದೆ. ಈ ರೀತಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರುವುದು ವ್ಯಕ್ತಿಗಳಿಗೆ ಶ್ರಮಸಾಧ್ಯವಾದ ಹಾಗೂ ಆರ್ಥಿಕವಾಗಿ ಸುಲಭಸಾಧ್ಯವಲ್ಲದ ಕಾರ್ಯ. ಕನ್ನಡ ಅಧ್ಯಯನ ಸಂಸ್ಥೆ ಹಸ್ತ ಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ಮೇಲ್ಕಂಡ ಕ್ರಮಗಳನ್ನೂ ಕೈಗೊಂಡಿದೆ.

ಗ್ರಂಥಸಂಪಾದನೆ ಶ್ರಮಸಾಧ್ಯವಾದ ಕಾರ್ಯ. ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ

ಮೇಳವಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು
ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿಗಳೂ ಕಾಲ ದೇಶ
ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿ
ಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದುಬಿಡುತ್ತಿದ್ದುದೂ ಉಂಟು.
ಕಾಲಕ್ರಮದಲ್ಲಿ ಅವು ಮೂಲದ ಅಂಗವೋ ಎಂಬಂತೆ ಸೇರಿಬಿಡುತ್ತಿದ್ದುದೂ ಸಹಜವೇ.
ಪ್ರತಿಭಾವಂತರೂ, ವ್ಯುತ್ಪನ್ನಮತಿಗಳೂ, ಕಾವ್ಯರಚನಾಸಮರ್ಥರೂ, ಮೂಲವನ್ನು
ಕೆಲವು ವೇಳೆ ಉತ್ತಮಪಡಿಸಿ ಕೆಲವು ವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಅರ್ಥವಾಗು
ವಂತಹ ಪಾಠಾಂತರಗಳನ್ನು ಕಲ್ಪಿಸಿ, ಅಲ್ಲಲ್ಲಿ ಮೂಲಧಾಟಿಗೆ ಭಂಗಬರದಂತೆ ತಮ್ಮ ಸ್ವಂತ
ರಚನೆಗಳನ್ನು ಪ್ರಕ್ಷೇಪಿಸಿಬಿಟ್ಟಿರುವುದೂ ಉಂಟು. ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ
ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು. (ಕೆಲವು ವೇಳೆ ವಾಸ್ತವವಾಗಿ
ಹಾಗಾಗದಿದ್ದರೂ ಪ್ರಕ್ಷೇಪಕನು ಹಾಗೆ ಭಾವಿಸಿಕೊಂಡದ್ದೂ, ತನ್ನ ಚಪಲವನ್ನು ತೀರಿಸಿ
ಕೊಂಡದ್ದೂ ಸತ್ಯ!) ಒಟ್ಟಿನಲ್ಲಿ ಅನಾವಶ್ಯಕ ವಿಸ್ತರಣಕ್ಕೆ ಕಾರಣವಾಗಿ ಕೃತಿಯ
ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ
ತಮಗೆ ಸರಿದೋರಿದಂತೆ ಅಥವಾ ಸೂಕ್ತ ಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ
ಅಥವಾ ಬೇರೆ ಶಬ್ದವನ್ನು ತಂದು ಗಡಿದು, ತಿಳಿದೋ ತಿಳಿಯದೆಯೋ ಮೂಲಕ್ಕೆ ತಿದ್ದು
ಪಡಿಗಳನ್ನು ತಂದುಬಿಡುತ್ತಿದ್ದುದುಂಟು. ಇಂತಹ ಅನೇಕ ಕಾರಣಗಳಿಂದಾಗಿ ಒಂದೇ
ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದೇ ಪ್ರತಿ
ಗಳು ದೊರಕಿದ್ದು ಅವೂ ತ್ರುಟಿತವಾಗಿರುವಂತಹ ಸಂದರ್ಭಗಳಲ್ಲಿ ಮೂಲದ ಶುದ್ಧ
ಪಾಠವನ್ನು ಪುನಾರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗು
ತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೇ ನಡೆದುಹೋಗುತ್ತದೆ.
ವಿದ್ವತ್ತಿನ ಹಿನ್ನೆಲೆಯಲ್ಲಿ ತಾಳ್ಮೆ, ಶ್ರಮಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿ ಯಶಸ್ಸು
ಪಡೆಯುವುದು ಸಾಧ್ಯವಾಗುವುದಿಲ್ಲ. ಗ್ರಂಥಸಂಪಾದನೆ ಇಂದು ವಿಶಿಷ್ಟಶಾಸ್ತ್ರವಾಗಿಯೂ
ಬೆಳೆದಿದೆ.

'ಸಂಪಾದನ ವಿಭಾಗ' ಹಲವಾರು ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು ವೈಜ್ಞಾ
ನಿಕವಾಗಿ ಸಂಪಾದಿಸಿ, ಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ, ವಿಸ್ತೃತ
ವಾದ ಪೀಠಿಕೆಗಳನ್ನು ಬರೆದು, ಕವಿಯ ಕಾಲ, ದೇಶ, ಕೃತಿಗಳ ವಿಚಾರವನ್ನು ಚರ್ಚಿಸಿ,
ಅವುಗಳ ಸಾಹಿತ್ಯಿಕ ಮೌಲ್ಯವನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಟಿಪ್ಪಣಿ ವ್ಯಾಖ್ಯಾನ
ಗಳನ್ನು ನೀಡಿ, ಕೆಲವು ಸಂದರ್ಭಗಳಲ್ಲಿ ಗದ್ಯಾನುವಾದಗಳನ್ನು ಕೊಟ್ಟು, ಅರ್ಥಕೋಶ
ವನ್ನು ಒದಗಿಸಿ ಬೆಳಕಿಗೆ ತರುತ್ತಿದೆ. ಪ್ರಾಚ್ಯವಿದ್ಯಾಸಂಶೋಧನಾಲಯದ ಅಂಗವಾಗಿದ್ದಾಗ
ಹೊರತಂದಿರುವ ೪೦ ಗ್ರಂಥಗಳ ಜೊತೆಗೆ ಅಧ್ಯಯನ ಸಂಸ್ಥೆಯಲ್ಲಿ ಸೇರ್ಪಡೆಯಾದ
ಮೇಲೆ 'ಪ್ರಾಚ್ಯಕಾವ್ಯಮಾಲೆ'ಯ ಹೆಸರಿನಲ್ಲಿ ಈಗಾಗಲೇ ಹಲ ಗ್ರಂಥಗಳನ್ನು ಹೊರ
ತರಲಾಗಿದೆ. ಬೆಳಕು ಕಾಣಲು ಹಾತೊರೆಯುತ್ತಿರುವ ಗ್ರಂಥಗಳನ್ನು ವ್ಯವಸ್ಥಿತ ರೀತಿ

ಯಲ್ಲಿ ಹೊರತರಲು ಸಂಸ್ಥೆ ಸತತವಾಗಿ ಶ್ರಮಿಸುತ್ತಿದೆ. ಇದುವರೆಗೆ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಸಿದ್ಧಪಡಿಸಿದ ಕೃತಿಗಳನ್ನು ಮಾತ್ರ ಪ್ರಕಟಿಸಲಾಗುತ್ತಿತ್ತು. ಈಗ ಈ ವಿಭಾಗದಲ್ಲಿ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಉಪಯೋಗಿಸಿಕೊಂಡು ಹೊರಗಿನವರೂ ಸಂಪಾದಿಸಬಹುದಾದ ಗ್ರಂಥಗಳನ್ನೂ ಪ್ರಕಟಿಸಲು ಯೋಜಿಸಲಾಗಿದೆ. ಇದರಿಂದ ಪ್ರಕಟನೆಯ ಕೆಲಸ ತ್ವರಿತಗೊಳ್ಳುತ್ತದೆ. ಹಸ್ತಪ್ರತಿಗಳಲ್ಲೇ ಉಳಿದು ಸಾಮಾನ್ಯರ ಕೈಗೆಟುಕದ ಗ್ರಂಥಗಳನ್ನು ಸರ್ವರ ಸ್ವತ್ತಾಗಿಸುವ ಉದ್ದೇಶವೂ ತೀವ್ರಗೊಳ್ಳುತ್ತದೆ.

ಸಂಪಾದನ ವಿಭಾಗ ಸಂಕಲಿತ ಗ್ರಂಥಗಳನ್ನು ಹೊರತರುವಲ್ಲಿಯೂ ನಮಗೆ ನೆರವಾಗುತ್ತಿದೆ. ಎರಡುಸಾವಿರ ವರ್ಷಗಳ ಸುದೀರ್ಘಪರಂಪರೆಯುಳ್ಳ ಕನ್ನಡ ಸಾಹಿತ್ಯದ ಸಿಂಹಾವಲೋಕನ ಮಾಡಿಸುವಂತಹ ಪ್ರಾತಿನಿಧಿಕ ಸಂಕಲನ ಗ್ರಂಥಗಳನ್ನು ಸಿದ್ಧಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲಾಗುತ್ತಿರುವ ಈ ಗ್ರಂಥಗಳು ಆಯಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಪರಿಚಯವನ್ನು ಬಯಸುವವರಿಗೂ ಉಪಯುಕ್ತವಾಗುತ್ತವೆ. ಇಂಥ ಸಂಕಲನಗಳನ್ನು ಸಿದ್ಧಪಡಿಸುವುದೂ ಸಂಪಾದನ ವಿಭಾಗದ ಒಂದು ಪ್ರಮುಖ ಹೊಣೆಯಾಗಿದೆ.

ಸಂಪಾದನ ವಿಭಾಗದ ಉಪನಿರ್ದೇಶಕರಾದ ಶ್ರೀ ಎನ್. ಬಸವಾರಾಧ್ಯ ಅವರ ನಿರ್ದೇಶನದಲ್ಲಿ ಅದೇ ವಿಭಾಗದಲ್ಲಿ ಸಂಶೋಧನ ಸಹಾಯಕರಾಗಿರುವ ಶ್ರೀ ಜಿ.ಜಿ. ಮಂಜುನಾಥನ್ ಅವರು ಮಾದಣ್ಣ ವಿರಚಿತ ನನ್ನಯ್ಯಗಳ ಚಾರಿತ್ರ ಎಂಬ ಕೃತಿಯನ್ನು ಸಂಪಾದಿಸಿಕೊಟ್ಟಿದ್ದಾರೆ. ಅವರಿಗೂ, ಇದರ ಪ್ರಕಟಣೆಯಲ್ಲಿ ಸಹಕರಿಸಿರುವ ಶ್ರೀ ಬಸವಾರಾಧ್ಯರಿಗೂ, ನನ್ನ ವಂದನೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೬

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

ಭರತಖಂಡ ಕಥೆಗಳ ನಾಡು. ಅನಾದಿಕಾಲದಿಂದ ಅಸಂಖ್ಯಾತವಾದ ಕಥೆಗಳು ಈ ದೇಶದ ಉದ್ದಗಲಕ್ಕೂ ಹರಡಿಕೊಂಡಿವೆ. ಕಥೆಗಳನ್ನು ಹೇಳುವುದೂ ಕೇಳುವುದೂ ಪರಂಪರಾನುಗತವಾಗಿ ಬೆಳೆದು ಬಂದಿರುವ ಪದ್ಧತಿ. ಪ್ರಾಚೀನ ಕಾವ್ಯ ಪುರಾಣಗಳಲ್ಲಿ ಅನೇಕ ಕಥೆಗಳು ಕಂಡುಬರುತ್ತವೆ. ಧರ್ಮ ನೀತಿಗಳ ಪ್ರಸಾರವೇ ಈ ಕಥೆಗಳ ಮೂಲೋದ್ದೇಶವಾದರೂ ಅನೇಕ ವೇಳೆ ಧರ್ಮೋಪದೇಶಕರು ತಮ್ಮ ಮತ ತತ್ತ್ವಗಳ ಪ್ರಚಾರಕ್ಕಾಗಿ ಈ ಕಥೆಗಳ ಮಾಧ್ಯಮವನ್ನು ಬಳಸಿಕೊಂಡಿರುವುದೂ ಉಂಟು.

ಕಥೆಗಳು ಹಲವಾರು ತೆರನಾಗಿವೆ. ಆಯಾಧರ್ಮಗಳಿಗೆ ಸಂಬಂಧಪಟ್ಟಂತೆ ಈ ಕಥೆಗಳು ಹುಟ್ಟಿಕೊಂಡಿವೆ. ಆಬಾಲವೃದ್ಧರಾದಿಯಾಗಿ ಎಲ್ಲರೂ ಈ ಕಥೆಗಳನ್ನು ಹೇಳಿ ಕೇಳುವುದರಲ್ಲಿ ತುಂಬ ಉತ್ಸುಕರಾಗಿರುತ್ತಾರೆ. ಹೀಗಾಗಿ ಈ ಪರಂಪರೆ ಇಂದಿಗೂ ಜೀವಂತವಾಗಿದೆ.

ಜಗತ್ತಿನ ಎಲ್ಲ ದೇಶಗಳಲ್ಲಿಯೂ ಈ ಕಥಾನಿರೂಪಣಾ ಪ್ರಕರಣಗಳು ರೂಢಿಯಲ್ಲಿವೆ. ಒಂದು ದೇಶದ ಕಥೆಗಳು ಮತ್ತೊಂದು ದೇಶಕ್ಕೆ ಪರ್ಯಟನ ಮಾಡಿರುವುದಕ್ಕೂ ನಿದರ್ಶನಗಳುಂಟು. ಈ ಕಥೆಗಳಿಗೆ ಉಗಮಸ್ಥಾನವಾದ ಭಾರತದ ಕಥೆಗಳು ವಿಶ್ವದಾದ್ಯಂತ ಸಂಚರಿಸಿವೆ. ಚಂದ್ರಹಾಸನ ಕಥೆಯೇ ಮೊದಲಾದುವು ವಿಶ್ವಪರ್ಯಟನ ಮಾಡಿಕೊಂಡು ಬಂದಿವೆ.

ಧರ್ಮಪ್ರಸಾರವನ್ನು ಕಥೆಗಳ ಮೂಲಕ ಪರಿಣಾಮಕಾರಿಯಾಗಿ ನಿರ್ವಹಿಸಬಹುದೆಂಬ ಮರ್ಮವನ್ನು ಕಂಡುಕೊಂಡ ಕವಿಗಳು ತಮ್ಮ ಕಾವ್ಯಗಳಲ್ಲಿ ಮೂಲಕಥೆಗೆ ಪರಿಪೋಷಕವಾಗಿ ಹಲವಾರು ಉಪಕಥೆಗಳನ್ನು ನಿರೂಪಿಸಿರುವುದನ್ನು ಕಾಣಬಹುದಾಗಿದೆ. ಕೆಲವುವೇಳೆ ಮುಖ್ಯಕಥೆಗೆ ಪೋಷಕವಾಗಿರಬೇಕಾದ ಉಪಕಥೆಗಳು ಮುಖ್ಯಕಥೆಯನ್ನೇ ಆವರಿಸಿಬಿಟ್ಟಿರುವುದೂ ಉಂಟು. ಒಟ್ಟಿನಲ್ಲಿ ಧರ್ಮ ನೀತಿ ತತ್ತ್ವಗಳನ್ನು ಪರಿಣಾಮಕಾರಿಯಾಗಿ ಪ್ರಸಾರ ಮಾಡಬಹುದಾದ ಸುವರ್ಣಮಾಧ್ಯಮ ಈ ಕಥಾನಿರೂಪಣ ಪ್ರಕರಣ.

ಕನ್ನಡ ಸಾಹಿತ್ಯದಲ್ಲಿ ಹತ್ತಾರು ಕಥೆಗಳನ್ನು ಒಳಕೊಂಡಿರುವ ಅನೇಕ ಕಾವ್ಯ ಪುರಾಣಗಳಿವೆ. ವೀರಶೈವ ಕಾವ್ಯ ಪುರಾಣಗಳಲ್ಲಂತೂ ಇದು ವಿಶೇಷವಾಗಿ ಕಂಡುಬರುತ್ತದೆ. ಬಸವಪುರಾಣ. ಚೆನ್ನಬಸವಪುರಾಣ, ಗುರುರಾಜಚಾರಿತ್ರ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಸರ್ವೇಶ್ವರಪುರಾಣದ ಕಥಾಸಾಗರ, ಪ್ರೌಢರಾಯನ ಕಾವ್ಯ–ಇವೇ ಮೊದಲಾದ ಕೃತಿಗಳು ಇದಕ್ಕೆ ನಿದರ್ಶನವಾಗಿವೆ.

ಪ್ರಸ್ತುತ ಮಾದಣ್ಣ ವಿರಚಿತ ನನ್ನಯ್ಯಗಳ ಚಾರಿತ್ರ ಈ ಶಿವಶರಣ ಕಥಾಕುಸುಮಗಳನ್ನೊಳಗೊಂಡ ಒಂದು ಕೃತಿ. ಚಂಪುವಿನಲ್ಲಿ ರಚಿತವಾಗಿರುವ ಈ ಕೃತಿಯಲ್ಲಿ ಬಸವ ಸಮಕಾಲೀನನಾದ ನನ್ನಯ್ಯನೆಂಬ ಶಿವಭಕ್ತನ ಕಥೆ ನಿರೂಪಿತವಾಗಿದೆ. ಕ್ರಿ.ಶ. ಸು 1650ರಲ್ಲಿ ಇದ್ದಿರಬಹುದಾದ ಮಾದಣ್ಣ ಪ್ರಾಚೀನ ಕಥೆಗಳನ್ನು ಕೊಡುವುದರ ಜೊತೆಗೆ

ಆತನ ಕಾಲದಲ್ಲಿ ರೂಢಿಯಲ್ಲಿದ್ದ ಕಥೆಗಳನ್ನು ಸಮಯೋಚಿತವಾಗಿ ಉಪಯೋಗಿಸಿ ಕೊಂಡಂತೆ ತೋರಿಬರುತ್ತದೆ. ಕಥೆಗಳನ್ನು ಕಾವ್ಯದ ಉದ್ದಕ್ಕೂ ಕೋದು ಭಕ್ತಿ, ಜ್ಞಾನ ವೈರಾಗ್ಯಗಳನ್ನು ಚಿತ್ರಿಸಿರುವ ಮಾದಣ್ಣನ ಕಲಾವಂತಿಕೆ ಮೆಚ್ಚುವಂತಹುದು. ಈ ಕಥೆಗಳಿಂದಲೇ ಕಾವ್ಯ ಮೊದಲಿಂದ ಕೊನೆಯತನಕ ಸ್ವಾರಸ್ಯಪೂರ್ಣವಾಗಿ ಪರಿಣಮಿಸಿದೆ. ಧರ್ಮವನ್ನು ಕಥೆಗಳ ಮೂಲಕ ಕಾವ್ಯರೂಪದಲ್ಲಿ ನಿರೂಪಿಸುವುದರಲ್ಲಿ ಮಾದಣ್ಣ ಅತ್ಯಂತ ಯಶಸ್ವಿಯಾಗಿದ್ದಾನೆ.

ನನ್ನಯ್ಯನನ್ನು ಕುರಿತ ಮಾದಣ್ಣನ ಕೃತಿಯೊಂದಿಗೆ ಪರ್ವತದೇವ, ಉದ್ದಂಡ ಮತ್ತು [illegible]ರಾಜನ ಕೃತಿಗಳಿವೆ. ಈ ಎಲ್ಲ ಕೃತಿಗಳ ಪ್ರಕಟಣೆಯಿಂದ ಕರ್ನಾಟಕದ ಕಥಾ ಸಾಹಿತ್ಯದ ತುಲನಾತ್ಮಕ ಅಭ್ಯಾಸಕ್ಕೆ ಅನುಕೂಲವಾಗುತ್ತದೆ. ಆ ದೃಷ್ಟಿಯಲ್ಲಿ ಮೊದಲ ಕೃತಿಯಾಗಿ ಮಾದಣ್ಣನ ನನ್ನಯ್ಯಗಳ ಚಾರಿತ್ರ ಪ್ರಕಟವಾಗುತ್ತಿವೆ. ಆ ದಿಸೆ ಯಲ್ಲಿ ಕೆಲಸ ಮಾಡುವವರಿಗೆ ಈ ಕೃತಿ ತುಂಬ ಪ್ರಯೋಜನವಾಗಬಹುದೆಂದು ಭಾವಿಸಲಾಗಿದೆ.

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು
ತಾ. 19–3–78

ಎನ್. ಬಸವಾರಾಧ್ಯ
ವಿಭಾಗ ಸಂಪಾದಕ

ವಿಷಯಸೂಚಿ

ಪೀಠಿಕೆ

ನನ್ನಯ್ಯ ಚಾರಿತ್ರ ಭಕ್ತಿ–ಜ್ಞಾನ–ವೈರಾಗ್ಯಗಳನ್ನು ಸಾಂಕೇತಿಕವಾಗಿ ಪ್ರತಿಪಾದಿಸುತ್ತದೆ. ಹಾಮುತಿಸಪುರದ ಮಾದಣ್ಣನು ಸು. 1650ರಲ್ಲಿ ಚಂಪೂರೂಪದಲ್ಲಿ ಈ ಕೃತಿಯನ್ನು ರಚಿಸಿದ್ದಾನೆ. ನನ್ನಯ್ಯನನ್ನು ಕುರಿತು ಪರ್ವತದೇವ, (ಸು 1578) ಉದ್ಭಟ (ಸು. 1700) ಎನ್ನುವವರು ಸಾಂಗತ್ಯದಲ್ಲಿ ಕಾವ್ಯಗಳನ್ನು ಬರೆದಿದ್ದಾರೆ[1] ವೀರಶೈವಾಮೃತ ಮಹಾಪುರಾಣ (ಗುಬ್ಬಿಯ ಮಲ್ಲಣಾರ್ಯ ಸು. 1513), ಭೈರವೇಶ್ವರ ಕಾವ್ಯ (ಕಿಕ್ಕೇರಿಯ ನಂಜುಂಡ ಸು. 1550), ಪಾಲ್ಕುರಿಕೆ ಸೋಮೇಶ್ವರ ಪುರಾಣ (ಪಿರಿಯ ತೋಂಟದಾರ್ಯ 1560), ಬಸವೇಶ್ವರ ಪುರಾಣ ಕಥಾಸಾಗರ (ಉತ್ತರ ದೇಶದ ಬಸವಲಿಂಗ ಸು. 1600), ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ (ಶಾಂತಲಿಂಗ ದೇಶಿಕ 1672)ಗಳಲ್ಲಿ ಪ್ರಾಸಂಗಿಕವಾಗಿ ನನ್ನಯ್ಯನ ಉಲ್ಲೇಖ ಬರುತ್ತದೆ.

ಪ್ರಸ್ತುತ ಮಾದಣ್ಣಗಳ ನನ್ನಯ್ಯ ಚಾರಿತ್ರವನ್ನು ಸಂಪಾದಿಸಿದೆ. ಕವಿ ಚರಿತೆಕಾರರು ಇವನ ಬಗ್ಗೆ "ಇವನು ನನ್ನಯ್ಯಗಳ ಚಾರಿತ್ರವನ್ನು ಬರೆದಿದ್ದಾನೆ. ಈತನು ವೀರಶೈವ ಕವಿ. ಭಾರದ್ವಾಜಗೋತ್ರದವನು. ಇವನ ಗುರು ರಾಮನಾಥ, ತಂದೆ ಅಲ್ಲಪ, ತಾಯಿ ಮಲ್ಲಿಯಕ್ಕ. ಸ್ಥಳ ಹಾಮುತೀರಪುರ. ಇವನು ಸುಮಾರು 1650ರಲ್ಲಿ ಇದ್ದಿರಬಹುದೆಂದು ತೋರುತ್ತದೆ" ಎಂದಿದ್ದಾರೆ[2]. ಆದರೆ ಸಂಪಾದನೆಗೆ ಬಳಸಿಕೊಂಡ ನಾಲ್ಕು ಹಸ್ತಪ್ರತಿಗಳಲ್ಲಿಯೂ ಮಾದಣ್ಣನ ಭಾರದ್ವಾಜಗೋತ್ರ, ತಂದೆ ಅಲ್ಲಪ, ತಾಯಿ ಮಲ್ಲಿಯಕ್ಕ ಎನ್ನುವ ಉಲ್ಲೇಖಗಳು ದೊರೆಯುವುದಿಲ್ಲ. ಇವನ ಗುರು ರಾಮನಾಥ ಎನ್ನುವ ಬಗ್ಗೆ ಯೇನು ಪ್ರಮಾಣವಿಲ್ಲ. ವ್ರಣಾದರಿ ಮಹಾಕ್ಷೇತ್ರದ (ಮುದೇನೂರು) ರಾಮನಾಥ ಈತನ ಗುರುವಲ್ಲ ಆರಾಧ್ಯದೈವ. ಹಸ್ತಪ್ರತಿ ಕೆ. ಎ. 378ರ ಕಡೆಯಲ್ಲಿ ದೊರೆಯುವ ತ್ರುಟಿತ ಭಾಗ "ನನ್ನಯ್ಯ ... ದಿ ಪುರಾಣಾಂಕಿತವೀಸು ಕೃತಾರ್ಥ....ವಿಮಲಶಾಂಗನು ಚೆನ್ನಮಲ್ಲಿಕಾರ್ಜುನ ಸಮಾರಾಧ್ಯ ಗುರುಮೂರ್ತಿ ಪುಷ್ಪಗಿರಿಯ ಚೆನ್ನಮಲ್ಲೇಶ್ವರನ ಕರ ಕಮಲೋದ್ಭವನಾದ ಮಹಾಗುಣಯುತ...ಹಿತ ಸತ್ಪಾತ್ರ ದಾನಂಗಳೊಳತಿ ಹಿರಿಸಾ [illegible] ಚೆನ್ನಮಲ್ಲಿಕಾರ್ಜುನ [illegible] ಭೂಸುತನ" ಎನ್ನುವ ಭಾಗದಿಂದ ಈತನ ಗುರು ಚೆನ್ನಮಲ್ಲಿಕಾರ್ಜುನ ಎಂದು ಊಹಿಸಬಹುದು.

---

1 ನನ್ನಯ್ಯನನ್ನು ಕುರಿತು ಮೇದಿನೀರಾಯ ಎನ್ನುವವನ ಕೃತಿಯೊಂದಿದೆ. ಇದರಲ್ಲಿ ಆದಿ ಮತ್ತು ಅಂತ್ಯಭಾಗ ಮಾತ್ರ ಬೇರೆ ಇದ್ದು ಕೃತಿಪೂರ್ತಿ ಅಲ್ಲಲ್ಲಿ ಸ್ವಲ್ಪ ಬದಲಾವಣೆಗಳೊಂದಿಗೆ ಪರ್ವತದೇವನ ಕಾವ್ಯವೇ ಆಗಿದೆ. ಪರ್ವತದೇವ ಗುರು [illegible] ಶಬ್ದಗಳು [illegible] ಕೈಬಿಡಲಾಗಿರುವುದರಿಂದ [illegible] ಆಗಿದೆ.

2 ಕರ್ನಾಟಕ ಕವಿಚರಿತೆ–ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1973. 391.

ಈತನ ಸ್ಥಳ ರಾಮನಾಥಪುರ ಅಲ್ಲ ರಾಮಶಿವಪುರ. ಕೃಷ್ಣಾನದಿಯ ಎಡತೀರದ ಇರುವ ಶಿವಪುರ, ಇದು ರಾಮತೀರ್ಥಪುರ ಅಥವಾ ರಾಮಶಿವಪುರ ಎಂದಾಗಿರಬಹುದು. ಕಲ್ಬುರ್ಗಿ ಜಿಲ್ಲೆ ಶಹಪುರ ತಾಲ್ಲೂಕಿನಲ್ಲಿರುವ ಈ ಶಿವಪುರ ಅದೇ ಕಲ್ಬುರ್ಗಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮುದ್ದಾಪುರ (ಮುದೇನೂರು)[1] ಕ್ಕೆ ಎದುರಾಗುತ್ತದೆ. "ಜೆಲ್ಲಿಪತ್ತದ ಬಸದೀಶಸಭಾಪತಿಯಪ್ಪ ನಲ್ಲೀಶ ಮುದ್ದಾಪುರಾಧೀಶ ರಾಮನಾಥ ಪ್ರಸನ್ನ ರಾಮೇಶ್ವರದೇವ ನಿರೂಪದಿಂ" ಎಂದಿದ್ದು ಬರುವ ಜೆಲ್ಲಿಪತ್ತದ ಬಸದೀಶ ಎಂಬುದು ಬಸವನ ಇಂದಿನ ಜಾಲಿಯಾಳ (ವಿಜಾಪುರ ಜಿಲ್ಲೆ) ಆಗಬಹುದು. ಇದು ಮುದೇನೂರಿಗೆ ಸು. 12 ಮೈಲಿ ದೂರದಲ್ಲಿದೆ. ಒಟ್ಟಿನಲ್ಲಿ ದಾಸಿಮಯ್ಯ ಕಲ್ಬುರ್ಗಿ ಜಿಲ್ಲೆಯವನಾಗಿದ್ದು ಅಲ್ಲಿನ ರಾಮ ಶಿವಪುರಕ್ಕೆ ಸೇರಿದವನು. ಈತ ನಡುಗನ್ನಡ ಚಂಪೂಕಾವ್ಯವನ್ನು ಬರೆದಿದ್ದಾನೆ. ಅಲ್ಲಿನ ಭಾಷಾಪ್ರಯೋಗದ ದೃಷ್ಟಿಯಿಂದ "ಈತ ಸು. 1650ಕ್ಕೆ ಸೇರಿದವನು" ಎನ್ನುವ ಕವಿ ಚರಿತ್ರೆಕಾರರ ಅಭಿಪ್ರಾಯವನ್ನು ಒಪ್ಪಬಹುದು. ಕಾವ್ಯಾರಂಭದಲ್ಲಿ ಬಸವಣ್ಣ, ಅಲ್ಲಮ ಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮ, ಮುಸುಟೆಯ ಚೌಡಯ್ಯ, ಉದ್ಭಟ, ಹಲಾಯುಧ, ದಾಸ, ಕೇಶಿರಾಜ ಮತ್ತು ಪ್ರಸಿದ್ಧ ಪುರಾತನರನ್ನು ಸ್ತುತಿಸಿದ್ದಾನೆ.

ಕಥಾಸಾರ

ದಾಸಿಮಯ್ಯ ಶಿವಪುರಕ್ಕೆ ಮೊದಲು ಕಲ್ಯಾಣ. ಅಲ್ಲಿಗೆ ಶಿವನ ನಿಯಮದಿಂದ ಬಸವ- ಬಿಜ್ಜಳರ ಅನೇಕ ಜನಾಂಗ ಬಾಧಿಸಿದರು. ಹರಿಕೇಶನೆ. ಹಿಂಪ್ರದೇಶದಲ್ಲಿ ಅಲ್ಲಿನ ಜನ ನಿರತರಾಗಿದ್ದರು. ನನ್ನಯ್ಯನು ಅದೃಶ್ಯದಲ್ಲಿ ನೀಡಿದ ಸದ್ಗುರುಭಕ್ತಿಯನ್ನು ಶಿವಶರಣರಿಗೆ ಹರಿಸಲು ಬಸವಣ್ಣನಿಗೆ ಶಿವನು ಮತಿಯನ್ನಿತ್ತನು.

---

1 ದೇವರ ದಾಸಿಮಯ್ಯನು ಜನಿಸಿದ ಗ್ರಾಮವು ಮುದೇನೂರು. [illegible] 30 [illegible] [illegible]. ಇದು [illegible] ಗ್ರಾಮದಲ್ಲಿ ಈ [illegible] ಪುರಾತನ [illegible]. ಈ [illegible] ರಾಮನಾಥ ದೇವಾಲಯವೇ [illegible]. [illegible] ಇದಾದರೂ ಮುಖ್ಯವಾದುದು. ಈ ಗ್ರಾಮದಲ್ಲಿ ಅನೇಕ ಶಿಲಾಶಾಸನಗಳಿವೆ. ಅವು [illegible] ಮೊದಲಾದ ರಾಜರವಿರುತ್ತವೆ. ಇವುಗಳಲ್ಲಿ ಈ ಗ್ರಾಮವು [illegible]. ಈ ಗ್ರಾಮದಲ್ಲಿರುವ ರಾಮತೀರ್ಥ, ಲಕ್ಷ್ಮಣ [illegible] [illegible].

ದೇವರ ದಾಸಿಮಯ್ಯನ ವಚನಗಳು.

ಫ. ಗು. ಹಳಕಟ್ಟಿ. ಪುಟ 2–3, 1955

ಒಂದು ದಿನ ಭಕ್ತಿ-ಜ್ಞಾನ-ವೈರಾಗ್ಯವೆಂಬ ತ್ರಿವಿಧರತ್ನ ಪ್ರಸಾದಕಾರಣವಾಗಿ ಬರುತ್ತಿದೆಯೋ ಎನ್ನುವಂತಿದ್ದ ಮೂರು ಜನರನ್ನು ಬಸವಣ್ಣ ಕಂಡನು. ಶರಣಗಣಮೋಹಿನಿ ಅವರನ್ನು ಎದುರುಗೊಂಡು ವಂದಿಸಿ-ಸ್ತುತಿಸಿ-ವಿಭೂತಿ ವೀಳೆಯವನ್ನು ತಂದು ಮುಂದಿರಿಸಿ ಕಲ್ಯಾಣಪಟ್ಟಣಕ್ಕೆ ಕರೆತಂದನು. ದಾರಿಯಲ್ಲಿ ಶರಣತಿಂಥಿಣಿ ತಮ್ಮಲ್ಲಿ ತಾವು ' ಈ ಊರ್ಯನಲ್ಲಿ ಶಿರಕಪ್ಪು-ಶರೀರ ಕೆಂಪು ಈ ಊರ್ಯನಲ್ಲಿ ಶರೀರಕಪ್ಪು-ಶಿರ ಕೆಂಪು ಧರೆಯಲ್ಲಿ ಇದು ವಿಚಿತ್ರ. ಇದನ್ನು ಕೀರ್ತಿಸುವ ರೀತಿ ಏನು ಎಂದು ಮಾತನಾಡಿಕೊಂಡರು. ಇದನ್ನು ತಿಳಿದ ಬಸವಣ್ಣ ಆ ಚಿತ್ರತರ ಕಥೆಯನ್ನು ಹೇಳತೊಡಗಿದನು.

ಮೇದಿನಿಗೆ ದಕ್ಷಿಣದ ಪ್ರಾಂತ್ಯದ ದೇಶದಲ್ಲಿ ಕರ್ಣಾಟಕಾಪುರವಿದೆ. ಸುಜ್ಞಾನಾಧೀಶ್ವರರು ಅಲ್ಲಿಯವರು ಎಂದು ಪ್ರಾರಂಭಿಸಿದಾಗ ಸಭೆಯಲ್ಲಿದ್ದ ಸುಜ್ಞಾನಿಗಳು ನಾನು ಬೇಡನಿಗೆ ಅರಣ್ಯದಲ್ಲಿ ಬೋಧಿಸಿದುದನ್ನು ಹೇಳುತ್ತಾನೆ ಎಂದು ಆನಂದಿಸಿದರು. ನನ್ನಯ್ಯನು ಕಾಡಿನಲ್ಲಿ ನಾನು ಮಾಡಿದ ಗುರುಸೇವೆಯನ್ನು ಶರಣರಿಗೆ ಬಸವಣ್ಣ ತಿಳಿಸುತ್ತಾನೆ ಎಂದು ದುಗುಡದಿಂದಿದ್ದನು.

ಶಿವಜ್ಞಾನಿಗಳೆಂಬ ಹಿರಿಯರು ಸುಜ್ಞಾನಿಗಳಿಗೆ ಪುರಾತನ ಶರಣರ ಹಿರಿಮೆಯನ್ನು ಕಲ್ಯಾಣದ ಶಿವಭಕ್ತರ ಭಕ್ತಿದಾಸೋಹವನ್ನು ಹೇಳಿದರು. ಸುಜ್ಞಾನಿಗಳು ಇದರಿಂದ ಕಿವಿವೇಟೆಗೊಂಡು ಭಕ್ತಿ ಕಂಪಿತರಾಗಿ ಚನ್ನಬಸವ ದಂಡಾಧೀಶ್ವರನೊಳಗಾದ ಮಹಾಗಣಗಳನ್ನು ನೋಡಲು ಮನಸ್ಸು ಮಾಡಿ ಕಲ್ಯಾಣಕ್ಕೆ ಹೊರಟರು.

ದಾರಿಯಲ್ಲಿ ಭಯಂಕರ ಕಾನನ ಅಡ್ಡಬಂದಿತು. ಅಲ್ಲಿಯಾದರೋ ಆಸೆಯೆನ್ನುವ ಮರದ ಕೊಂಬೆಗಳನ್ನು ಬಳಸಿದ ರೋಷದ ಬಳ್ಳಿಗಳು. ಜ್ಞಾನ ಎನ್ನುವ ಚಂದ್ರ ಸೂರ್ಯರ ಕಾಂತಿಯನ್ನು ಒಳಗೆ ಹೋಗಲು ಬಿಡದೆ ಇರುವ ಮೋಹ ಎನ್ನುವ ತಮ ಪಾಪ ಎನ್ನುವ ಅಸಂಖ್ಯಸರ್ಪದಿಂದ ವಿಶೇಷ ಭೀತಿಯುಂಟು ಎಸೆಯುತ್ತಿದೆ. ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯ ಎನ್ನುವ ಸಿಂಹನಾದ. ಆನೆ, ಹುಲಿಯು ಸ್ತೋಮ. ಹಂದಿ ಮಹಿಷಗಳು ಕಾನನವನ್ನು ಹೊಕ್ಕವರನ್ನು ಯಮಪುರಕ್ಕೆ ಕಳಿಸುತ್ತಿವೆ.

ಪಾಪವೆ ರೂಪವಾದ ಅರಣ್ಯ ಎನ್ನುವ ದೇಶಕ್ಕೆ ದುರ್ಗತಿಯೆನ್ನುವ ಮಾಲಿಂಗತನು ಅರಸ. ಸುಜ್ಞಾನವೆಂಬ ಹಗೆಯನ್ನು ಹೊಡ್ಡಲಿಯೆ ಎನ್ನುವ ಬಲ್ಪು ಆಪನದು. ಅಂತಹ ಭಯಂಕರ ಅರಣ್ಯದಿಂದ ಇಬ್ಬರು ಬಂದು ಸುಜ್ಞಾನಿಗಳಿಗೆ ಎದುರಾಗಿದ್ದರು. ಭಯಭೀತರಾದ, ನೆಯ್ಯಗಾಯದಿಂದ ರಕ್ತಸೋರುತ್ತಿರುವ, ಕೆದರಿದ ಕೇಶದ ಅವರು ಸುಜ್ಞಾನಿಗಳ ಪಯಣ ಎಲ್ಲಿಗೆ ಎಂದರು. ಕಲ್ಯಾಣದ ಸದ್ಭಕ್ತರನ್ನು ನೋಡಲು ಹೋಗುತ್ತೇನೆ ಎಂದು ಸುಜ್ಞಾನಿಗಳು ಹೇಳಿದರು.

ಇದಕ್ಕೆ ಪ್ರತಿಯಾಗಿ ಆ ಇಬ್ಬರು, ಪಯಣ ಅನುಚಿತ. ಇಲ್ಲಿ ಬೇಡರ ಮಾತಂಗನು ನಿದ್ದಾನೆ. ನಾವು ಎಂಟು ಮಂದಿ ಇಲ್ಲಿಗೆ ಬಂದೆವು. ಆರು ಜನರನ್ನು ಆತ ಕೊಂದಿದ್ದಾನೆ ಎಂದರು. ಸುಜ್ಞಾನಿಗಳ ಜೊತೆಯಲ್ಲಿದ್ದ ದಾಸೋಹಿಗಳು ಮುಂದೆ ಹೋಗಲು ಹೆದರಿದರು. ಸುಜ್ಞಾನಿಗಳು ಅಳಿವವನು ಎಂದಿದ್ದರೂ ಉಳಿಯದು ಎಂದು ಭಾವಿಸಿದರು.

ಶಿವಾನುಭವಿಗಳೊಡನೆ [illegible] ಕಾಣಲು ಧೃತಿಯಿಂದ ನಡೆದರು. [illegible] ಯೋಜನ [illegible] ಕಾಡಿನಲ್ಲಿ [illegible] ಹಸುವೆಸ್ತಾಂತೆ. ನೂರೆಂಟುವಕ್ರದಂಥ ಮುಖ. ಕೆಂಜುರಿ ಗಣ್ಣು. [illegible] ಭೀತಿ [illegible] ಎದುರಾದನು. ಹಿಡಿದ ಬಿಲ್ಲು, ಬಾಣಗಳು, ಕಟ್ಟು [illegible] ದಾರಿಯಲ್ಲಿ ಅಡ್ಡಲಾದನು. ಇಷ್ಟು ದಿವಸವರೆಗೆ ನನ್ನ ಇದಿರು ಯಾರೂ ಬಂದಿಲ್ಲ. ಇವನು ಯಾರು ಎಂದು ನೋಡುತ್ತ ನೋಡುತ್ತ ಆ ಬೇಡನ ಪಾಪ ಎಷ್ಟು [illegible]. [illegible] ಚಿತ್ತ [illegible] ಬಗೆಯಲ್ಲಿ [illegible]. ಬಹಳ ಕಾಲದಿಂದ ಗುಹೆಯಲ್ಲಿ [illegible] ಕತ್ತಲೆ [illegible] ದೀಪವೊಂದರಿಂದ ನಾಶವಾಗುವಂತೆ ಆತ [illegible] ದನು. ಸುಜ್ಞಾನಿಗಳು ಆತನನ್ನು ಸಮೀಪಿಸಿ ಕಾಕತಾಳ ನ್ಯಾಯದಂತೆ, ಘುಣಾಕ್ಷರ ಚ್ಛಾಯೆಯಂತೆ ವಿಭೂತಿಯನ್ನು ಕೊಟ್ಟರು.

ಆತ ಸುಜ್ಞಾನಿಗಳಲ್ಲಿ ವಿನಯದಿಂದ ಮಾತನಾಡಿ ಹೆಸರು, ಊರು, ಕಾರ್ಯ ವನ್ನು ಕೇಳಿದನು. ಬಿನ್ನಹೊರೆಯನ್ನು ಪರೀಕ್ಷಿಸಿದನು. ಉಪಕರಣಗಳನ್ನು ಬಿಟ್ಟು ಉಪದೇಶಕ್ಕೆ [illegible] ಲಿಂಗವನ್ನು ಕುರಿತು ಪ್ರಶ್ನಿಸಿದನು. ಭಕ್ತಿ ಮಾರ್ಗದಲ್ಲಿ ಬೇಡನ ಮನ [illegible] ಸುಜ್ಞಾನಿಗಳು ಅರಿತರು. ದೇವರ [illegible] ವಿವರದಿಂದ ಹೇಳಿದರು. ಲಿಂಗಪೂಜೆಯಿಂದ [illegible] ದೊರೆಯುತ್ತದೆ, ಈ ಭುವನಕ್ಕೆ ಅರಸನಾಗು[illegible] ಎಂದಾಗ ಮಾತಂಗ[illegible] ಸಂತೋಷದಿಂದ ಅದನ್ನು ತೆಗೆದುಕೊಂಡನು. ಆಗ ಸುಜ್ಞಾನಿ ಗಳು ಇದನ್ನು ಗುರು ಕೊಡಬೇಕು. ಬಲವಂತವಾಗಿ ತೆಗೆದುಕೊಂಡರೆ ಸಾಯುತ್ತಾರೆ ಎಂದರು. ಆ ಮಾತು ಕಿವಿಗೆ ಬೀಳಲು ಮಾತಂಗ[illegible] ಭೀತಿಗೊಂಡನು. "ಗುರು ಎನ್ನು ವವನು ಯಾರು? ಅವನ ಊರು ಯಾವುದು? ಇಲ್ಲಿಂದ ಎಷ್ಟು ದೂರ" ಎಂದು ಪ್ರಶ್ನಿ ಸಿದನು. "ಗುರುವನ್ನು ಕರೆತಂದರೆ ನಿನ್ನನ್ನು ಮನ್ನಿಸಿಬಿಡುತ್ತೇನೆ" ಎಂದು ಮಾತಂಗ[illegible] ಹೇಳಿದನು.

ಸುಜ್ಞಾನಿಗಳು "[illegible] ಕೇಳಿದ ಗುರುವನ್ನು ಇಲ್ಲಿಯೇ [illegible]. ನಿನ್ನ ಹೆಸರು ಕುಲ ಕಾಯಕ ಏನು? ಈ ಕಾಡಿನಲ್ಲಿ ಏಕೆ ಇದ್ದೀಯೆ?" ಎಂದರು. ಆಗ ಬೇಡ "ನನ್ನ ಹೆಸರು ಮಾತಂಗ[illegible]. ನಿಷಾದಕುಲ. ಕಾಯಕ ಬೇಟೆ [illegible]. [illegible] ಕ್ಕೆ ಅಧಿಪತಿ" ಎಂದನು. ಆತನಿಗೆ ಬೋಧಿಸಲು ಸುಜ್ಞಾನಿಗಳು [illegible]. [illegible] ಪರಸ್ಪರ ಹೀಗೆ ಮಾತನಾಡಿದರು.

"ನಿನಗೆ ಹೆಂಡಿರು ಮಕ್ಕಳುಂಟೆ ?—ಉಂಟು
ಎಲ್ಲಿದ್ದಾರೆ ? ಈ ವನದಲ್ಲಿ
ಎಷ್ಟು ದೂರ ? ಸಮೀಪ"

[illegible] ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಾ ಎಂದು [illegible] ಹೇಳಿದರು. ಸುಜ್ಞಾನಿಗಳ [illegible] ಮಾತಂಗ [illegible]. ಅವರು ಆತನಿಗೆ [illegible].

ಕನ್ನಗನನ್ನು ಊರಿಗೆ ಕಳಿಸಿದ ಕಥೆ

ಮಾತಂಗತನು ಆಡುಕೊಂಯುನ ಒಬ್ಬನನ್ನು ಸುಜ್ಞಾನಿಗಳ ಮುಂದೆ ನಿಲ್ಲಿಸಿದನು. "ಈತ ತನ್ನ ಊರಿನವ, ಸಭ್ಯ, ಹುಸಿಯುವನನಲ್ಲ. ನನ್ನ ಹೆಸರನ್ನು ಇವನೇ ಇಟ್ಟವನು. ಈತನ ಹೆಸರು ಕನ್ನ" ಎಂದನು.

ಆತನನ್ನು ಕರೆದು ಸುಜ್ಞಾನಿಗಳು "ಮಾತಂಗನನ್ನು ಭೇಟಿಯ ನೆಪದಿಂದ ಬಂದ ಅರಸನ ಆಳುಗಳು ಕೊಂದರೆಂದು ತಿಳಿಸು. ಆತನ ಹೆಂಡಿರು, ಮಕ್ಕಳು, ಪ್ರಿಯರ ನಡವಳಿಕೆಯನ್ನು ನನಗೆ ಬಂದು ಹೇಳು" ಎಂದರು. ಅವರು ಹೇಳಿದಂತೆ ಕನ್ನಗ ಬಂದು ನುಡಿಯಲು ಹೆಂಡತಿ ಮಕ್ಕಳ ಪೈತಿಕಕ್ಕೆ, ಜನಾಪವಾದಕ್ಕೆ, ವಿಸ್ಮಯಾತಃಕರಣನಾದನು. ಇತ್ತ ಸುಜ್ಞಾನಿಗಳು ಒಂದು ಗಳಿಗೆ ತಡವಾಗಿ ಮಾತಂಗತಮನನ್ನು ಊರಿಗೆ ಕಳಿಸಿದರು ಸತಿಸುತರನ್ನು ವಿಚಾರಿಸುವಂತೆ ತಿಳಿಸಿದರು. ಮಾತಂಗತನು, ಊರಿಗೆ ಬಂದು ಕಂಡದ್ದು ಬರಿದಾದ ಮನೆ. ತನಗಿಂತ ಮೊದಲೇ ಅಲ್ಲಿಗೆ ಹೋಗಿದ್ದ ಕನ್ನಗನೊಡನೆ ಸುಜ್ಞಾನಿಗಳಲ್ಲಿಗೆ ಹಿಂದಿರುಗಿದನು. ಇಬ್ಬರೂ ನಮಸ್ಕರಿಸಿ ನಿಂತರು. ಸುಜ್ಞಾನಿಗಳು ನಡೆದುದೆಲ್ಲವನ್ನು ತಿಳಿಸುವಂತೆ ಕನ್ನಗನನ್ನು ಕೇಳಿದರು. ಆತ ಮಾತನಾಡಲಿಲ್ಲ. "ಏಕೆ" ಎಂದು ಸುಜ್ಞಾನಿಗಳು ವಿಚಾರಿಸಿದರು. ಮಾತಂಗತಮನ ಹೆಂಡತಿಯ ದುರ್ಗುಣವನ್ನು ಹೇಳಿದರೆ ಆತ ನನ್ನನ್ನು ಕೊಲ್ಲದೆ ಬಿಡನು ಎಂದನು. ಆಗ ಸುಜ್ಞಾನಿಗಳು ಇದಕ್ಕೆ ನಿದರ್ಶನವಾಗಿ ಒಂದು ಕಥೆಯನ್ನು ಹೇಳಿದರು.

ಇದ್ದುದನಾಡಿ ಗುದ್ದಿಸಿಕೊಂಡವನ ಕಥೆ

ಸರ್ವಜ್ಞಪುರದ ಕೆರೆಯಲ್ಲಿದ್ದ ಒಬ್ಬ ಬ್ರಾಹ್ಮಣನನ್ನು ಇಬ್ಬರು ಯುವಕರು ಚೆನ್ನಾಗಿ ಗುದ್ದಿ ಊರಿಗೆ ಕರೆದುಕೊಂಡು ಹೋದರು. ಕರುಣಗಳ್ಳಿನ ಚಟ್ಟಿಯ ಮುಂದೆ ನಿಲ್ಲಿಸಿದರು. ಆ ಊರಿನ ಮಹಾಜನರಿಗೆ ಕೃಷ್ಣಭಟ್ಟನ ಮಗಳು ದೇವಕಿಯನ್ನು ಈತ ಬೈದನು. ಇದಕ್ಕೆ ಸಾಕ್ಷಿ ಮಲ್ಲಿಸೆಟ್ಟಿಯರ ಮನೆಯ ದಾಸಿ ಎಂದರು. ಆಗ ಬ್ರಾಹ್ಮಣನು ನಾನು ಬೈದುದನ್ನು ಕರೆಸಿ ಎಂದು ಕೋರಿದನು. ಅವಳು ಬಂದಾಗ ಬ್ರಾಹ್ಮಣನಿಂತೆಂದನು–ನಾನು ದೇಶಪರ್ಯಟನೆಗೆ ಬಂದವನು. ದಣಿವಾರಿಸಲು ಈ ಊರಿನ ಕೆರೆಯ ಏರಿಯ ಮರದ ತಣ್ಣೆಳಲಿನಲ್ಲಿ ಇದ್ದೆನು. ಈಕೆ ಇಬ್ಬರು ದಾಸಿಯರೊಡನೆ ಅಲ್ಲಿಗೆ ಬಂದಳು. ಆಗ ನಾನು ಇವಳೊಡನೆ—

"ಎಲೆ ತಾಯಿ ನಿಮ್ಮ ಪುರದಲ್ಲಿ ಸದ್ಧರ್ಮಮಾರ್ಗ ಸಲ್ಲುತ್ತದೆಯೆ? ಸತ್ಯದ ನುಡಿಗಳಿಗೆ ಆಲಿಸುವರೊ? ಪಾಲಿಸುವರೊ? ತಿಳಿಸು" ಎಂದೆನು. ಅದಕ್ಕೆ ಈಕೆ—

"ಅನ್ಯಾಯ ಅಧರ್ಮಗಳು ನಮ್ಮೂರಲ್ಲಿ ಮೊದಲಿಂದಲೂ ಇಲ್ಲ.
ಸತ್ಯವನ್ನು ಆಡಿದರೆ ಎಲ್ಲರೂ ಮನ್ನಿಸುತ್ತಾರೆ.
ನಮ್ಮ ಪುರದಲ್ಲಿ ಮನಸ್ಸಿನಲ್ಲಿ ಭಿನ್ನ ಮಾಡುವವರು ಇಲ್ಲ" ಎಂದಳು

ಈ ಮಾತನ್ನು ಸುಬಿ ಇವಳ ದೇಹಸ್ವಭಾವವನ್ನು, ಮಾತಿನ ಸವಿಯನ್ನು ತಿಳಿಯು ವುದಕ್ಕಾಗಿ

"ಬಿದ್ದ ಮೊಲೆಯವಳೆ, ಹೊರಪಾದ ಹಲ್ಲವಳೆ
ಕುರುಡಿ
ಗಂಡ ಹತವಾಗಿದ್ದ ಮುದಿಮುಂಡೆ
ವಿಶ್ವಮೂರ್ತಿಯ ಪುರದಲ್ಲಿ ನಿನಗೆ ನೆಂಟರಾರಿದ್ದಾರೆ?"

ಎಂದು ಇವ್ವನನ್ನು ಕೇಳಿದೆನು. ಈಕೆ ನಿಂತ ಹಾಗೆಯೇ ನೆಲಕ್ಕೆ ಬಿದ್ದಳು. ಹೊರ ಳಾಡಿ ಕಲ್ಲಿನಿಂದ ಹೊಡೆಯುತ್ತ ಬೆನ್ನಟ್ಟಿದಳು. ಇವನ ಜೊತೆಗೆ ಇನ್ನಿಬ್ಬರು ಸೇರಿಕೊಂಡು ಗುದ್ದಿ ನನ್ನನ್ನು ಈ ಸಭೆಗೆ ಎಳೆ ತಂದರು ಎಂದನು. ಎಲ್ಲರೂ ನಗೆಗಡಲಿನಲ್ಲಿ ಮುಳುಗಿ ದರು.

ಮತ್ತೆ ಆ ಮಹಾಜನಗಳು "ಎಲೆ ಪಾಪಿ, ಕೈನೆ. ನಿನ್ನಲ್ಲಿ ನೆಲಸಿದ ರೂಪವನ್ನು ಹೇಳಿದರೆ ಈತನಿಗೆ ಏಕೆ ಹೊಡೆಸಿದೆ" ಎಂದರು. ಆಕೆ ಅಳುಕಿ ಬ್ರಹ್ಮಣನಿಗೆ ನಮ ಸ್ಕರಿಸಿ ಹೋದಳು. ಇಬ್ಬರು ಪ್ರಾಣಿಗಳು "ನಾವು ಅರಿಯದೆ ಈಕೆಯ ಮೊರೆಗೋಸುಗ ಗುದ್ದಿದೆವೆಂದು ಭಯದಿಂದ ಹೇಳಿದರು." ಆಗ ಅಲ್ಲಿದ್ದ ಹಿರಿಯರೊಬ್ಬರು ಇವರು ಆ ಬ್ರಾಹ್ಮಣನನ್ನು ಕೊಲ್ಲದೆ ಬಿಟ್ಟದ್ದೇ ಹೆಚ್ಚೆಂದು ಹೇಳಿ ಒಬ್ಬ ಬ್ರಹ್ಮಚಾರಿ ಮತ್ತು ಒಂದು ಕೋಡಗದಿಂದ ಹಲವರು ಹತನಾದ ಕಥೆಯನ್ನು ಹೇಳಿದನು—

ಬ್ರಹ್ಮಚಾರಿ ಮತ್ತು ಕೋಡಗನಿಂದ ಅನೇಕರು ಹತವಾದ ಕಥೆ

"ಘನವಾದ ಮಳೆಗಾಳಿಯಿಂದ ಹೊಳೆ ತುಂಬಿತು. ಜನರನ್ನು ದಾಟಿಸಲು ಅಲ್ಲಿಗೆ ತೆಪ್ಪ ಬಂದಿತು. ಒಬ್ಬ ಬ್ರಾಹ್ಮಣ ಮಾಣಿಯೊಡನೆಯೂ, ಒಬ್ಬ ಜೋಗಿ ಒಂದು ಕೋತಿ ಯೊಡನೆಯೂ ತೆಪ್ಪವನ್ನೇರಿದರು. ಇದನ್ನು ಕಂಡ ಭಾವುಕನೊಬ್ಬ ಬ್ರಾಹ್ಮಣ ಹುಡುಗ ಮತ್ತು ಜೋಗಿಯ ಈ ಕೋತಿ ಒಟ್ಟಿಗೆ ಪ್ರಯಾಣ ಮಾಡಿದರೆ ಸಾವು ತಪ್ಪದು ಒಬ್ಬರಾದ ಮೇಲೆ ಒಬ್ಬರು ಪ್ರಯಾಣ ಮಾಡಲಿ ಎಂದನು. ಅಂಬಿಗ ಒಬ್ಬರಿಗಾಗಿ ನಾನು ಮತ್ತೆ ಹಿಂದಿರುಗುವುದಿಲ್ಲ ಎಂದನು. ಭಾವುಕ ತಡೆಗಳಿದನು ಹಾಗೆ ಪ್ರಯಾಣ ಮಾಡುವುದಾದರೆ ಆ ಬ್ರಾಹ್ಮಣ ಹುಡುಗ ಮತ್ತು ಕಪಿಯ ಹೆಡಗುಡಿಕಟ್ಟಿ ಹರಿಗೋಲು ಮುಂದೆ ಹೋಗಲಿ ಎಂದನು. ಹಾಗೆ ಮಾಡಿ ಹರಿಗೋಲು ಮುಂದೆ ಹೋಗುತ್ತಿತ್ತು. ಬ್ರಾಹ್ಮಣರ ಹುಡುಗನ ಮನಸ್ಸು ಚಂಚಲವಾಯಿತು. [illegible] ಅಕಸ್ಮಾತಾಗಿ ತೆಪ್ಪದ ಬಿದಿರು ಸಿಗುರನ್ನು ಹಲ್ಲಿಂದ ಕಚ್ಚಿ ತೆಗೆದು ಯಾರಿಗೂ ಕಾಣದಂತೆ ಕೋಡಗದ [illegible] ಏರಿಸಿದನು. ಕೋತಿ ಹಲ್ಲು ಕಿರಿದು ಗಜರಿಗರ್ಜಿಸಿ ಜನರ ಮೇಲೆ ಬಿದ್ದಿತು. ಅವರೆಲ್ಲ ಹೆದರಿ ತೆಪ್ಪದ ಒಂದು ಕಡೆ ಸೇರಿದರು. ತೆಪ್ಪ ಜೋಲಿತು. ನೀರಿಗೆ ಬಿದ್ದವರಲ್ಲಿ ಹಲವಾರು ಮುಳುಗಿದರು. ಕೆಲ ವರು ಈಜುತ್ತ ಮುಳುಗುತ್ತ ದಡಿಗೆ ಬಂದರು. [illegible] ಎಲ್ಲರೂ ಭಾವುಕನನ್ನು [illegible]

ತ್ತಮನೆಂದು ಭಾವಿಸಿ ನಿಂದಿಸಿದನು." ಹೀಗೆ ಹೇಳಿ ವಿಶ್ವಪತಿಗಳು ಗುದ್ದು ತಿಂದ ಬ್ರಾಹ್ಮಣ
ನನ್ನು ಹತ್ತೆಂಟು ದಿನ ಇಟ್ಟುಕೊಂಡು ಉಪಚರಿಸಿ ಊರಿಗೆ ಕಳುಹಿಸಿದರು. ಆ ಬ್ರಾಹ್ಮ
ಣನ ಗತಿ ಈ ಕನ್ನುಗನಿಗೆ ಆಗಬಾರದೆಂದು ಸುಜ್ಞಾನಿಗಳು ಹೇಳಿದರು. ಅದಕ್ಕೆ ಮಾತಂಗ
ತನುನೆಂದನು—

"ಕನ್ನುಗ ಅಂಜಬೇಡ. ನೀನು ನನಗೆ ಕೆಟ್ಟವನೆ? ನನ್ನವರು ನನಗೆ ಮಾಡಿದುದನ್ನು
ಮರೆ ಮಾಚದೆ ಈ ಮುನಿಯ ಮುಂದೆ ಹೇಳು." ಆಗ ಕನ್ನುಗನು ಹೇಳ ತೊಡಗಿ
ದನು.

ನಾನು ಊರಿಗೆ ಹೋಗಿ ಅರಸನ ಕಡೆಯವನು ಮಾತಂಗತನುವನ್ನು ಸುತ್ತಿದರು.
ಅವರೊಡನೆ ಹೋರಾಡುವಾಗ ಮಾತಂಗತನು ಸತ್ತ ಎಂದೆನು. ಅವರೆಲ್ಲ ಸತ್ತವನು
ಹೇಗೂ ಸತ್ತ. ಆತನ ಆಳುಗಳು ನನ್ನನ್ನು ಮುತ್ತುವ ಮೊದಲೇ ಓಡೋಣವೆಂದು
ದಟ್ಟವಾದ ಅರಣ್ಯಕ್ಕೆ ಓಡಿದರು. ಈತನ ಹೆಂಡತಿ ಮಾಲೆ—"ನನ್ನ ಬಯಕೆ ಈಡೇರಿತು
ತಮ್ಮನ ಸಾವಿನಿಂದ ನನಗೆ ಸೌಖ್ಯವುಂಟಾಯಿತು" ಎಂದು ಮುತ್ತುಗನನ್ನು ಅಪ್ಪಿ ನಲಿ
ದಾಡುತ್ತ ಕೂಡುವ ಬಯಕೆಯಿಂದ ಏಕಾಂತಕ್ಕೆ ಹೋದಳು. ಅದನ್ನು ಸೈರಿಸಲಾರದೆ
ನಾನು ಮುನಿದು "ಬೇಟೆಯಾಡಿ ನಿತ್ಯವೂ ಮೃಗವನ್ನು ತಂದು ನಿನಗಿತ್ತನು. ಆತನ
ಸಾವಿಗೆ ನೋಯದೆ ಈತನ ಜೊತೆ ಹೋಗುವುದು ನ್ಯಾಯವೆ? ಆತನ ಹೆಣವನ್ನು ಸುಡು"
ಎನ್ನಲು ಮಾಲೆ ಹೀಗೆಂದಳು—"ನಿನಗೇಕೆ ಅಷ್ಟೊಂದು ಅಳಲಿಕೆ ಆತ ಮಾಡಿದ ಅನ್ಯಾ
ಯಕ್ಕೆ ಆತನನ್ನು ಕೊಲ್ಲುವುದು ತಪ್ಪಲ್ಲ ಎಂದಳು; ಲೋಕ ನಿನ್ನನ್ನು ಕಂಡು ನಿಂದಿಸದೆ"
ಎಂದಾಗ "ಮುತ್ತುಗನ ಹೆಂಡತಿಯಾದ ನನ್ನನ್ನು ತನು ಒತ್ತಾಯದಿಂದ ಎಳೆದು
ಕೊಂಡನು. ನನ್ನ ಗಂಡನೊಡನೆ ನಾನು ಹೋದರೆ ಲೋಕವೇಕೆ ಆಡೀತು" ಎಂದಳು.
"ಇದು ಬುದ್ಧಿಯಲ್ಲ, ನೀನು ಬಂದಲ್ಲಿಯಿರಬೇಕು, ಇದನು ಶಾಸ್ತ್ರವೇ" ಎಂದು ಇದ್ದು
ದನ್ನು ಹೇಳಿದಾಗ ಇಬ್ಬರೂ ಸೇರಿ ನನ್ನನ್ನು ಗುದ್ದಿದರು. ತಲೆ ತಪ್ಪಿಸಿಕೊಂಡು ಓಡಿ
ಬಂದೆ ಎಂದನು.

ಇದನ್ನೆಲ್ಲ ಕೇಳಿದ ಮಾತಂಗತನು ಉಗ್ರಾಯುಧವನ್ನು ಜಡಿದನು. "ಪಾತಕಿತ್ತಿ
ಯನ್ನು ಕೊಲ್ಲುತ್ತೇನೆ ಎಂದನು. ನನ್ನ ಸ್ಥಿರದಲ್ಲಿ ಬಾಳುವವರು ಯಾರು? ಮಾರೆ
ಮುತ್ತುಗನನ್ನು ಒಳಕೊಂಡ ಊರನ್ನು ಇರಿದು ಸೂರೆಗೊಳ್ಳುತ್ತೇನೆ" ಎಂದನು. ಸುಜ್ಞಾನಿ
ಗಳು ಆತನಿಗೆ—"ಏಕೆ ಇಷ್ಟು ಉಗ್ರನಾಗುವೆ? ನಿನ್ನ ಮಾವು ನಿಲ್ಲುವವರು ಇಲ್ಲಿ ಯಾರಿದ್ದಾರೆ?
ಸೈರಿಸು. ಬಲೆಹರಿದು ಓಡಿದ ಮೃಗ ಬೆನ್ನಟ್ಟಿದರೆ ಸಿಕ್ಕುತ್ತದೆಯೆ? ಸಮಯ ಸಾಧಿಸಿ
ಅವರನ್ನು ಕೊಲ್ಲಲು ಯೋಚಿಸು" ಎಂದು ನಾನಾ ದಾನ ಭೇದ ದಂಡಗಳನ್ನು ತಿಳಿಸಿದರು.
ಭೇದ, ಪರೀಕ್ಷೆ, ವಿಶ್ವಾಸ, ವಂಚನೆ, ಮಿತ್ರಕಾರ್ಯ ಎನ್ನುವ ಐದು ತಂತ್ರಗಳನ್ನು ಹೇಳಿ
ದರು. ಮಿತ್ರಭೇದನದ ಪ್ರಸಂಗವನ್ನು, ರಾವಣ—ಕೀಚಕರ ಸಂಗತಿಯನ್ನು ತಿಳಿಸಿದರು
ಅನಂತರ ಮಿತ್ರಸಂಪದವನ್ನು ಬಯಸಿದ ಹೊಗಸನ್ನು ತಿಳಿಸುವ ಬಗ್ಗೆ ಗಂಧಮಿತ್ರ ಕಥೆಯನ್ನು
ಹೇಳತೊಡಗಿದರು.

ಯಶೋಧರನ ಕಥೆ

ಎಣೆಸುರೆಯಾದರೆ ಸ್ನೇಹಸದ ಯಶೋಧರ–ಅಮೃತಮತಿಯರು. ಊಟದಲ್ಲಿ ವಿನೋದದಲ್ಲಿ ಸಂಗೀತ ನೃತ್ಯ ನಾಟಕಗಳಲ್ಲಿ ಎಡೆಬಿಡದೆ ಇದ್ದರು. ಅವರ ಸ್ನೇಹಬಂಧದ ತೀವ್ರತೆಯನ್ನು ಯಾರು ತಾನೇ ವರ್ಣಿಸುವರು. ಹೀಗಿರಲು ಯಶೋಧರನ ಅಶ್ವನಿವಾಸಕ್ಕೆ ಕುಷ್ಠರೋಗದಿಂದ ಕೆಟ್ಟ–ಮೂಗು. ಕೈ–ಕಾಲು ಮುರುಟಿ ದೇಹ ದುರ್ವಾಸನೆಯಿಂದ ಕೂಡಿದ ಒಬ್ಬ ದೇಶವನ್ನೆಲ್ಲ ಸುತ್ತಿ ಒಡಲಿಗೆ ಅನ್ನವನ್ನು ಕಾಣದೆ ಬಂದನು. ಗೋವರು ಉಂಡು ಬಿಟ್ಟುದನ್ನು ಉಂಡು, ತೊಟ್ಟು ಬಿಟ್ಟುದನ್ನು ತೊಟ್ಟು ಪಾಪವೆ ರೂಪಾದ ಭಾವದಲ್ಲಿದ್ದನು. ಆತ ಒಂದು ದಿವಸ ಗಾನ ವಿದ್ಯೆಯಿಂದ ಸುಖಿಸುತ್ತಿದ್ದನು. ಶಯನದಲ್ಲಿ ಅಮೃತಮತಿ ಆತನ ಗಾನಕ್ಕೆ ಮನಸೋತಳು. ನೇರವಾಗಿ ಆತನಲ್ಲಿಗೆ ಬಂದಳು. ಮನ ಹೇಸದೆ ಆತನಲ್ಲಿ ಕೂಡಿದಳು.

ತುರಗ ಶಾಲೆಯಲ್ಲಿ ಅಮೃತಮತಿ ಕುಷ್ಠನೊಡನೆ ಕೂಡಿರುವಾಗ ಯಶೋಧರ ಭೂಪನಿಗೆ ಎಚ್ಚರವಾಯಿತು. ಹಾಸಿಗೆಯಲ್ಲಿ ಹೆಂಡತಿ ಇಲ್ಲ. ಖಡ್ಗವನ್ನು ಹಿಡಿದು ಬಾಗಿಲು ತೆರೆದ ನೇರಕ್ಕೆ ಸರಿಯಾಗಿ ನಡೆ ತಂದು ತುರಗ ಶಾಲೆಯನ್ನು ಹೊಕ್ಕನು. ಅಲ್ಲಿ ಅವರಿದ್ದ ಅಂದವನ್ನು ಅರಿತನು. ಅವರನ್ನು ಕೊಲ್ಲಲು ನಿಶ್ಚೈಸಿ ಕತ್ತಿ ಎತ್ತಲು ವಿವೇಕ ಅಡ್ಡ ಬಂದಿತು. ಈತ ಗೋವ, ಕುಷ್ಠ. ಈತನೊಡನೆ ಇವಳನ್ನು ಕೊಂದರೆ ನನ್ನ ಕೀರ್ತಿಲತೆ ಮುರುಟುತ್ತದೆ ಎಂದು ರಾಜ ಭಾವಿಸಿದನು. ಈ ಕತ್ತಿ ಯುದ್ಧರಂಗದಲ್ಲಿ ಶತ್ರುಗಳನ್ನು ಕೊಲ್ಲಬೇಕೇ ವಿನಃ ಇವರ ಮೇಲಲ್ಲ. ಇವರಿಬ್ಬರನ್ನೂ ಕೊಂದರೆ ಲೋಕಾಪವಾದ ಬಂದು ನನ್ನನ್ನು ಯಶಃಕಾಂತೆ ಬಿಡುತ್ತಾಳೆ. ಪರಲೋಕದ ದುರ್ಗತಿ ಉಂಟಾಗುತ್ತದೆ ಎಂದು ಭಾವಿಸಿ ಅರಮನೆಗೆ ಬಂದನು. ಸರೋವರದ ತಾವರೆಯ ಮಧುವನ್ನು ಆಹಾರವಾಗಿ ತೆಗೆದುಕೊಳ್ಳುವ ಹಂಸ ಹರಿಯುವ ಬಚ್ಚಲಿನ ಹುಳುವನ್ನು ಬಯಸಿದಂತೆ ಅಮೃತಮತಿ ಕುಷ್ಠನೊಡನಿದ್ದಳು. ಹೆಂಗಸರನ್ನು ನಂಬಿದವನ ಇಹ ಪರಗಳು ಕೆಡುತ್ತವೆ ಎಂದು ಭಾವಿಸಿ ಯಶೋಧರ ತಪಸ್ಸಿಗೆ ಹೋದನು. ಈ ಕಥೆಗೆ [illegible] ಮನಸು ಕೀಳರಿದ ಆಸಕ್ತಿಯನ್ನು ಕಂಡು ಸುಜ್ಞಾನಿಗಳು ಇನ್ನೊಂದು ಕಥೆ ಹೇಳಿದರು

ಧನಸೇನಸೆಟ್ಟಿ ಕಥೆ

ಶ್ರಾವಸ್ತಿಪುರದ ವಿಜಯ ನೃಪಾಲನ ಓಲಗಕ್ಕೆ ತಳವಾರರು ಒಬ್ಬನನ್ನು ಕರೆತಂದು ಕಳ್ಳನೆಂದರು. ಪುರಾವೆ ಸಿಗದಿದ್ದುದರಿಂದ ಅವನನ್ನು ಕೊಲ್ಲದೆ ಒಂದು ಕಾಲು ಒಂದು ಕೈಯನ್ನು ಕತ್ತರಿಸಿ ಎಂದನು. ಪುರರಕ್ಷಕ ಈತ ಬಲುಗಳ್ಳನಾದುದರಿಂದ ಈತನ ನಡೆ ಉಡುಗಬೇಕೆಂದು ಎರಡು ಕಾಲನ್ನು ಬಲಗೈಯನ್ನು ಕತ್ತರಿಸಿ ಊರ ಹೊರಗೆ ನೂಕಿಸಿದನು. ನೋವನ್ನು ಸೈರಿಸಲಾರದೆ, ಸಾಯಲು ಅನುಗೊಡದ ಆತ ಧನಸೇನಸೆಟ್ಟಿಯ ಕಣ್ಣಿಗೆ ಬಿದ್ದನು. [illegible] ಮಕ್ಕಳು ಬಂಧುಬಾಂಧವರಿಲ್ಲದ ಸೆಟ್ಟಿ ಆತನನ್ನು ಕರೆತಂದು ಉಪಚರಿಸಿ ಮನೆಯ ಕಾವಲಿಗಿಟ್ಟನು. ಕಟ್ಟಿದ ಹುಲಿಯಂತಿದ್ದ ಆತನ [illegible] ಎಲ್ಲಾ

ಹೆದರಿ ನಡೆಯುತ್ತಿದ್ದರು. ಕೆಲವು ದಿನಗಳ ಮೇಲೆ ಸೆಟ್ಟಿ ವ್ಯಾಪಾರಕ್ಕೆ ಹೊರಟನು. ಜೊತೆಯಲ್ಲಿ ಬರುವೆನೆಂದ ಹೆಂಡತಿಗೆ ಹಿತವಾದ ಹೇಳಿ ಅವಳು ಮನೆಯಲ್ಲೇ ಉಳಿಯುವಂತೆ ಮಾಡಿದನು.

ಕೆಲವು ದಿನ ಕಳೆಯಿತು. ಅಂಗಹೀನನಾದರೂ ಮೋಟನ ರೂಪ ಯೌವನಗಳಿಗೆ ಧನಸೇನನ ಹೆಂಡತಿ ಮರುಳಾದಳು. ಆತನನ್ನು ಕಾಣುವ ಬಯಕೆಯಿಂದ ದಾಸಿಯರನ್ನು ವಂಚಿಸಿ ಒಂದು ರಾತ್ರಿ ಆತನಲ್ಲಿಗೆ ಬಂದಳು. ಆತನ ಪೂರ್ವಾಪರವನ್ನು ಕೇಳಿ, ಹಿತವರಂತೆ ದುಃಖಿಸಿ ಮೆಲ್ಲನೆ ಸಂತೈಸಿ ನಾನು ನಿನಗೆ ಸೋತಿದ್ದೇನೆ ಎಂದಳು. ಆತ ಒಡೆಯನ ಉಪಕಾರವನ್ನು ನೆನೆದು ಆಕೆಯನ್ನು ತಿರಸ್ಕರಿಸಿದನು. ಅವನು ತಾಯಿ ಎಂದರೂ ಬಿಡದೆ, ನಿಮ್ಮ ಸೇವಕನಲ್ಲಿ ಈ ವೃತ್ತಿ ಸಲ್ಲದು ಎಂದರೂ ಬಿಡದೆ ಒತ್ತಾಯದಿಂದ ಕೂಡಿದಳು. ಮೇಲೆ ಮೇಲೆ ಕೂಡಿ ಇಬ್ಬರನ್ನೊಬ್ಬರು ಮೆಚ್ಚಿದರು. ಕೆಲವು ದಿವಸ ಕಳೆಯಿತು. ಧನಸೇನನ ಹೆಂಡತಿ ಹೀಗೆ ಯೋಚಿಸಿದಳು—

ಈತನ ಸಂಗವನ್ನು ನಾನು ಬಿಡಲಾರೆ. ಧನಸೇನ ಬಂದ ಮೇಲೆ ನಾನು ಇವನೊಡನೆ ಕೂಡಲಾಗುವುದಿಲ್ಲ ಎಂದು ದುಃಖಿಸಿದಳು. ಧನಸೇನ ಸೆಟ್ಟಿಗೆ ನಮ್ಮಿಬ್ಬರ ಸಂಗತಿ ತಿಳಿದುಬಂದರೆ ನಮ್ಮನ್ನು ಕೊಲ್ಲದೆ ಬಿಡನು ಎಂದು ಅಂಜಿದಳು. ಆಗ ಆಕೆ ದುರ್ಬುದ್ಧಿಯೊಂದನ್ನು ನೆನೆದಳು—ಪುರರಕ್ಷಕನೊಬ್ಬನನ್ನು ಒಳಗು ಮಾಡಿಕೊಂಡು ಕುದುರೆಯೊಂದನ್ನು ತರಿಸಿದಳು. ಪುರರಕ್ಷಕನನ್ನು ದೂರವಿರುವಂತೆ ಏರ್ಪಾಟು ಮಾಡಿದಳು. ತಾವು ಇಲ್ಲಿಂದ ಹೋದುದು ಯಾರಿಗೂ ತಿಳಿಯಬಾರದೆಂದು ಎರಡು ಹಳೆಯ ಹೆಣದ ಹಳಗವನ್ನು ತರಿಸಿ ಮೋಟ ಮಲಗುವಲ್ಲಿರಿಸಿ ಕಿಚ್ಚನ್ನಿಕ್ಕಿದಳು. ಧನವನ್ನು ತೆಗೆದುಕೊಂಡು, ಮೋಟನನ್ನು ಕುದುರೆಯ ಮೇಲೆ ಕೂಡಿಸಿಕೊಂಡು ಊರನ್ನು ಬಿಟ್ಟಳು. ನೂರು ನಾಲ್ಕು ಯೋಜನ ಪ್ರಯಾಣ ಮಾಡುವಷ್ಟರಲ್ಲಿ ಬೆಳಗಾಯಿತು. ತನ್ನನ್ನು ಜನರು ಗುರುತಿಸಬಾರದೆಂದು ಆಕೆ ಮುಸುಕು ಹಾಕಿಕೊಂಡಳು. ಹಳ್ಳಿಗಳಲ್ಲಿ ಕಂಡವರೆಲ್ಲ "ಈ ಅಂಗಹೀನ ಮೋಟ ಕುದುರೆಯ ಮೇಲೆ ಏಕೆ ಇದ್ದಾನೆ? ಈ ಸುಂದರಿ ಏಕೆ ಮುಸುಕು ಹಾಕಿ ನಡೆದುಕೊಂಡು ಹೋಗುತ್ತಿದ್ದಾಳೆ" ಎಂದು ತಳವಾರನನ್ನು ಪ್ರಶ್ನಿಸಿದರು. ಅವರಿಗೆ ಉತ್ತರವಾಗಿ "ಈಕೆ ಪತಿಭಕ್ತೆ. ತನ್ನ ಪತಿಯನ್ನಲ್ಲದೆ ಅನ್ಯಪುರುಷರ ಮುಖ ನೋಡಳು" ಎಂದನು. ಅವರೆಲ್ಲ "ಈಕೆ ಧರ್ಮಪುರುಷಿ" ಎಂದು ಕೊಂಡಾಡಿ ಕೈಮುಗಿದು ಉಪಚರಿಸಿದರು. ಹತ್ತು ದಿನಗಳ ಪ್ರಯಾಣದನಂತರ ಧರ್ಮರಾಜನ ಮದನಾವತಿಗೆ ಬಂದಳು. ಪತಿವ್ರತೆ ಎನ್ನುವ ಹೆಸರಿನಿಂದ ಒಂದು ಮನೆಯನ್ನು ಮಾಡಿಕೊಂಡು ವಾಸವಾಗಿದ್ದಳು. ಈ ಸಮಾಚಾರವನ್ನು ತಿಳಿದ ದೊರೆ ಆಕೆಯನ್ನು ಅರಮನೆಗೆ ಕರೆಸಿ ಸತ್ಕರಿಸಿದನು. ದಿನಕ್ಕೆ ಒಮ್ಮೆಯಾದರೂ ಅಂತಃಪುರಕ್ಕೆ ಬಂದು ಹೋಗುವಂತೆ ಕೋರಿದನು. ಅಂದಿಗೆ ಜಿಸ್ತಿಗೆ ದ್ವಾರಪಾಲಕರಿಗೆ ಈ ಬಗ್ಗೆ ತಿಳಿಸಿದನು. ಮಾಸಪಡಿ ಕೊಡಲು ಉಗ್ರಾಣದವರಿಗೆ ಸೂಚಿಸಿದನು. ಪರಿಚಾರಿಕೆ ವೃತ್ತಿಗೆ ದಾಸಿಯರನ್ನು ಕೊಟ್ಟನು. ಧನಸೇನನ ಹೆಂಡತಿ ಇರಲು ಮನೆ, ಕರೆಯುವ ಹಸುವು, ಮಲಗಲು

ಮುಂತ, ಹೊಸತೂಲಿಕಾ ತಲ್ಪಗಳನ್ನು ಮಾಡಿಸಿಕೊಂಡಳು. ತನ್ನ ಜೊತೆ ಬಂದಿದ್ದ ಪುರರಕ್ಷಕನಿಗೆ ವಸ್ತ್ರಾಭರಣಗಳನ್ನಿತ್ತು ಮರಳಿ ಕಳಿಸಿದಳು. ಆಕೆ ಮತ್ತು ಮೋಟ ಸುಖ ದಿಂದಿದ್ದರು.

ಇತ್ತ ಸೆಟ್ಟಿಯ ಅರಮನೆ ಉರಿಯಿತು. ಪುರಜನರು ಹೊರಬಾಗಿಲುವಾಡದಲ್ಲಿ ಕರಿ ಕಾದ ಎರಡು ಹೆಣಗಳನ್ನು ಕಂಡರು. ಒಂದು ಸೆಟ್ಟಿಯ ಹೆಂಡತಿಯದು. ಒಂದು ಮೋಟನದು ಎಂದರು. ತಗ್ಗು ಪಾತಕದಿಂದ ಬೆಂಕಿಯಲ್ಲಿ ಬೆಂದರು ಎಂದು ಶವಗಳನ್ನು ದೂರ ಬಿಸಾಡಿದರು. ಮನೆಯ ದಾಸಿಯರು ಚಿಂತಿಸಿದರು.

ಕೆಲವು ದಿನಗಳಾದ ಮೇಲೆ ತಮ್ಮ ಒಡೆಯ ಹಿಂದಿರುಗುವ ಸುದ್ದಿ ದಾಸಿಯರಿಗೆ ಬಂದಿತು. ವ್ಯಾಪಾರದಲ್ಲಿ ಅಧಿಕಲಾಭವಾಗಲು ಸೆಟ್ಟಿ ಆತುರ [illegible]ವಾಗಿ ಮನೆಗೆ ಬಂದನು. ಹೆಂಡತಿಗೆ ಆಭರಣಗಳನ್ನು ದಿವ್ಯದುಕೂಲಾಂಬರವನ್ನು ತಂದನು. ಮೋಟ ನಿಗೆ ತಕ್ಕ ಉಡುಗೊರೆಗಳೂ ಇದ್ದುವು. ಊರಿಗೆ ಬಂದು ದೊರೆಯನ್ನು ಕಂಡು ಕಾಣಿಕೆ ಯಿತ್ತನು. ಮನೆಗೆ ಬಂದು ಕಾಲು ತೊಳೆದನು. ಬಂದವರನ್ನೆಲ್ಲ ಮಾತನಾಡಿಸಿ ಕಳಿಸಿ ದನು. ಅನಂತರ "ಹೊರಬಾಗಿಲುವಾಡ ಬೆಂದಿದೆ? ಸತಿ ಇಲ್ಲ. ಮೋಟನೇನಾದ?" ಎಂದು ದಾಸಿಯರನ್ನು ಕೇಳಿದನು. ದಾಸಿಯರು ಮಾತಾಡಲಿಲ್ಲ. ಸೆಟ್ಟಿ [illegible]ರಿ ದನು. ದಾಸಿಯೊಬ್ಬಳಿಂದ ಸಂಗತಿಯನ್ನು ತಿಳಿದು ಕ್ರಮೇಣ ಮರೆತನು.

ಧನಸೇನನ ಹೆಂಡತಿಯನ್ನು, ಮೋಟನನ್ನು ಬಿಟ್ಟು ಬಂದ ಪುರರಕ್ಷಕ ತನ್ನ ಸಾಲ ವನ್ನೆಲ್ಲ ತೀರಿಸಿದನು. ಹೆಂಡತಿ–ಮಕ್ಕಳಿಗೆ ಒಳ್ಳೆಯ ಆಭರಣಗಳನ್ನು ಮಾಡಿಸಿಕೊಟ್ಟನು. ವಾಹನವನ್ನು, ಕ್ಷೇತ್ರವನ್ನು ಕೊಂಡನು. ಆತನ ಸಂಪತ್ತನ್ನು ಕಂಡು ಜನರು ಈತನಿಗೆ "ಹಣ ದೊರೆಯಿತು" ಎಂದುಕೊಂಡರು. ದೊರೆ ಕರ್ಣಪರಂಪರೆಯಿಂದ ತಿಳಿದು ಆತನನ್ನು ಕರೆಸಿ ವಿಚಾರಿಸಿ ಕೇಳಿದನು. ಆತ ತನಗೆ ಧನ ಬಂದರೀತಿ ಮತ್ತು ಧನಸೇನನ ಹೆಂಡತಿಯ ಕೌಟಿಲ್ಯವನ್ನು ಹೇಳಲು ಅರಸು ಆಶ್ಚರ್ಯಗೊಂಡನು. ಧನಸೇನ ಸೆಟ್ಟಿಯನ್ನು ಕರೆಸಿ ಎಲ್ಲ ಸಮಾಚಾರವನ್ನು ತಿಳಿಸಿದನು. ರಾಜನ ಸೂಚನೆಯಂತೆ ಧನಸೇನ ಮತ್ತು ತ[illegible] ವಾರಸು [illegible] ಜೈಮಿನಿಪುರಕ್ಕೆ ಬಂದರು. ಧನಸೇನನ ಹೆಂಡತಿ [illegible]ಯಲ್ಲಿ ಕುಳಿತು ಅರಮನೆಗೆ ಹೊರಟಳು. ಮಾರ್ಗ ಮಧ್ಯೆ ತಡೆದರು. ಆಕೆ [illegible]ವನ್ನು ನೋಡಿ [illegible] ಹತ್ತಿ [illegible] ಸುಮ್ಮನಿದ್ದಳು. ದೊರೆಗೆ ಈ ಸುದ್ದಿ ತಿಳಿಯಿತು. [illegible] ಮೋಟನನ್ನು ಕರೆಸಿದನು. ಮೋಟ ಧನಸೇನನನ್ನು ನೋಡಿ ಆತನ ಪಾದಗಳನ್ನು ಹಿಡಿ [illegible]ಡಿದನು. ನಡೆಯಲು ಕಾಲಿಲ್ಲ, ನೂಕಲು ಕೈ ಇಲ್ಲ. ಅವಳು ನನ್ನನ್ನು [illegible] ಎಂದನು. ನಾನು ಅಂಜಿ ಅವಳು ಮಾಡಿದ್ದನ್ನು ಮಾಡಿಸಿಕೊಂಡೆ ಎಂದನು. [illegible] ವರೆಗೆ ನಡೆದುದನ್ನೆಲ್ಲ ತಿಳಿಸಿದನು. ದೊರೆ ಈಕೆಗೆ ಮರಣ ಶಿಕ್ಷೆಯ [illegible] ಪುರಾಣಿಕರನ್ನು ಕೇಳಿದನು. ಗಂಡನಲ್ಲಿದ್ದ ಇದ್ದರೆ ಶಾಸ್ತ್ರಿಯನ್ನು [illegible] ಗಂಡನಿದ್ದಾಗ [illegible] ಈಕೆಗೆ [illegible] ಎಂದರು. [illegible] ನಿಮ್ಮಂಥ ವಿದ್ವಾಂಸರಿದ್ದರೆ [illegible] ಈಕೆಯನ್ನು [illegible] ಎಂದು

ಕೋಪಿಸಿ ನುಡಿದನು. ಆಗ ಬಾಲಭಾರತಿ ಎನ್ನುವವನು ಹೆಂಗಸರ ಕೃತಕವನ್ನು ಯಾರೂ ಅರಿಯಲಾರರು ಎಂದು ವರರುಚಿಯ ಕಥೆಯನ್ನು ಹೇಳಿದನು.

ವರರುಚಿಯ ಕಥೆ

ಅರವತ್ತುನಾಲ್ಕು ಕಲೆಗಳಲ್ಲಿ ವರರುಚಿ ನಿಪುಣ ಎಂದು ನಂದನೃಪ ಆತನನ್ನು ಮೆರೆಸಿದನು. ಕಳಾವಿದೆ ಎನ್ನುವವಳು ಅದನ್ನು ಕಂಡು—"ಈ ಕಳೆಯ ಅಭಿಜ್ಞತೆ ಹೆಂಗಸರ ಚಿತ್ತವೃತ್ತಿಯನ್ನು ಕಂಡರೆ ಸಲ್ಲುತ್ತದೆ" ಎಂದಳು. ಆಕೆಯಿಂದಿಳಿದ ವರರುಚಿ ಅವಳ ಪರೀಕ್ಷೆಗೆ ವಾತ್ಸ್ಯಾಯನನ ಆಗಮಾರ್ಥಗಳನ್ನು ಹೇಳಿದನು. ಆಗ ಕಳಾವಿದೆ "ಇದು ಹೆಣ್ಣುಗಳನ್ನು ಒಲಿಸುವ ರೀತಿಯುಳ್ಳದ್ದೆ ಅವರ ಚಿತ್ತವನ್ನು ನಿರ್ಧರಿಸುವ ಪರಿಯಲ್ಲ ಎಂದಳು." ವರರುಚಿ "ಸತಿಯರ ಚಿತ್ತವನ್ನು ಕಾಣುವ ತೆರನನ್ನು ಹೇಳು" ಎಂದನು. ವಿದಗ್ಧೆ ಹೇಳತೊಡಗಿದಳು—

"ಉತ್ತರ ದೇಶದ ಕೌಂಡಿನಿ ಪಟ್ಟಣದ ಬಾಹುಬಲನ ರಾಜಪುರೋಹಿತ ಯಜ್ಞದತ್ತ. ವಿಮಳೆ ಆತನ ಹೆಂಡತಿ. ಆಕೆ ಎಲ್ಲವನ್ನು ಹೇಳುತ್ತಾಳೆ. ಅಲ್ಲಿಗೆ ನಡೆ. ಅವಳಲ್ಲಿ ಪರೀಕ್ಷೆಯನ್ನು ಕೊಡು ಎನ್ನಲು ಅಲ್ಲಿಗೆ ವರರುಚಿ ನಡೆದನು. ವಿಮಳೆಗೆ ಎಲ್ಲ ಸಂಗತಿಯನ್ನು ಹೇಳಿದನು. ಆಕೆ ಸ್ನಾನಕ್ಕೆ ಅಣಿಗೊಳಿಸಿ ಊಟದ ಅನಂತರ ಪರೀಕ್ಷಿಸುವೆನೆಂದಳು. ವರರುಚಿಗೆ ಸ್ನಾನ ಮಾಡಿಸುವಾಗ ತನ್ನ ಅಂಗಾಂಗಗಳನ್ನೆಲ್ಲ ಸೋಕಿಸಿ ಆತನಿಗೆ ಮನಸೋತಂತೆ ಮಾಡಿದಳು. ಆ ಸಂತೋಷದಿಂದ ವರರುಚಿ ಆಕೆಯನ್ನು ಗಂಡನೆಲ್ಲಿ, ಮಕ್ಕಳೆಷ್ಟು, ಒಬ್ಬಳೇ ಇರುವೆಯಲ್ಲ ಎಂದು ಪ್ರಶ್ನಿಸಿದನು. ನನ್ನ ಗಂಡ ಬ್ರಾಹ್ಮಣರೊಡನೆ ಕಾಶಿಗೆ ಹೋಗಿದ್ದಾನೆ. ಇದುವರೆಗೂ ಮಕ್ಕಳಿಲ್ಲ. ದಾಸಿಯರೊಡನೆ ಇದ್ದೇನೆ ಎಂದಳು. ಸ್ನಾನಾನಂತರ ಪೂಜೆ ಮಾಡಿಸಿದಳು. ಊಟಕ್ಕೆ ಎರಡು ಮಣೆಹಾಕಿ—ಎರಡು ಅಡ್ಡಣಿಗೆಯ ಮೇಲೆ ಎರಡು ಹರಿವಾಣವನ್ನಿಟ್ಟಳು. ಸಕಲ ಶಾಕ ಪಾಕ ಭಕ್ಷ್ಯ ಭೋಜ್ಯಗಳನ್ನು ಬಡಿಸಿ ತಿಳಿದುಪ್ಪ, ಹೆರೆದುಪ್ಪ, ಉಪುಮುದುಪ್ಪ, ಗಟ್ಟಿದುಪ್ಪ, ಸಿಹುದಪ್ಪ, ಕೆನೆಮೊಸರು, ನೀರುಮಜ್ಜಿಗೆ ಮೊದಲಾದವನ್ನು ಬಡಿಸಿ ಅನ್ನ ವಮುಯುಮನ್ನು, ಭೋಜನವನ್ನು ಮಾಡಿ ಎಂದಳು. ಸಮೀಪದಲ್ಲಿ ನಿಂತ ಅವಳನ್ನು ಕಂಡು ಒಂದು ಎಡೆಯಾಯಿತು. ಇನ್ನೊಂದು ಎಡೆಗೆ ಯಾರು ಎಂದನು. ಆ ಮಾತನ್ನು ಕೇಳಿ ನಾಚಿಕೆಗಾತಿ ವಿಮಳೆ ತಲೆಬಾಗಿದಳು ವರರುಚಿ ಹರಿವಾಣವೆರಡನ್ನೂ ಕೂಡಿಸಿ ಜೊತೆಯಲ್ಲಿ ಊಟಮಾಡಲು ವಿಮಳೆಯ ಸೆರಗನ್ನು ಹಿಡಿದನು. ಆಗ ಆಕೆ ಕೇರಿಯೆಲ್ಲ ಸೇರುವಂತೆ ಮೊರೆಯಿಟ್ಟಳು.

ಆಗ ಜನವೆಲ್ಲ ಈ ಬಡಹಾರುವನನ್ನು ಹೊಡೆಕಡೆ ಎಂದು ನುಗ್ಗಿದರು. ಆಗ ವಿಮಳೆ ಅವರಲ್ಲಿ ಹೀಗೆ ನುಡಿದಳು—"ಈತ ನನ್ನ ಸಹೋದರ ಕಡುಬಳಲಿದ ಈತನ ಕೊರಳಲ್ಲಿ ಅನ್ನ ಸಿಕ್ಕಿತು. ಕಣ್ಣುಗಳು ಮರಳಿದವು ಈತ ಕೈಕಾಲು ಬಡಿಯುವುದನ್ನು ಕಂಡು ಅಂಜಿ ಮೊರೆಯಿಟ್ಟೆ" ಎಂದು ಬಂದ ಬಂಧುಗಳನ್ನೆಲ್ಲ ಬೀಳ್ಕೊಟ್ಟಳು. ಈ ಪ್ರಸಂಗದಿಂದ ವರರುಚಿ ಗಡಗಡನೆ ನಡುಗಿದನು. ಈ ವಿದ್ಯೆಗಳ ಗೊಡವೆ ಸುಡಲಿ ಎಂದನು. ವಿಮಳೆ

ಮಾಡಿದ ಕುಟಿಲಕ್ಕೆ ನಾಚಿದನು. ಆಗ ವಿಮಲೆ ಆತನ ಭಯವನ್ನು ಬಿಡಿಸಿ ಊಟ ಮಾಡಿಸಿ ವೀಳೆಯವನ್ನು ಕೊಟ್ಟಳು. ಬೀಳ್ಕೊಡುವಾಗ ಎಲೆ ಮಹಾಪುರುಷ ತ್ರಿಮೂರ್ತಿಗಳೂ ಸ್ತ್ರೀಯರ ನೆಲೆಯನ್ನು ಅರಿಯರು. ಶಿವ ಅರ್ಧ ದೇಹದಲ್ಲಿ ಪಾರ್ವತಿಯನ್ನು, ವಿಷ್ಣು ಎದೆಯಲ್ಲಿ ಲಕ್ಷ್ಮಿಯನ್ನು, ಬ್ರಹ್ಮ ಮುಖದಲ್ಲಿ ವಾಗ್ದೇವಿಯನ್ನು ಧರಿಸಿದರು. ಆದುದರಿಂದ ಸ್ತ್ರೀಯರ ನೆಲೆಯನ್ನು ಬಲ್ಲವರಿಲ್ಲ ಎಂದು ಹೇಳಿಕಳಿಸಿದಳು. ವರರುಚಿಯಂಥ ಮಹಾಮಹಿಮನೇ ಸ್ತ್ರೀಯರ ನೆಲೆಯನ್ನು ಅರಿಯದಾದನು ಇನ್ನು ನಮ್ಮ ಪಾಡೇನು ಎಂದು ಬಾಲಭಾರತಿ ನುಡಿದನು.

'ಹೆಂಡತಿಯನ್ನು ಗಂಡಬಿಟ್ಟಡೇ ಕೊಲೆ' ಎನ್ನುವ ವಿದ್ವಾಂಸರ ಅಭಿಪ್ರಾಯವನ್ನು ದೊರೆ ಒಪ್ಪಿ ಆಕೆಯನ್ನು ಧನಸೇನನಿಗೆ ಕೊಟ್ಟನು. ಧನಸೇನ ಆಕೆಯನ್ನು ಬಿಟ್ಟು ಹೊರಟುಹೋಗಲು ಧರ್ಮಪಾಲ ಆತನ ಮನಸ್ಸನ್ನು ಪರೀಕ್ಷಿಸಲು ಆತನ ಹೆಂಡತಿ ತಂದಿದ್ದ ಒಡವೆಯನ್ನು ಆತನಿಗೆ ಕೊಟ್ಟನು. ಧನಸೇನ ಅದನ್ನೆಲ್ಲ ಅನಾಥರು, ಬಡವರು, ಶಿವ ಭಕ್ತರು ಬ್ರಾಹ್ಮಣರಿಗೆ ದಾನಮಾಡಿದನು. ಅದರಲ್ಲಿ ಸ್ವಲ್ಪಭಾಗವನ್ನು ತನ್ನ ಹೆಂಡತಿ ಮತ್ತು ಮೋಟನಿಗೆ ಕೊಟ್ಟನು. ನೆರೆದ ಜನ "ಇವರಿಬ್ಬರಿಗೂ ಏಕೆಕೊಟ್ಟೆ" ಎಂದರು. ಆಗ ಧನಸೇನ "ಹಲಗಿನಿಂದ ಇರಿದರೆ ಶತ್ರುಗಳು ಬೇಗ ಸಾಯುತ್ತಾರೆ. ಅದರ ಬದಲು ಅವರಿಗೆ ಉಪಕಾರಮಾಡಿದರೆ ಅದನ್ನು ನೆನೆನೆನೆದು ಅವರು ಸಾಯುತ್ತಾರೆ" ಎಂದು ಏಕಾಂತದಲ್ಲಿ ಹೇಳಿದನು. "ಮೋಟನನ್ನು ಜೋಗಿಗಳ ವಶಕ್ಕೆ ಕೊಡಿ, ಈಕೆ ಮನಬಂದತ್ತ ಹೋಗಲಿ" ಎಂದು ನೃಪನ ತೀರ್ಪಾಗಿ ಆಸ್ಥಾನ ಹರಿಯಿತು. ಧನಸೇನ ಸೆಟ್ಟಿ ಜೊತೆಯ ಸೇವಕರನ್ನು ಕಳಿಸಿ ದೊರೆಯನ್ನು ಕಂಡು ಮನೆಗೆ ಬಂದನು. ಒಡೆದ ಕೆರೆಯನ್ನು ಕಟ್ಟಿಸಿದನು. ಮುರಿದ ದೇಗುಲವನ್ನು ಸರಿಪಡಿಸಿದನು. ಬಡವರಿಗೆ ಹಣವನ್ನು ಕೊಟ್ಟನು. ಸುವರ್ಣ ದಾನ ಅನ್ನದಾನಗಳನ್ನು ಮಾಡಿದನು, ಬ್ರಾಹ್ಮಣರ ಮದುವೆಗೆ ಧನಸಹಾಯ ಮಾಡಿದನು. ಕಾಶಿಗೆ ಹೋಗಿ ಶರೀರತ್ಯಾಗ ಮಾಡುವೆನೆಂದು ತಪಸ್ಸು ಮಾಡಿದನು ಎಂದು ಸುಜ್ಞಾನಿಗಳು ಮಾತಂಗ ಮುನಿಗೆ ಹೇಳಿದರು. ಇದನ್ನು ದಂಡನಾಥ ಬಸವಣ್ಣ ಕೊಂಡಾಡಿ ಕಲ್ಯಾಣದ ಶಿವಶರಣರಿಗೆ ಹೇಳಿದನು.

ಮಾತಂಗಮುನಿ "ಧನಸೇನನ ವಿಚಾರ ಹೇಳಿದಿರಿ. ಭಾನುಕಿ ಏನಾದಳು" ತಿಳಿಸಿ ಎಂದು ಸುಜ್ಞಾನಿಗಳನ್ನು ಕೇಳಿದನು. ಆಗ ಅವರು ಹೇಳಿದರು–ಆಕೆ ತನ್ನ ಪಾಪಕ್ಕೆ ಪರಿತಪಿಸಿ ಆ ಊರಿನ ಬೀದಿಗಳಲ್ಲಿ ಹೋಗುತ್ತಿದ್ದಳು. ನೋಡಿದವರು "ಪತಿದ್ರೋಹಿಯ ಗತಿ ಹೀಗಾಯಿತೆ." ಎಂದು ಮೂಗಿನ ಮೇಲೆ ಬೆರಳಿಟ್ಟು ಮದನಮೋಹಿನಿಗೆ ಹೇಳಿದರು. ಆಕೆ ಧನಸೇನನ ಹೆಂಡತಿಯನ್ನು ಕರೆಸಿ ವಿಚಾರಿಸಿದಳು. ಅವಳು ತನ್ನನ್ನು ಗಂಡ ಬಿಟ್ಟು ಹೋಗುತ್ತ ಮಾಡಿದ ಉಪಕಾರವನ್ನು ತಿಳಿಸಿದಳು. ಆಗ ಮದನಮೋಹಿನಿ ಹಿಂದೆಯೂ ಅನ್ಯಾಯ ಮಾಡಿದ ಹೆಣ್ಣುಗಳು ಉಂಟು. ಅಂತಹ ಸ್ತ್ರೀಯರನ್ನು ಬಿಟ್ಟವರೂ ಉಂಟು ಎಂದು ದಕ್ಷದಕ್ಷನ ಕಥೆಯನ್ನು ಹೇಳಿದಳು

ರತ್ನದತ್ತನ ಕಥೆ

ದಾಮಘೋಷನೆಂಬ ಧರಾಧಿಪನ ದೇಶದ ಧರ್ಮಪುರದಲ್ಲಿ ರತ್ನದತ್ತನೆನ್ನುವ ಸೆಟ್ಟಿ ಆತನ ಹೆಂಡತಿ ಪುಷ್ಪಳೆ. ಸಕಲ ಸೌಭಾಗ್ಯವಿದ್ದರೂ ಅಕೆ ದುಃಖಿತೆಯಾದಳು. ಹೇಗೆಂದರೆ–

ಪುಷ್ಪಳೆ ಒಂದು ದಿನ ಮನೆಯ ಮುಂದೆ ಎಡೆಯಾಡುತ್ತಿದ್ದ ಶೌಂಡಿಕನನ್ನು ಕಂಡಳು. ಮನಸೋತಳು. ಗಂಡನಿಗೆ ತಿಳಿಯದಂತೆ ಆತನನ್ನು ಕರೆಸಿ ಕೂಡಿದಳು. ಕೆಲವು ಕಾಲದ ಮೇಲೆ ರತ್ನದತ್ತ ವ್ಯಾಪಾರಕ್ಕೆ ಹೋದನು. ಪುಷ್ಪಳೆ ಎಲ್ಲ ಹಣವನ್ನು ತೆಗೆದುಕೊಂಡು ಒಂದು ರಾತ್ರಿ ಶೌಂಡಿಕನೊಡನೆ ಓಡಿಹೋದಳು. ದಡ ಕಾಳಿ ಅಡವಿ ಗಿಡ ಎನ್ನದೆ ಭಯದಿಂದ ನಾಲಕ್ಕು ಯೋಜನ ನಡೆದಾಗ ಮಧ್ಯದಲ್ಲಿ ಒಂದು ನದಿ ಸಿಕ್ಕಿತು. ದಾರಿಯ ಶ್ರಮವನ್ನು ಆರಿಸಿ ಬುತ್ತಿಯನ್ನು ಉಂಡು ವಿಶ್ರಮಿಸಿದರು. ಆಗ ಪುಷ್ಪಳೆ ತಾನು ತಂದ ಅಪೂರ್ವ ರತ್ನ ವಜ್ರ ವೈಡೂರ್ಯಗಳನ್ನು ಶೌಂಡಿಕನಿಗೆ ತೋರಿಸಿದಳು. ಆಗ ಶೌಂಡಿಕ ಯೋಚಿಸಿದನು ಇವಳು ನನಗೆ ಎಂದೆಂದಿಗೂ ಸ್ಥಿರಳಲ್ಲ, ಇವಳ ಸಂಪತ್ತನ್ನು ಅಪಹರಿಸುವೆನು. ಆ ಕ್ಷಣ ಉಪಾಯವೊಂದನ್ನು ಯೋಚಿಸಿದನು. "ಈ ನದಿಯನ್ನು ಹಾಯಲು ಆಗುವುದಿಲ್ಲ. ನಾನು ಮೊದಲು ಹಾದು ಬಂದು ನಿನ್ನನ್ನು ಕರೆದುಕೊಂಡು ಹೋಗುತ್ತೇನೆ. ಇದು ಗಿಡ. ನಾನು ಆಚೆಯದಡಕ್ಕೆ ಹೋದಾಗ ಇಲ್ಲಿ ನೀನು ಒಬ್ಬಳೇ ಇರುತ್ತೀಯೆ. ಇದು ಬೇಡವೆ. ಹೊಲ್ಲ. ಧನವನ್ನು ಕೊಡು" ಎಂದು ತೆಗೆದುಕೊಂಡು ಆಭ ಟ್ಟನ್ನ ಮುತ್ತಿನ ಸರಗಳ ಪೆಟ್ಟಿಯು ಮೇಲಿನ ಚೀನಾಂಬರದ ಸೀರೆಯಲ್ಲಿ ಹೊರೆ ಕಟ್ಟಿದನು. ಸೀರೆಯನ್ನು ಬಿಚ್ಚಿ ಬೆತ್ತಲೆಯಾದ ಪುಷ್ಪಳೆಯನ್ನು ನೀರಲ್ಲಿ ಕೂಡಿಸಿದನು. ತಾನು ನದಿಯನ್ನು ದಾಟಿ ಆಚೆ ತೀರ ತನ್ನ ನಾಡಿಗೆ ತಾನು ಹೋದನು. ಅದನ್ನು ಕಂಡ ಪುಷ್ಪಳೆ "ಎಲ್ಲಿಗೆ ಹೋಗುವೆ, ಇಲ್ಲಿ ನನ್ನೊಬ್ಬಳನ್ನೇ ಬಿಟ್ಟು" ಎಂದಳು. ಆಗ ಶೌಂಡಿಕ "ನಿನ್ನನ್ನು ಒಲ್ಲೆ, ನೀನು ಮನೆಯಿಂದಲ್ಲಿಗೆ ಹೋಗು" ಎಂದನು. ಆಗ ಭಯಗೊಂಡ ಪುಷ್ಪಳೆ "ಗಂಡನನ್ನು ಕೆಡಿಸುವುದು ನನಗೆ ಒಳ್ಳೆಯದೆ" ಎಂದಳು. "ನಂಬಿದ ಗಂಡನನ್ನು ಬಿಟ್ಟು ನೀನು ನನಗೆ ತಪ್ಪುವೆ? ಮತ್ತೊಂದು ಕಡೆ ಧನಿಕನೂ ಚೆನ್ನಿಗನೂ ದೊರಕಿದರೆ ಅವನ ಹಿಂದೆ ನೀನು ಹೋಗುವೆ! ಆಗ ನನಗೆ ಈ ಸಂಪತ್ತು ದೊರಕುತ್ತದೆಯೆ. ನೀನು ನಡೆ" ಎಂದನು. ಆ ಪುಷ್ಪಳೆಯ ಗತಿ ಏನಾಯಿತು ಎಂದು ಮನನಯೋಚಿಸಿ ಧನಕೇಶ ಸೆಟ್ಟಿಯು ಹೆಂಡತಿಗೆ ಹೇಳಿದನು.

ಇಷ್ಟೆಲ್ಲ ಕೇಳಿ ಸೆಟ್ಟಿಯ ಹೆಂಡತಿಯ ಕುತೂಹಲ ಅಡಗಲಿಲ್ಲ. ಪುಷ್ಪಳೆ ಏನು ಮಾಡಿದಳು? ನೀರಿನಿಂದ ಹೊರಬರಲು ಅನುಕೂಲವಾಯಿತೆ? ಹಿಂದಿನಂತೆ ವೇಗ ಹುಟ್ಟಿಸಲು ಬಂದಿತೆ? ಶೌಂಡಿಕ ಮರುಗಿ ಹಿಂದೆ ಬಂದನೆ ಎಂದಳು. ಮಗನ ಯೋಚಿಸಿ ಹೇಳತೊಡಗಿದಳು–

ನೀರಿನಲ್ಲಿ ಬೆತ್ತಲೆಯಾಗಿ ಪುಷ್ಪಳೆ ಚಿಂತಿಸುತ್ತಿದ್ದಳು. ಅಷ್ಟರಲ್ಲಿ ಅಲ್ಲಿಗೆ ಧರ್ಮರಾಜ ಪುರದ ರತ್ನದತ್ತನ ಬಳಿಯ ಶರ್ಕರಿ ಧರಭಟ್ಟ ನಾರಸಿಂಹ ಎನ್ನುವವನು ಬಂದನು. ಆತ ನಾಚಿ

ಸುಮ್ಮನಿದ್ದಳು. ಆಗ ಭಟ್ಟರು ಮಹಾಭಾರತದ [illegible] ಪ್ರಸಂಗವನ್ನು ಹೇಳಿ "ಮಾಡಿದ ಪಾಪ ಆಡಿದರೆ ಹೋಗುತ್ತದೆ" ಎಂದರು. ಆಕೆ ಎಲ್ಲವನ್ನು ಮರೆಮಾಚದೆ ಅವರಿಗೆ ತಿಳಿಸಿದಳು. ಅದನ್ನು ಕೇಳಿ ನರಸಿಂಹಭಟ್ಟನು ಇವಳ ದುಷ್ಟಚಿತ್ತ ದುರ್ಬುದ್ಧಿಯು ಸಂಯುಕ್ತವಾಯಿತೆಂದು ಶ್ರೀಧರ ಭಟ್ಟನಿಗೆ ಹೇಳಿದನು—

ನೀರಿನಲ್ಲಿರುವ ಮೀನನ್ನು ಹಿಡಿಯುವೆನೆಂದು ನರಿ ದಡದ ಮೇಲೆ ತಾನು ಕಚ್ಚಿತಂದ ಮಾಂಸವನ್ನಿಟ್ಟು ನೀರಿಗಿಳಿಯಿತು. ಆ ಮಾಂಸವನ್ನು ಹದ್ದು ಹಾರಿಸಿಕೊಂಡು ಹೋಯಿತು. ನೀರಿನಲ್ಲಿ ಮೀನು ತಪ್ಪಿಸಿಕೊಂಡಿತು. ನರಿ ಗುದ್ದಿಗೆ ಹೋಯಿತು. ನರಿಗೆ ಇತ್ತ ಮಾಂಸವೂ ಇಲ್ಲ ಅತ್ತ ಮೀನೂ ಇಲ್ಲ. ಹಾಗೆ ಈಕೆ ಗಂಡನಿಗೂ ಇಲ್ಲದೆ ಮಿಂಡನಿಗೂ ಇಲ್ಲದೆ ಕೆಟ್ಟಳು ಎಂದು ಹೇಳಿ ಆಕೆಗೆ ಬಟ್ಟೆಯನ್ನು ಕೊಟ್ಟು ಊರಿಗೆ ನಡೆ ಎಂದರು. "ಪುಷ್ಪಳೆ ಊರಿಗೆ ಬಂದು [illegible]" ಎಂದು ಮಡುವನ್ನು ಹೊಕ್ಕು ಸತ್ತಳು. ಬ್ರಾಹ್ಮಣರು ಧರ್ಮಪುರಕ್ಕೆ ಬಂದು ರತ್ನದತ್ತನ ಮನೆಗೆ ತಿಳಿಸಿದರು ಎಂದಳು. ಪುಷ್ಪಳೆಯು "ರತ್ನದತ್ತ ಏನಾದ" ಎಂದಳು. ಮದನಮೋಹಿನಿ ಮುಂದುವರೆಸಿದಳು—

ರತ್ನದತ್ತನಿಗೆ ವ್ಯಾಪಾರದಲ್ಲಿ ಒಂದಕ್ಕೆ ಐದರಷ್ಟು ಲಾಭವಾಯಿತು. ಹಣವಂತನಾಗಿ ತನ್ನ ಪುರಕ್ಕೆ ಬಂದನು. ಬರುವಾಗ ಅರಸನಿಗೆ ಪದ್ಮರಾಗಗಳನ್ನು ತಾಯಿ ತಂದೆಯರಿಗೆ ಒಳ್ಳೆಯ ದುಕೂಲ ಆಭರಣಗಳನ್ನು ಒಡಹುಟ್ಟಿದವರಿಗೆ ಬೇಕಾದುದನ್ನು ತಂದನು. ಎದುರುಗೊಂಡ ಬಂಧುಬಾಂಧವರನ್ನು ಕಳಿಸಿ "ಪುಷ್ಪಳೆ ಎಲ್ಲಿ" ಎಂದು ತಾಯಿಯನ್ನು ಕೇಳಿದನು. [illegible] ನಿಜ ಸಂಗತಿಯನ್ನು ತಿಳಿಸಬಾರದೆಂದು ಭಾವಿಸಿ ಪುಷ್ಪಳೆ "[illegible] ಸತ್ತಳು" ಎಂದಳು. ಆ ಮಾತು ಕಿವಿಗೆ ಬಿದ್ದ ಕೂಡಲೆ ರತ್ನದತ್ತ [illegible] ಮಾತನ್ನೆ ಆಡಲಿಲ್ಲ. ಮಾತನಾಡಿಸಿದರೆ ಮಾತನಾಡ. ಅನ್ನಪಾನದಲ್ಲಿ ಅಭಿಲಾಷೆಯಿಲ್ಲ. ಶಯನ ಜಾಗ ಬಿಟ್ಟು ಏಳ. ಮನ್ಮಥ ಗ್ರಹದ ಹೊಡೆತದಿಂದ ಜರ್ಝರಿತನಾದ ಮಗನನ್ನು [illegible] ಸರ್ವಜ್ಞ ದೇವರಲ್ಲದೆ ಬೇರೆಯವರು ಸಮರ್ಥರಲ್ಲವೆಂದು ಭಾವಿಸಿದರು. ಅವರನ್ನು ಕರೆತರಲು ವಾರಿಧಿಪುರಕ್ಕೆ ಜನರನ್ನು ಕಳಿಸಿದರು. ಬಂದು [illegible] "ಏಕೆ ಹಲುಬುವೆ? ನಿನ್ನ ಹೆಂಡತಿ ಸತ್ತಿಲ್ಲ. ಆಕೆ [illegible] ಪಡೆದುಕೊಂಡಳು" ಎಂದರು. ಆ ಮಾತಿಗೆ ರತ್ನದತ್ತ ಕುತೂಹಲವನ್ನು ತೋರಲು ಸರ್ವಜ್ಞ ದೇವರು ಮುಂದುವರೆಸಿದರು—

ರೂಪವತಿಯ ಕಥೆ

[illegible] ಸರ್ವಜ್ಞ ದೇವರು [illegible] ರೂಪವತಿಯೆಂಬ [illegible]. ಇಬ್ಬರೂ ಸಮರೂಪ, ಸಮಗುಣ, ಸಮಚಾತುರ್ಯ, ಸಮಯೌವನ, ಸತ್ಪ್ರೇಮದಿಂದ ಕೂಡಿದ್ದರು. ಸಮುದ್ರ ಮಧ್ಯದ ಅನಂತ ದ್ವೀಪಗಳಲ್ಲಿ

ಶಾಲ್ಮಲಿದ್ವೀಪದ ಒಂದು [illegible] ಕಾಲ ಕೊಡಬಲ್ಲ ಕಾಂಭೋಜನೆಂಬ ವ್ಯಾಪಾರಿ ಇದ್ದನು. [illegible] ಆತ [illegible] ನಗರಕ್ಕೆ ಬಂದು ದೊರೆಗೆ ಉಡುಗೊರೆಗಳನ್ನಿತ್ತನು. [illegible] ಮನೆಯ [illegible] ಬಿಡಾರ ಬಿಟ್ಟನು. ಸೆಟ್ಟಿಯ ರೂಪವನ್ನು ಕಂಡ ರೂಪವತಿ ಅನೇಕ ಉಪಾಯಗಳಿಂದ ಆತನನ್ನು ಕೂಡಿದಳು. ಹೆಂಗಸನ್ನು [illegible] ತಾನೆ [illegible] ? [illegible] ಮನಸೋತರು. ಎರಡು ಮನೆಯ ಮಧ್ಯೆ ಒಂದು ನೆಲಮನೆಯನ್ನು ಮಾಡಿ ಕಾಲವರಿಯು ಕಳೆಯುತ್ತಿದ್ದರು. ಕೆಲವು ದಿವಸ ಮೇಲೆ ಸೆಟ್ಟಿ ಊರಿಗೆ ಹೊರಟನು. ರೂಪವತಿಗೆ ಕೃತ್ರಿಮ ಬುದ್ಧಿಯನ್ನು ಹೇಳಿ "[illegible] ಕಂಡವರೊಡನೆ ಬಾ" ಎಂದು [illegible] ಮಾಡಿ ಹಡಗಿನ ಮೇಲೆ ಆಕೆಯನ್ನು [illegible] ಕರೆದುಕೊಂಡು ಹೋದನು ಆ [illegible] ಏನು ಮಾಡಿದನೆಂದು [illegible] ಕೇಳಿದನು. ಸರ್ವಜ್ಞ ಗುರುಗಳು ಹೀಗೆ ಹೇಳಿದರು—

ರೂಪವತಿಗಾಗಿ ರತ್ನದತ್ತನು ಎಲ್ಲ ಕಡೆ ಹುಡುಕಿದನು. ಆಕೆ ಎಲ್ಲೂ ಕಾಣಲಿಲ್ಲ. ಹಾಗೆ ಹುಡುಕುವಾಗ ಕೃತ್ರಿಮದ ನೆಲಮನೆಯನ್ನು ಕಂಡನು. ಕಾಂಭೋಜನೊಡನೆ ಆಕೆ ಹೋದಳೆಂದು ತಿಳಿದು [illegible]. ಆಗ ದೇವಶರ್ಮನ ಗುರುಗಳು [illegible] ಬಂದು ಆತನಿಗೆ ತಿಳಿವಳಿಕೆ ಹೇಳಿ [illegible] ಜ್ಞಾನವನ್ನು ಹುಟ್ಟಿಸಿ ತಮ್ಮ [illegible] ಯನ್ನು [illegible]. ಹೀಗೆ ಹೇಳಿ ರತ್ನದತ್ತನಿಗೆ ಹೆಂಡತಿಯ ಮೇಲಣ ವ್ಯಾಮೋಹ ಅಡಗಿತೆಂದು ತಿಳಿದು [illegible] ಮಾಡಿದ ಅನ್ಯಾಯವನ್ನು ತಿಳಿಸಿದರು. ಆಕೆಯ ಕಾರ್ಯಕ್ಕೆ [illegible] ರತ್ನದತ್ತ ಧರ್ಮಮಾರ್ಗದಲ್ಲಿ ನಿಂತನು.

ಈ ಕಥೆಯನ್ನು [illegible] ಕೇಳಿದ [illegible] ಸೆಟ್ಟಿಯು [illegible]— "[illegible] ಇದಕ್ಕೆ ಸತ್ತ [illegible]" ಎಂದು ಮನಸ್ಸಿನಲ್ಲಿ [illegible].

ಸುಜ್ಞಾನಿಗಳು [illegible] ಈ ಕಥೆಯನ್ನು ಹೇಳಿ [illegible] ಕೊಂದರೆ ಪಾತಕ ಬರುತ್ತದೆ. ಆಕೆಯನ್ನು ಕೊಲ್ಲದೆ ಬಿಟ್ಟರೆ [illegible] ದುರ್ಗತಿಗಿಳಿಯುತ್ತಾಳೆ ಎಂದು ಎಲ್ಲಾ ಶಾಸ್ತ್ರಗಳು ಹೇಳುತ್ತವೆ. ಅನ್ಯಾಯ ಮಾಡಿದ ಸ್ತ್ರೀಯರನ್ನು ಬಿಡು [illegible] ರತ್ನದತ್ತ, [illegible] ಅನ್ಯಾಯ ಮಾಡಿದ [illegible] ಕೊಲ್ಲದೆ ಬಿಟ್ಟು ವಿರಾಗಿಗಳಾದರು. ಇನ್ನು [illegible] ಒಂದು ಮಾತಿಗಾಗಿ ಬಿಟ್ಟ [illegible] ಕಥೆಯನ್ನು ಕೇಳು ಎಂದು [illegible] ಕಥೆಯನ್ನು ಹೇಳಿದರು.

ಮದನ ವಿಜಯರಾಯನ ಕಥೆ

[illegible] ಪುರದ ವಿಜಯನೃಪ. ಆತನ ಹೆಂಡತಿ [illegible]. ಅವನಿಗೆ [illegible] ಮದನವಿಜಯ ಎನ್ನುವ ಮಗ. [illegible] ಎನ್ನುವ ಮಂತ್ರಿ. ಒಡ್ಡೋಲಗ

ದಲ್ಲಿ ಎಲ್ಲರೂ ನೆರೆದಿರುವಾಗ ವನಪಾಲಕ—ಉಡುಗೊರೆಗಳನ್ನಿತ್ತು "ಈಗ ಬೇಟೆಗೆ ಸಕಾಲ" ಎಂದನು. ಶಬರನ ಮಾತಿನಂತೆ ಬೇಟೆಗೆ ಹೊರಟ ರಾಜ ತನ್ನವರಿಂದ ಬೇರೆಯಾದನು. ಒಂದು ಕಡೆ ಮದನವಿಜಯ ಕುದುರೆಯೇರಿ ನಿಂತಿರಲು ತರುಣ ಶಶಿಬಿಂಬದಂತಹ ಶರೀರದ ಜಿಂಕೆಯೊಂದನ್ನು ಬೆನ್ನಟ್ಟಿ ಹೇಮಾತ್ರಾದ್ರಿಯ ತ್ರಿಪುರಾಂತಕ ದೇವಸ್ಥಾನಕ್ಕೆ ಬಂದನು. ಮಾಯದ ಹರಿಣ ಮತ್ತು ಏರಿದ ತುರಂಗ ತಮ್ಮ ರೂಪವನ್ನು ಬಿಟ್ಟು ದಿವ್ಯ ರೂಪಾನ್ವಿತರಾಗಿದ್ದುವು. "ಎಲ್ಲಿಯ ಜಿಂಕೆ, ಎಲ್ಲಿಯ ಕುದುರೆ. ಇಲ್ಲಿಂದ ಮುಂದೇನು ? ಏನಾಗುತ್ತದೆ" ಎಂದು ಚಿಂತಿಸುತ್ತ ಧೈರ್ಯಾಂತಃಕರಣನಾಗಿ ಈ ದಿವ್ಯರೂಪಾನ್ವಿತರು ಏಕೆ ಜಿಂಕೆ ಮತ್ತು ಕುದುರೆಯಾಗಿದ್ದರೆಂದು ಅವರನ್ನು ಪ್ರಶ್ನಿಸಿದನು.

ಸುಮನಸನ ಕಥೆ

ಸುಮನಸ ತನ್ನ ಪೂರ್ವ ವೃತ್ತಾಂತವನ್ನು ಹೇಳಿದನು—

ಪವಿತ್ರರಾದ ಸುಮನಸ ಮತ್ತು ರುಭವರು ದೇವಜಾತಿಯಲ್ಲಿ ಹುಟ್ಟಿದ್ದರು. ಶಿವಲೋಕಕ್ಕೆ ಪ್ರತಿದಿನ ಹೋಗಿ ದೇವರಿಗೆ ಸೇವೆ ಸಲ್ಲಿಸುತ್ತಿದ್ದರು. ಶಿವನಿಗೆ ತಿಳಿಯದಂತೆ ಸುಮನಸ ಭೂಲೋಕಕ್ಕೆ ಬಂದನು. ವಿದ್ಯಾಕಾಂಕ್ಷಿಯಾಗಿ ಅನೇಕ ದೇಶಗಳನ್ನು ಸುತ್ತಿದನು. ಒಮ್ಮೆ ಮುಷ್ಟ್ಯಕ್ಷರ ಮದ ಫಲತತಿಯನ್ನು ನೋಡುತ್ತ ಕಾಣದೆ ನೆಲದ ಮೇಲಿದ್ದ ಗಿಣಿಯ ಮರಿಯೊಂದನ್ನು ಮೆಟ್ಟಿದನು. ಗಿಣಿಯ ಮರಿಯು ಸಾವಿನಿಂದ [illegible] ತಂದೆ ತಾಯಿಯರು ಶೋಕಿಸಿದರು. ಇದರಿಂದ ಚಿಂತಿತನಾದ ಸುಮನಸ ಎದುರಿಗೆ ಬಂದ ಸನಂದಮುನಿಗೆ ಹೇಳಿದನು. [illegible] ಕಲ್ಲಿನಿಲಯದ ತಿಮ್ಮ ನೆಲೆಸಿದ್ದಾನೆ. ವೇದಶಿಖಿಗಳ ಬಳಿ [illegible] ಎಂದು ತಿಳಿಸಿದನು. ಸುಮನಸನು ವೇದಶಿಖಿಗಳ ಮುಂದೆ ಸತ್ತ ಗಿಣಿಮರಿಯನ್ನು ಇರಿಸಿದನು. ಆಗ ವೇದಶಿಖಿಗಳು "ಯಾವುದೇ ಪ್ರಾಣಿ [illegible] ಸಾಯಬಾರದು" ಎಂದು ಹೇಳಿ ದಿವ್ಯಜ್ಞಾನದಿಂದ ಗಿಣಿಯ ವಿಚಾರವನ್ನು ತಿಳಿದು ಹೇಳಿದರು—

ಮೇರುವಿನ [illegible] ಪ್ರಸನ್ನರಾಮವಿಭು [illegible] ಆ ದೇವಾಲಯದ [illegible] ಮುನಿಯಿದ್ದಾನೆ. ಅವನ ಶಿಷ್ಯ ಏಕಕುಂಡಲ. ಒಮ್ಮೆ ಸಾಧಕನೊಬ್ಬ ಮುನಿಗೆ ವಂದಿಸಿ ಹಿಂದಿರುಗುವಾಗ ಗೋಲಾಂಗೂಲದ (ಕಪಿ) ಮರಿಯೊಂದನ್ನು ಹಿಡಿದುಕೊಂಡು ಹೋಗುತ್ತಿದ್ದನು. ಏಕಕುಂಡಲಿ ಬೇಡವೆಂದರೂ ಆತ ಬಿಡಲಿಲ್ಲ. ವಾದವಿವಾದವಾಗಿ ಯತೀಶ್ವರನ ಬಳಿಗೆ ಸಾಧಕನನ್ನು ಕರೆದುಕೊಂಡು ಹೋದನು. ಸಾಧಕನನ್ನು ಕಂಡು ಮುನಿ ಕೋಪಿಸಿ, [illegible] ಗಿಳಿಯ ಬಸಿರಲ್ಲಿ ಜನಿಸು ಎಂದು ಶಪಿಸಿದನು. ಸಾಧಕ ಭಯಭೀತನಾಗಿ ವಿಮೋಚನವನ್ನು ಕೇಳಿದನು. "ನಿನ್ನ [illegible] ಗಿಳಿಯ ಬಸಿರಲ್ಲಿ ಜನಿಸು. ಅಲ್ಲಿಗೆ ಬರುವ ವಿದ್ಯಾರ್ಥಿ ಸುಮನಸನ ಕಾಲ್ತುಳಿತದಿಂದ [illegible] ಇಲ್ಲಿಗೆ ಬಾ" ಎಂದು ಹೇಳಿದನು. ಹಾಗಾಗಿ ಈ ಗಿಳಿಗೆ [illegible] ಕಾಲ್ತುಳಿತದಿಂದ ಸತ್ತ [illegible]

ಯನ್ನು ನೀನು ತಿಳಿಯೆ. ಅದನ್ನು ನಾವು ತಿಳಿದುದರಿಂದ ನಿನಗೆ ಶಾಪವುಂಟಾಯಿತು. ನೀನು ವಸಂತಕಾಪುರದ ಒಡೆಯನ ಮಗ ಮದನವಿಜಯನಿಗೆ ಕುದುರೆಯಾಗು ಎಂದನು. ನಾನು ವಿಶಾಪವನ್ನು ಕೇಳಲು ಮದನವಿಜಯರಾಜನನ್ನು ಹೇಮಶೈಲದ ಪುರಹರನ ಆಲಯಕ್ಕೆ ತಂದಾಗ ವಿಶಾಪ ಎಂದನು. ಆದುದರಿಂದ ನೀನೇರುವ ಕುದುರೆಯಾಗಿ ನಾನು ಇಲ್ಲಿಗೆ ತಂದೆನೆಂದು ಸುಮನಸ ಹೇಳಿದನು.

ಜಿಂಕೆಯಾಗಿದ್ದ ಯಕ್ಷ ಮುಂದುವರೆಸಿದನು–

ರುಭವನ ಕಥೆ

ನನ್ನ ಹೆಸರು ರುಭವ. ಇಂದ್ರ ನಮ್ಮ ಒಡೆಯ. ಶಿವನನ್ನು ಪೂಜಿಸುತ್ತೇವೆ. ನಾವು ಗಗನಗಾಮಿಗಳು, ಇಚ್ಛಾರೂಪಿಗಳು. ನನ್ನನ್ನು ವಂಚಿಸಿ ಸುಮನಸ ಭೂಮಿಗೆ ಬಂದನು. ಆತನನ್ನು ಹುಡುಕಿಕೊಂಡು ಭೂಮಿಗೆ ಬರುವಾಗ ಒಂದು ಸೋಜಿಗವಾಯಿತು. ಅದೇನೆಂದರೆ, ಆಕಾಶಮಾರ್ಗದಲ್ಲಿ ಬರುವಾಗ ಒಂದು ಅರಣ್ಯದಲ್ಲಿ ಬ್ರಹ್ಮರಾಕ್ಷಸನ ದರ್ಶನವಾಯಿತು. ಆತ ಹೇಳತೊಡಗಿದನು–

ಮಲಯಾಚಲದಲ್ಲಿ ಪೂರ್ಣಭದ್ರ ಎನ್ನುವ ಋಷಿ. ಮಲಯಾಚಲದಸಾನುವಿನಲ್ಲಿ ಸುಸೇವ್ಯನೆಂಬ ಋಷಿ. ಪೂರ್ಣಭದ್ರನ ತಪಃ ಪ್ರಭಾವದಿಂದ ಸುಸೇವ್ಯನ ತಪಸ್ಸಂಚಲವಾಯಿತು. ಕೋಪದಿಂದ ಆತ ದೊಡ್ಡ ಕಲ್ಲೊಂದನ್ನು ಪೂರ್ಣಭದ್ರನ ಮೇಲೆ ಎಸೆದನು. ಈಶ್ವರಪ್ರೇರಣೆಯಂತೆ ಕಣ್ಣು ತೆರೆದು ನೋಡಿದ ಪೂರ್ಣಭದ್ರ ಸುಸೇವ್ಯನಿಗೆ ಬ್ರಹ್ಮರಾಕ್ಷಸನಾಗೆಂದು ಶಪಿಸಿದನು. ಆತ ದುಃಖದಿಂದ ಬೇಡಲು ಪೂರ್ಣಭದ್ರಮುನಿ ನೀನು ಈ ಕಾಡಿನಲ್ಲಿ ಇರು. ಆಕಾಶಮಾರ್ಗವಾಗಿ ವಿದ್ಯಾಧರ ಬರುತ್ತಾನೆ. ಆತನ ನೆರಳು ನಿನ್ನ ಮೇಲೆ ಬಿದ್ದರೆ ನಿನಗೆ ಶೀತದ ಅನುಭವವಾಗುತ್ತದೆ. ಆತನನ್ನು ಅಡ್ಡಗಟ್ಟು. ಆತ ನಿನ್ನ ಹಿಂದೆ ಬರುತ್ತಾನೆ. ಆವನಲ್ಲಿ ನೀನು ನನ್ನನ್ನು ಕೊಲ್ಲಲು ಪ್ರಯತ್ನಪಟ್ಟುದನ್ನು ಹೇಳು. ಆತ ಅದನ್ನು ಸ್ವರ್ಗದಲ್ಲಿ ಹಾಡುತ್ತಾನೆ. ನಿನ್ನ ಪಾಪ ಪರಿಹಾರವಾಗುತ್ತದೆ. ಅನಂತರ ಭೂಲೋಕದಲ್ಲಿಯೂ ಇದನ್ನು ತಿಳಿಸು. ನಿನ್ನ ಪಾಪ ಹರಿಯುತ್ತದೆ ಎಂದನು. ಅಲ್ಲಿಂದ ಬಂದು ತಪಸ್ಸನ್ನು ಮಾಡು ಎಂದನು. ನನ್ನ ಪೂರ್ವಜನ್ಮದ ಪುಣ್ಯದಿಂದ ನೀನು ಇಲ್ಲಿ ಬಂದಿದ್ದೀಯೆ. ನಾನು ಮಾಡಿದ ಅನ್ಯಾಯವನ್ನು ಕೇಳು ಎಂದು ಎಲ್ಲವನ್ನೂ ಹೇಳಿದನು. ಆತನ ಪಾಪ ಹರಿಯಿತು. ಶಾಪಪರಿಹಾರವಾಗಿ ಸುಸೇವ್ಯನಿಗೆ ಯತಿತನ ಉಂಟಾಯಿತು. ಅನಂತರ ನಾನು ಮುಂದುವರೆದು ಆಕಾಶ ಮಾರ್ಗದಲ್ಲಿ ಬರುವಾಗ ಜಂಬೂನಗದ ತಪ್ಪಲಿನಲ್ಲಿದ್ದ ಲಂಬಾನನನೆಂಬ ಋಷಿಯನ್ನು ಕಂಡೆನು–

ಹಾರುವ ಹುಲಿಯಾದ ಕಥೆ

ಲಂಬಾನನಮುನಿಗಳನ್ನು ಕಂಡು ವಂದಿಸಿದೆನು. ಅವರ ಆಶ್ರಮದಲ್ಲಿ ಒಂದುಕಡೆ ಎರಡು ಕಾಲನ್ನು ನೆಲದಲ್ಲಿ ಊರಿ ಎರಡು ಕಾಲನ್ನು ಮೇಲೆತ್ತಿ ಸೂರ್ಯನನ್ನು ನೋಡು

ತ್ರಿಪುರ ಚಿತ್ರಕಾಯ (ಹುಲಿಯನ್ನು)ವನ್ನು ನೋಡಿದೆನು. ಆ ಬಗ್ಗೆ ಲಂಬಾಸನ ಮುನಿ ಗಳನ್ನು ಕೇಳಲು ಅವರು ಹೀಗೆ ತಿಳಿಸಿದರು–

ಮಹಾಬಲಪ್ಪನ ಅನಂತಪುರದಲ್ಲಿ ಗಣದೀಕ್ಷಿತನೆಂಬ ಬ್ರಾಹ್ಮಣ. ಆತನ ಹೆಂಡತಿ ಜಾತಾಯಿ. ಬ್ರಾಹ್ಮಣ ಹೆಂಡತಿಯ ಮೇಲಿನ ಕ್ರೋಧದಿಂದ ಸತ್ತನು. ಚಿತ್ರಗುಪ್ತರು ಯಮನ ಮುಂದೆ ಈತ ಹೆಂಡತಿಯ ಮೇಲಿನ ಕ್ರೋಧದಿಂದ ಸತ್ತನು. ಶಿವಧ್ಯಾನವಿಲ್ಲ ದೆಂದರು ಈತನಿಗೆ ವ್ಯಾಘ್ರಜನ್ಮ ಲಭಿಸುತ್ತದೆ ಎಂದರು. ಅನಂತರ ಆ ಬ್ರಾಹ್ಮಣನಿಗೆ ಲಂಬಾಸನ ಮುನಿಯ ಆಶ್ರಮದಲ್ಲಿ ಹುಲಿಯಾಗಿ ಜನಿಸು ಆತನಿಂದ ನಿನಗೆ ಮೋಕ್ಷ ಎಂದರು.

ಚಿತ್ರಗುಪ್ತರ ಮಾತಿನಂತೆ ಆತ ಇಲ್ಲಿ ಹುಲಿಯಾಗಿ ಜನಿಸಿದನು. ಎಲ್ಲ ಮೃಗ ಗಳಂತಲ್ಲ. ನಮ್ಮನ್ನು ಬಿಟ್ಟು ಅಗಲುವುದಿಲ್ಲ. ನಾವು ಇದಕ್ಕೆ ಬೋಧಿಸಿದೆವು. ಆದುದರಿಂದ ಅದು ಶಿವಧ್ಯಾನದಿಂದ ತಪದಲ್ಲಿದೆ ಎಂದು ಲಂಬಾಸನ ಮುನಿಗಳು ತಿಳಿಸಿ ದರು ಎಂದು ಋಭವನು ಮದನವಿಜಯರಾಯನಿಗೆ ತಿಳಿಸಿದನು. ಲಂಬಾಸನ ಮುನಿಗಳ ಆಶ್ರಮದಲ್ಲಿ ಮೂರುದಿನ ಇದ್ದು ಬರುವಾಗ ನನಗೆ ಶಾಪ ಸಂಭವಿಸಿತು. ಆ ವಿವರವನ್ನು ಕೇಳು.

ಗಗನಗಾಮಿಯಾಗಿ ಗಂಗೆಗೆ ಬಂದೆನು. ಹಾಗೆ ಬರುವಾಗ ಗಂಗಾನದಿಯ ಮಧ್ಯದ ಬೆಟ್ಟದ ತುದಿಯಲ್ಲಿ ವಿಶ್ವರೂಪ ಎನ್ನುವ ಮುನಿ ಲಿಂಗವನ್ನು ಪೂಜಿಸುತ್ತಿದ್ದನು. ನನ್ನ ನೆರಳು ಆತನ ಮೇಲೆ ಬೀಳಲು ಮೇಲೆ ನೋಡಿ "ಇವನು ಯಾರು ? ಜಿಂಕೆಯಂತೆ ಲಿಂಗವನ್ನು ನೋಡುತ್ತಿದ್ದಾನೆ" ಎನ್ನುವಷ್ಟರಲ್ಲಿ ನಾನು ಜಿಂಕೆಯಾಗಿ ಯತೀಶನನ್ನು ಸಮೀಪಿಸಿದೆನು. ದೈನ್ಯವಚನದಿಂದ ಹರಿಣರೂಪವನ್ನು ಕಳೆ ಎಂದೆನು. ನಾನು ದೇವಲೋಕದಿಂದ ಬಂದ ದನ್ನು ಆತ ತಿಳಿದು ಈ ಶಾಪದಿಂದ ನಿನ್ನ ಇಷ್ಟ ಫಲಿಸುತ್ತದೆ ಎಂದನು. ಋಷಿಶಾಪದಿಂದ ಸುಮನಸನು ಮದನವಿಜಯರಾಯನಿಗೆ ಕುದುರೆಯಾಗಿದ್ದಾನೆ. ತನ್ನ ಶಾಪ ಪರಿಹಾರ ವನ್ನು ಮರೆತಿದ್ದಾನೆ. ಆತನ ಶಾಪಪರಿಹಾರಕ್ಕಾಗಿ ಜಿಂಕೆಯಾಗು ಎಂದನು. ವಿಶಾಪ ಎಂದಿಗೆ ಎಂದೆನು. ಬೇಟೆಗೆಂದು ಮದನ ವಿಜಯರಾಯ ಕುದುರೆಯಾಗಿರುವ ಸುಮನಸನ ಮೇಲೆ ಬರುತ್ತಾನೆ. ನೀನು ಆತನ ಕಣ್ಣ ಮುಂದೆ ಜಿಂಕೆಯಾಗಿ ಸುಳಿದು ಆತನನ್ನು ಸುವರ್ಣಾಕ್ಷಿಲದ ತ್ರಿಪುರಾಂತಕ ದೇವಾಲಯಕ್ಕೆ ಕರೆದುಕೊಂಡು ಬಾ" ಎಂದನು. ನಾನು ಹಾಗೆ ಮಾಡಿದೆ. ನನ್ನ ಶಾಪ ಪರಿಹಾರವಾಯಿತು. ನಾವು ನಿನಗೆ ಏನನ್ನು ತಾನೇ ಮಾಡಬಲ್ಲೆವು. ಈ ರತ್ನಕುಂಡಲಗಳನ್ನು ತೆಗೆದುಕೊ, ಇವನ್ನು ಧರಿಸಿದರೆ ನಿನಗೆ ಹಸಿವು, ನಿದ್ರೆ, [illegible] ಗಳು ತೊಡಕುವುದಿಲ್ಲ ಎಂದನು. ಮದನವಿಜಯ ಆ ಕುಂಡಲಗಳನ್ನು ಧರಿಸಿ ಅಪೂರ್ವ ರೂಪಿನಿಂದೆಸೆದನು. ಒಬ್ಬರನ್ನೊಬ್ಬರು ಆಲಿಂಗಿಸಿ ಮದನವಿಜಯ ಭೂಪಾಲನಿಗೆ ಪರ್ವತದ ಮಹತ್ವವನ್ನು ಹೇಳಿದರು.

ಪರ್ವತದ ಮಹತ್ತ್ವ

ಪರ್ವತದ ಮಹತ್ತ್ವವನ್ನು ಯಾರು ತಾನೆ ಬಣ್ಣಿಸಬಲ್ಲರು. [illegible] [illegible] ಭೂಮಿಜಗಳು ಕಲ್ಪವೃಕ್ಷಗಳು. [illegible]

ತತಿಯೆಲ್ಲ ದೇವತಾಂಶಗಳು. ಇಲ್ಲಿರುವ ದೇವತಾಭವನ, ಮುನಿವೃಂದ, ಸಿದ್ಧರು ಸಾಧ್ಯರುಗಳ ಲೆಕ್ಕ ತಿಳಿಯದು. ಇಲ್ಲಿರುವ ಚರಾಚರ ಮುಖ್ಯ ಸಮಸ್ತ ಜೀವರಿಗೂ ಭಯವಿಲ್ಲ. ಭವಾನೀಧವನು ಸ್ವರ್ಗಭೋಗವನ್ನು ಕೊಡುತ್ತಾನೆ. ನಿನ್ನ ಧರ್ಮ ನಿನ್ನನ್ನು ಇಲ್ಲಿಗೆ ತಂದಿದೆ. ಈ ಪರ್ವತದಲ್ಲಿ ನಿನಗೆ ಸಿದ್ಧಿಗಳು ದೊರೆಯುತ್ತವೆ. ಒಂಟಿಯಾದೆ ಯೆಂದು ಬೇಸರಬೇಡ. ಉತ್ತರ ದಿಕ್ಕಿನಲ್ಲಿ ಅಂಬರಕೇಶಿಯೆನ್ನುವ ಯತಿ ಇದ್ದಾನೆ. ಆತನನ್ನು ಕಂಡು ವಂದಿಸು ಎಂದು ಪುಷ್ಪಕವೇರಿ ರುಭವ, ಸುಮನಸರು ದೇವಲೋಕಕ್ಕೆ ಹೋದರು.

ಮದನವಿಜಯರಾಯ ತ್ರಿಪುರಾಂತಕ ದೇವರನ್ನು ಕಂಡು ನುತಿಸಿ ವಂದಿಸಿದನು. ಶಿವನ ಶ್ರೀಮುಡಿಯ ಅರಳನ್ನು ಪಡೆದನು. ಉತ್ತರಾಭಿಮುಖವಾಗಿ ಹೊರಟು ಋಷಿ ಸಮೂಹವನ್ನು ಕಂಡು ವಂದಿಸಿ ಗುಹೆಯೊಂದರಲ್ಲಿ ಆಕಾಶಕೇಶಿಗಳನ್ನು ಕಂಡು ನಮಸ್ಕರಿಸಿದನು. ಆತನ ಭಕ್ತಿಗೆ ಮೆಚ್ಚಿದ ಋಷಿ ದೂರದೃಷ್ಟಿ, ದೂರಶ್ರವಣ, ನಿಧಿ ನಿಧಾನದ ನೆಲೆಯನ್ನು ಕರುಣಿಸಿದನು. ಇಲ್ಲಿರುವ ಚಂಡಿಕೆಯನ್ನು ಪೂಜಿಸು. ಅನಂತರ ಆ ದೇವಾಲಯದ ಈಶಾನ್ಯ ದಿಕ್ಕಿನಲ್ಲಿರುವ ತ್ರಿಶೂಲದ ಮೇಲೆ ಬೀಳು. ನಿನಗೆ ಅಂಬರಚರ ಮಾರ್ಗ ಮತ್ತು ಎಲ್ಲ ಜೀವಿಗಳು ನುಡಿಯುವ ನುಡಿಯನ್ನು ತಿಳಿಯುವುದನ್ನು ದೇವಿ ಕರುಣಿಸುತ್ತಾಳೆ ಎಂದನು.

ಆಕಾಶಕೇಶಿಗಳನ್ನು ಬೀಳ್ಕೊಂಡು ಮದನವಿಜಯರಾಯ ತ್ರಿಪುರಾಂತಕದೇವ ನಲ್ಲಿಗೆ ಬಂದು ಪೂಜಿಸಿದನು. ಚಂಡಿಕಾಲಯಕ್ಕೆ ಬಂದು ದೇವಿಯನ್ನು ಪ್ರಸನ್ನೆಯಾಗು ಎಂದು ಪ್ರಾರ್ಥಿಸಿ ದೇಶಕೋಶವನ್ನೆಲ್ಲ ಮರೆತು ತ್ರಿಶೂಲದ ಮೇಲೆ ಹಾರಿದನು ಎಂದು ಕಥೆಯನ್ನು ಸುಜ್ಞಾನಿಗಳು ನಿಲ್ಲಿಸಿದರು. ಮಾತಂಗತಮುನಿಗೆ ಕುತೂಹಲ ತಡೆಯಲಾಗ ಲಿಲ್ಲ. "ಅರಸನೇನಾದ? ದೇವಿ ಏನು ಮಾಡಿದಳು? ವರವನ್ನಿತ್ತಳೊ ಕೊಂದಳೊ ?" ಎಂದನು. ಸುಜ್ಞಾನಿಗಳು ಚಂಡಿಕಾದೇವಿ ಆ ದೊರೆಯನ್ನು ಕರುಣೆಯಿಂದ ಮಗುವನ್ನು ಹಿಡಿಯುವಂತೆ ಶೂಲ ಸೋಕದಂತೆ ಹಿಡಿದಳು. ಗಗನಗಮನವನ್ನು, ಜೀವಿಗಳನುಡಿ ಯರಿತವನ್ನು ಮದನವಿಜಯರಾಯನಿಗೆ ನೀಡಿದಳು ಅಲ್ಲದೆ ಇದನ್ನು ಬೇರೆಯವರಿಗೆ ತಿಳಿಸಿದರೆ ಮರಣ ತಪ್ಪದು ಎಂದು ಎಚ್ಚರಿಸಿ ಆತನನ್ನು ಊರಿಗೆ ಕಳಿಸಿದಳು.

ಅರಸನ ಜೊತೆಯಲ್ಲಿ ಬೇಟೆಗೆ ಹೋದವರು. ಊರಿಗೆ ಹಿಂದಿರುಗಿದರು. ಎಲ್ಲೆಲ್ಲಿ ಹುಡುಕಿದರೂ ದೊರೆ ಪತ್ತೆಯಾಗಲಿಲ್ಲ ರತ್ನಪ್ರಭೆಯ ಓಲಗದಲ್ಲಿ ಅಮಾತ್ಯನು ದೊರೆ ಎಲ್ಲಿದ್ದರೂ ಹುಡುಕಿಸಿ ತರುತ್ತೇನೆಂಬ ಮಾತು ಪ್ರಯೋಜನವಾಗಲಿಲ್ಲ. ದೈವಜ್ಞರು ಮೂವತ್ತೊಂದನೆಯ ದಿನಕ್ಕೆ ದೊರೆ ಬರುವನೆಂದು ತಿಳಿಸಿದರು. ಸೇನೆ ಎಲ್ಲೆಡೆ ಅಲೆದು ನಿರಾಶರಾದರು. ರತ್ನಪ್ರಭೆ ಚಿತೆ ಏರುವಷ್ಟರಲ್ಲಿ ಮದನವಿಜಯರಾಯ ಆಕಾಶ ಮಾರ್ಗ ದಲ್ಲಿ ಬಂದು ಆಕೆಯನ್ನು ತಡೆದನು. ಅನಂತರ ಅಂತಃಪುರದಲ್ಲಿ ಒಡ್ಡೋಲಗದಲ್ಲಿ ತಾನು ಹೋದ ಬಂದ ಎಲ್ಲ ವಿಚಾರವನ್ನು ತಿಳಿಸಿದನು.

ಪರಮಪ್ರಜಾನುರಕ್ತನಾಗಿ ದೊರೆ ರಾಜ್ಯವಾಳುತ್ತಿದ್ದನು. ಒಂದು ದಿವಸ ರತ್ನಪ್ರಭೆ ದೊರೆಯೊಡನೆ ಚಂಡಿಕಾದೇವಿ ನಿನಗೆ ಎಲ್ಲ ಪ್ರಾಣಿಗಳ ಮಾತು ಅರಿಯುವ

ಪಕ್ಷಿ ಯಸ್ಸಿತ್ರಿವ್ವಾಳೆ. ನನಗೆ ಅದನ್ನು ತಿಳಿಸು ಎಂದನು. ತನ್ನ ರಾಣಿಗೆ ದೇವಿ ಹೇಳಿದ್ದ ಯಾರಿಗಾದರೂ ತಿಳಿಸಿದರೆ ಮರಣ ' ಎನ್ನುವ ಮಾತನ್ನು ದೊರೆ ತಿಳಿಸಿದನು. ಆಕೆ ಹಟ ಹಿಡಿದಳು. ನಾಲ್ಕು ದಿನ ಕಳೆಯಲಿ ತಿಳಿಸುತ್ತೇನೆ ಎಂದಾಗ ರತ್ನಪ್ರಭೆ ಆತನೊಡನೆ ಸಂತೋಷವಾಗಿದ್ದಳು. ಆ ಮರುದಿನ ದೊರೆ ಜಲಕ್ರೀಡೆಯನ್ನು ಆಡಿ ಸ್ತ್ರೀ ಸಮೂಹ ದಲ್ಲಿದ್ದನು ಆಗ–

ಆ ಕಾಲದಲ್ಲಿ ಒಂದು ಮಾವಿನ ಮರ ಹಣ್ಣನ್ನು ಬಿಟ್ಟಿತು. ಹೆಣ್ಣುಗಿಳಿಯೊಂದು ಕೊಕ್ಕಿನಿಂದ ಅದನ್ನು ಕುಟುಕಿತು. ಆ ಹಣ್ಣು ನೀರಿಗೆ ಬಿದ್ದಿತು. ಅದು ತನ್ನ ಗಂಡ ನಿಗೆ ತಿಳಿಸಿತು. ಎಷ್ಟು ಶ್ರಮ ಪಟ್ಟರೂ ಗಂಡುಗಿಣಿಯಿಂದ ಆ ಹಣ್ಣನ್ನು ನೀರಿನಿಂದ ತೆಗೆಯಲು ಆಗಲಿಲ್ಲ. ಹೆಣ್ಣುಗಿಳಿ ಕೋಪದಿಂದ “ನೀನು ಆ ಹಣ್ಣನ್ನು ತಂದುಕೊಡ ದಿದ್ದರೆ ನಾನು ಬೇರೆಯವನೊಂದಿಗೆ ಇರುತ್ತೇನೆ” ಎಂದಿತು. “ನನ್ನ ಪ್ರಾಣ ಇದ್ದರೆ ನಿನ ಗಿಂತ ಚೆನ್ನಾದವಳನ್ನು ಕೂಡಿ ಸುಖದಲ್ಲಿರುವೆ. ನನ್ನ ಪ್ರಾಣವನ್ನು ಲೆಕ್ಕಿಸದ ನೀನು ನನ್ನೊಡನಿರಬೇಡ” ಎಂದು ಹೆಣ್ಣುಗಿಳಿಯನ್ನು ಹೊರಹಾಕಿತು. ಮದನ ವಿಜಯರಾಯ ಆ ಮಾತನ್ನು ಕೇಳಿ ಹೀಗೆಂದನು. ಗಿಳಿಯೇ ಈ ಮಾತು ಹೇಳಿತು. ಆದುದರಿಂದ ನಾನು ಆಕೆಗೆ ಈ ವಿದ್ಯೆಯನ್ನು ಕಲಿಸಿ ಸಾಯುವುದು ಸಲ್ಲದು.

ಮದನವಿಜಯ ಹೇಳಿದ್ದ ನಾಲ್ಕನೆಯ ದಿನ ಬಂದಿತು. ಸರ್ವಾಲಂಕಾರಭೂಷಿತ ಳಾಗಿ ರತ್ನಪ್ರಭೆ ಬಂದಳು. ಆತ ವಿದ್ಯೆಯನ್ನು ಹೇಳಿ ಕೊಡಲಿಲ್ಲ. ಮಾತಿಗೆ ಮಾತು ಬೆಳೆಯಿತು. “ನನ್ನ ರೂಪು, ಗುಣ ವಿವೇಕಕ್ಕೆ ಮೆಚ್ಚದ ಭೂಪನು ಯಾವನು ?” ಎಂದ ಮಾತಿಗೆ ಮದನವಿಜಯ ಕೋಪಿಸಿ ಆಕೆಯನ್ನು ದಾಸಿಯರ ಗುಂಪಿಗೆ ತಳ್ಳಿದನು. ರತ್ನ ಪ್ರಭೆ ಬೇರೊಬ್ಬನ ಹೆಸರು ಹೇಳಿದುದಕ್ಕೇ ತನ್ನ ಪ್ರಾಣೇಶ್ವರಿಯನ್ನು ಮದನವಿಜಯ ಬಿಟ್ಟನು. ಆದರೆ ಈಗ ನಿನ್ನ ಹೆಂಡತಿ ನಿನ್ನನ್ನು ಬಿಟ್ಟು ತನ್ನ ಮುನ್ನಿನ ಗಂಡನೆಂದು ಮುತ್ತುಗನ ಹಿಂದೆ ಹೋಗಿದ್ದಾಳೆ. ನೀನು ಆಕೆಯ ಮುಖವನ್ನು ಕೂಡ ನೋಡ ಬಾರದೆಂದು ಮಾತಂಗತನುನಲ್ಲಿ ಭಿನ್ನವನ್ನು ಹುಟ್ಟಿಸಿದರು. ಮಾತಂಗತನು ತನ್ನ ಹೆಂಡ ತಿಯ ಮೇಲಿನ ಆಸೆಯನ್ನು ತೊರೆದನು. ಕನ್ನುಗನನ್ನು ಊರಿಗೆ ಕಳಿಸಿದನು. ಸುಜ್ಞಾನಿ ಗಳ ಮುಂದೆ ಇದ್ದನು

ಸುಜ್ಞಾನಿಗಳು ಮಾತಂಗತನುನ ಮಾನಸಿಕ ಸಂಚಲನವನ್ನು ಗುರುತಿಸಿದರು. ಆತನ ಆಶಾಪಾಶವನ್ನು ಬಿಡಿಸಬೇಕೆಂದು ಸಂಕಲ್ಪಿಸಿದರು. ಕಾರುಣ್ಯವಲೋಕನದಿಂದ ಹೀಗೆ ಪ್ರಶ್ನಿಸಿದರು. “ನಿನಗೆ ತಾಯಿ–ತಂದೆ, ಅಣ್ಣ–ತಮ್ಮಂದಿರು ಇರುವರೆ ?” ಅದಕ್ಕೆ “ಮಾತಂಗತನು ಹೆಂಡತಿ ಬಂಜೆ. ಅಣ್ಣ ತಮ್ಮಂದಿರು ಆಗಲೆ ಸತ್ತರು. ಹುತ್ತದಲ್ಲಿ ಇಲಿಯನ್ನು ಹಿಡಿಯಲು ಕೈ ಹಾಕಿ ತಂದೆ ಹಾವು ಕಡಿದು ಸತ್ತ. ತಾಯಿ ಕೆಮ್ಮಿನ ರೋಗ ದಿಂದ ಸತ್ತಳು” ಎಂದನು. ನಿನ್ನಂಥ ಮಗನಿದ್ದೂ ಅವರು ಸತ್ತರು. ನೀನು ಪಾಪ ಮಾಡಿ ಗಳಿಸಿದ ಹಣವನ್ನು ಎಲ್ಲರೂ ಭೋಗಿಸುವರೆ ? ಆದರೆ ಆ ಪಾಪ ಕರ್ಮಕ್ಕೆ ನೀನು ಮಾತ್ರ ಭೋಗಿ. ನೀನು ಸತ್ತರೆ ಹಣ ಎಲ್ಲಿ? ಅವನ್ನು ನಿಲ್ಲಿಸಿ ಸ್ನಾನಮಾಡಿ

ದಲ್ಲಿದೆ ಮನೆಗೆ ಬಾರರು. ಹೀಗಾಗಿ ಶರೀರ ಅಸ್ಥಿರ. ನರಜನ್ಮ ಸಿಕ್ಕಿದಾಗ ಪರಗತಿ ಸಾಧಿಸಿಕೊಳ್ಳಬೇಕು. ಕೊಲೆ ಹೊಲೆ ಮಾಂಸವನ್ನು ತಿನ್ನಬಾರದು ಎನ್ನಲು ಮಹಾರಾಜನೆಂಬ ಅರಸನ ಕಥೆಯನ್ನು ಹೇಳಿದರು—

ಮಹಾರಾಜನೆಂಬರಸನ ಕಥೆ

ಮಹಾರಾಜನೆಂಬ ಅರಸು ಅನೆಗಳಲೆ ಎಂಬ ಗಿರಿದುರ್ಗವನ್ನು ಆಳುತ್ತಿದ್ದನು. ಅತನಿಗೆ ಮನುಷ್ಯ ಮಾಂಸದ ಮೇಲೆ ಆಸೆ. ದಾಸಿಯರ ಮಕ್ಕಳನ್ನು ಹತ್ತು ವರ್ಷದವರೆವಿಗೆ ಚೆನ್ನಾಗಿ ಸಾಕುತ್ತಿದ್ದನು. ತಿಂಗಳಿಗೆ ಒಬ್ಬನ ಕೈಯಲ್ಲಿ ಒಂದು ನಿಂಬೆಹಣ್ಣನ್ನು ಕೊಟ್ಟು ಅಡಿಗೆ ಮನೆಗೆ ಕಳಿಸುತ್ತಿದ್ದನು. ಸಂಕೇತವನ್ನು ಅರಿತ ಅಡಿಗೆಯವರು ಆತನನ್ನು ಕೊಲ್ಲುತ್ತಿದ್ದರು. ಆತನ ರಕ್ತಮಾಂಸವನ್ನು ಅಟ್ಟು ರಾಜನಿಗೆ ಉಣಬಡಿಸುತ್ತಿದ್ದರು.

ಹೀಗಿರಲು ಆತನಿಗೆ ಬಹಳಕಾಲ ಮಕ್ಕಳಿರಲಿಲ್ಲ. ಹರಕೆ ಹೊತ್ತು ಒಬ್ಬ ಮಗನನ್ನು ಪಡೆದನು. ಓರಗೆಯ ದೊರೆಗಳಲ್ಲಿ ಹೆಣ್ಣು ತಂದು ಮದುವೆ ಮಾಡಿದನು. ಶಸ್ತ್ರಾಭ್ಯಾಸದಲ್ಲಿ ರಾಜಕುಮಾರ ಪಾರಂಗತನಾದನು. ಹತ್ತು ವರ್ಷಗಳು ತುಂಬಿದುವು. ಎಂದಿನಂತೆ ರಾಜ ಒಬ್ಬ ದಾಸೀಪುತ್ರನನ್ನು ಕರೆದು ನಿಂಬೆಯಹಣ್ಣನ್ನು ಕೊಟ್ಟು ಅಡಿಗೆ ಮನೆಗೆ ಕಳಿಸಿದನು. ದಾರಿಯಲ್ಲಿ ಆತನ ಒಡನಾಡಿಯಾದ ರಾಜಕುಮಾರ ಸಿಕ್ಕಿದನು. "ವೈಹಾಳಿಗೆ ಹೋಗಲು ಎಳಗನನ್ನು ಹಲ್ಲಣಿಸಿ ತಾ" ಎಂದನು. ದೊರೆ ಕೊಟ್ಟಿದ್ದ ನಿಂಬೆಯ ಹಣ್ಣನ್ನು ತೆಗೆದುಕೊಂಡು ತಾನೇ ಅಡಿಗೆಮನೆಗೆ ಹೋದನು. ಅಡಿಗೆಯವರು ಆತನನ್ನು ಕೊಂದು ಅಡಿಗೆ ಮಾಡಿದರು. ಊಟಕ್ಕೆ ಬಂದದೊರೆ ಮಗನನ್ನು ಕರೆಯಿರಿ ಎಂದನು. ಅವರು ನಡೆದ ಸಂಗತಿಯನ್ನು ತಿಳಿಸಿದರು. ದೊರೆ ದುಃಖಿಸಿ ಚಿತೆ ಏರಿದನು. ರಾಣಿಯೂ ಬೆಂಕಿಗೆ ಬಿದ್ದಳು. ರಾಜನಿಗೆ ಅಪಕೀರ್ತಿಯುಂಟಾಯಿತು. ಆದುದರಿಂದ ಮಾಂಸದ ಆಸೆ ಬೇಡವೆಂದು ಹರನಾಮಸ್ಮರಣೆಯ ಕಥೆಯನ್ನು ಹೇಳಿದರು.

ಆಹರಪ್ರಹರನ ಕಥೆ

ಅರಣ್ಯಮಧ್ಯದಲ್ಲಿದ್ದ ಸೇವ್ಯನೆಂಬ ಶಬರನಿಗೆ ಆಹರ–ಪ್ರಹರ ಎನ್ನುವ ಇಬ್ಬರು ಮಕ್ಕಳು. ತಾವು ತಿನ್ನುವುದನ್ನು ಆಹರ ಎಂದೂ ಕೊಲ್ಲುವುದನ್ನು ಪ್ರಹರ ಎಂದೂ ಇಬ್ಬರು ಮಕ್ಕಳನ್ನು ಕರೆಯುತ್ತಿದ್ದನು. ಅಂತ್ಯಕಾಲದಲ್ಲಿ ಆತ ತನ್ನ ಮಕ್ಕಳನ್ನು ಕಾಣದೆ ಆಹರ–ಪ್ರಹರ ಎಂದು ಕರೆಯುತ್ತ ಪ್ರಾಣಬಿಟ್ಟನು. ಯಮಲೋಕದಲ್ಲಿ ಆತನ ಪಾಪಕ್ಕೆ ಆತ ಎಂಜಲಹುಳುವಾಗಿ ಹುಟ್ಟಬೇಕು. ಆದರೆ ಸಾಯುವಾಗ "ಆಹರ-ಪ್ರಹರ" ಎಂದು ಕರೆದುದರಿಂದ ಹರನಾಮಸ್ಮರಣೆ ಸಂಗಡಿಸಿತು. ಇದರ ಫಲ ಶಿವಲೋಕ ಎಂದರು. ಶಿವಲೋಕದಲ್ಲಿ ಆತನಿಗೆ ಗಣಪದವಿ ಲಭಿಸಿತು. ಶಿವಭಕ್ತರನ್ನು ಅವರ ಘನವನ್ನು ನೆನೆದವರಿಗೆ ಮೋಕ್ಷವಾಯಿತು ಎಂದು ಒಂದು ಕಥೆಯನ್ನು ಹೇಳಿದರು.

ಹರಗಣ ನಾಮಸ್ಮರಣ ಕಥೆ

ದುರುಳನೂ ದುರ್ಗುಣನೂ ಆದ ಒಬ್ಬ ಒಕ್ಕಲಿಗನಿದ್ದನು. ಆತ ಧರ್ಮಕ್ಕೆ ಒಂದು ಕಾಣಿಯನ್ನು ಕೊಡಲಿಲ್ಲ. ಎಪ್ಪತ್ತು ವರ್ಷ ತುಂಬಿ ಸಾಯುವಾಗ "ಹೊಲದಲ್ಲಿ ಹರಗಣ ನಿಂತಿತು ಹರಗಣ ನಿಂತಿತು" ಎಂದು ಚಿಂತಿಸಿ ಸತ್ತನು. ಆತನನ್ನು ಯಮದೂತರಿಗೆ ಬಿಡದೆ ಶಿವದೂತರು ಕೈಲಾಸಕ್ಕೆ ಕರೆದೊಯ್ದರು. ಇದರಿಂದ ಕುಪಿತನಾದ ಧರ್ಮರಾಜ ಕೈಲಾಸಕ್ಕೆ ಹೊರಟನು. ಆಗ ಚಿತ್ರಗುಪ್ತರು ಆತನನ್ನು ತಡೆದು ಈತನಿಗೆ ಎಕ್ಕಲನರಕ ಪ್ರಾಪ್ತವಾದರೂ ಸಾಯುವಾಗ ಹೊಲದಲ್ಲಿ ಹರಗಣವುಳಿಯಿತು ಎನ್ನುತ್ತ ಸತ್ತನು. ಆದುದರಿಂದ ಈತನ ಪಾಪ ಪರಿಹಾರವಾಗಿ ಈಶಪುರದ ವಾಸವಾಯಿತು ಎಂದು ಸಂತೈಸಿದನು. ಯಮಧರ್ಮನು ಶಿವಗಣಗಳ ನಾಮಸಾಮರ್ಥ್ಯಕ್ಕೆ ಆಶ್ಚರ್ಯಪಟ್ಟು ತನ್ನ ದೂತರಿಗೆ ರುದ್ರಾಕ್ಷಿ ವಿಭೂತಿ ಧರಿಸಿ ಶಿವಮಂತ್ರ ಜಪಿಸುವವರ ಹತ್ತಿರ ಹೋಗಬೇಡಿ ಎಂದನು. ಮಾತಂಗ ಮುನು ವಿಭೂತಿ ರುದ್ರಾಕ್ಷಿ ಧರಿಸಿ ಗತಿಪಡೆದವರುಂಟೆ ಎಂದನು. ಆ ಮಾತಿಗೆ ಸುಜ್ಞಾನಿಗಳು ಧರ್ಮೋಪೋಕ್ಷ್ಯವಾದ ಕಥೆಯನ್ನು ಹೇಳಿದರು—

ವಿಭೂತಿಮಹಾತ್ಮೆ

ಜೀವನಪರ್ಯಂತ ಪ್ರಾಣಿಹಿಂಸೆ ಮಾಡಿದ ಬೇಡನೊಬ್ಬ ಊರ ಮುಂದಿನ ಹಾಳು ಮಂಟಪದಲ್ಲಿ ನರಳುತ್ತ ಬಿದ್ದಿದ್ದನು. ಆತ ಸಾಯುವ ಕಾಲಕ್ಕೆ ಸರಿಯಾಗಿ ಮೈತೀಟೆಯನ್ನು ಕಳೆಯಲು ಬೂದಿಯ ಮೇಲೆ ಹೊರಳಾಡಿದ ನಾಯಿಯೊಂದು ಅಲ್ಲಿಗೆ ಬಂದಿತು. ಆ ವ್ಯಾಧನನ್ನು ಮೆಟ್ಟಲು ಅದರ ಕಾಲಿನ ಬೂದಿ ಆತನ ಮೈಮೇಲೆ ಬಿದ್ದಿತು. ಆತ ಸಾಯಲು ಯಮದೂತರು ಆತನ ಜೀವವನ್ನು ಎಳೆದೊಯ್ಯಲು ಬಂದರು. ಆತನ ಮೈಮೇಲಿನ ಬೂದಿಯನ್ನು ನೋಡಿ ಹೆದರಿ ಸುಮ್ಮನೆ ನಿಂತರು. "ಒಬ್ಬನು ಏಕೆ ಬಂದಿರಿ ? ಸುಮ್ಮನೆ ನಿಂತಿದ್ದೀಕೆ ?" ಎಂದನು. ಆಗ ಉಗ್ರಕಾಳನು ಮಾರ್ಕಂಡೇಯನ ಕಥೆಯನ್ನು ಹೇಳಿದನು. ಭಸಿತ ಈತನ ಶರೀರದ ಮೇಲೆ ಇರುವುದರಿಂದ ಈತನನ್ನು ಯಮಲೋಕಕ್ಕೆ ತೆಗೆದುಕೊಂಡು ಹೋಗಬಾರದು ಎಂದು ಶಿವಲೋಕಕ್ಕೆ ಕಳಿಸಿದರು.

ರುದ್ರಾಕ್ಷಿ ಮಹಾತ್ಮೆ

ಬೇಸಗೆಯಲ್ಲಿ ಬೇಡನೊಬ್ಬ ಬೇಟೆಯಾಡುತ್ತ ಬಳಲಿದ. ಒಂದು ಕಡೆ ನೀರು ಕುಡಿದು ಕುಳಿತಿರುವಾಗ ಅಲ್ಲಲ್ಲಿ ಉದುರಿರುವ ಹಣ್ಣನ್ನು ಕಂಡ. ಹಣ್ಣು ತಿಂದು ಉಳಿದ ಬೀಜವನ್ನು ತೂತು ಮಾಡಿ ನಾಯಿಯ ಹಾಸಿಗೆ ಕಟ್ಟಿದ. ಮಾರನೆಯ ದಿನ ಉಗ್ರಕೇಮನೆಂಬ ಆ ನಾಯಿಯನ್ನು ಕಂಡು ಮೃಗಗಳು ಬೆದರಿದುವು. ಹಂದಿಯೊಂದು ಆ ನಾಯಿಯನ್ನು ಕೊಂದಿತು. ಆ ನಾಯಿಯ ಜೀವವನ್ನು ಎಳೆದೊಯ್ಯ ಬಂದ ಯಮದೂತರನ್ನು ಶಿವದೂತರು ಝಂಕಿಸಿದರು. ಆ ನಾಯಿಗೆ ಮುಕ್ತಪದವಾಯಿತು. ಯಮದೂತ ಚಿತ್ರಗುಪ್ತರಿಂದ ಆ ನಾಯಿಯ ವಿವರವನ್ನು ಕೇಳಿ ಸುಮ್ಮನಾದನು. ಮಾತಂಗಕಮುನಿಗೆ

ಸುಜ್ಞಾನಿಗಳು ಶಿವಸ್ಮರಣೆ ಮಾಡಿದರಷ್ಟೇ ಅಲ್ಲ ಅದನ್ನು ಬೇರೆಯವರು ಮಾಡುವಾಗ ಕೇಳಿದರೂ ಶಿವಲೋಕದಿರವಾಗುತ್ತದೆ ಎಂದು ಮುಂದಿನ ಕಥೆ ಹೇಳಿದರು.

ಸಾನಂದದೇವರ ಕಥೆ

ಈ ಕಥೆಯನ್ನು ಸನತ್ಕುಮಾರನಿಗೆ ನಂದೀಶ ಹೇಳಿದನು. ಪುರಾಣ ಮಾರ್ಗದಲ್ಲಿ ಅದನ್ನು ನಾನು ಅರಿತು ತಿಳಿಸುತ್ತೇನೆ ಎಂದರು ಸುಜ್ಞಾನಿಗಳು—

ಶಿವಲೋಕದ ಸಾನಂದದೇವನ ಲಿಂಗ ಪೂಜೆ ಘನ. ಆತನ ಭಕ್ತಿಗೆ ಮೆಚ್ಚಿದ ಶಿವ ಅವನಿಗೆ ವಾಕ್ಸಿದ್ಧಿಯನ್ನಿತ್ತನು. ಒಂದು ದಿನ ಶಿವಪುರಾಣದ ನಾರಕಾಖ್ಯಾನ ಕೇಳಿದ ಸಾನಂದ ಸರ್ವಜೀವದಯಾಪರನಾದುದರಿಂದ ನರಕಿಗಳ ಯಾತನೆಯನ್ನು ಕೊನೆಗೊಳಿಸಬೇಕೆಂದು ಮುನಿಸಮೂಹದೊಡನೆ ಯಮಲೋಕಕ್ಕೆ ಹೋದನು. ಭಯಭಕ್ತಿಯಿಂದ ಎದುರುಗೊಂಡ ಯಮಧರ್ಮನಿಗೆ ನರಕವನ್ನು ನೋಡಬೇಕೆಂದು ತಿಳಿಸಿದನು. ಯಮರಾಜ ಧರ್ಮಸಂಕಟಕ್ಕೆ ಸಿಕ್ಕಿದನು. ಅನಿವಾರ್ಯವಾಗಿ ಸಾನಂದದೇವನಿಗೆ ನರಕವನ್ನು ತೋರಿಸಿದನು. ಯಾವ ಪಾತಕದಿಂದ ಇವರೆಲ್ಲ ಈ ನರಕದಲ್ಲಿದ್ದಾರೆ ಎಂದಾಗ ಯಮಧರ್ಮ ಇವರ ಪಾಪವನ್ನು ಹೆಸರುಗೊಂಡರೆ ಇವರಿಗೆ ಮೋಕ್ಷವಾಗುತ್ತದೆ ಎಂದನು. ನಾನಾ ಪ್ರಯತ್ನದಿಂದ ಸಾನಂದನು ಯಮರಾಜನನ್ನು ಕೇಳಲು ಆತ ಕೋಟೆಯ ಆಳುವೇರಿಯ ಮೇಲಿನ ಕೊತ್ತಳದ ಕಡೆಮೂಲೆಗೆ ಕರೆದುಕೊಂಡು ಹೋಗಿ ಏಕಾಂತದಲ್ಲಿ ಇವರು " ನಮಃಶಿವಾಯ " ಎಂದು ಹೇಳಲಿಲ್ಲ, ಕೇಳಲಿಲ್ಲ ಎಂದನು. ಆ ಮಾತು ಗಾಳಿವರಿಯಲ್ಲಿ ಹರಿದು ಸಮೀಪಸ್ಥರಾದ ಜೀವಗಳ ಕಿವಿಗೆ ಬಿದ್ದಿತು. ಆ ಕ್ಷಣ ಆ ಜೀವಗಳು ಕ್ರಿಮಿರೂಪಳಿದು ವಿಭೂತಿ ರುದ್ರಾಕ್ಷಿ ಕರ್ಣಕುಂಡಲ ಯಜ್ಞೋಪವೀತದಿಂದ ಒಪ್ಪುವ ರುದ್ರರೂಪಾದರು. ಅವರನ್ನು ನೋಡಿ ಪಂಚಾಕ್ಷರಿಮಹಿಮೆಗೆ ಸಾನಂದದೇವರು ಆಶ್ಚರ್ಯಪಟ್ಟರು. " ಹರಹರನಮಃಶಿವಾಯ " ಎನ್ನುತ್ತ ಆ ಮಾತನ್ನು ಕೇರಿ ಕೇರಿಯಲ್ಲಿ ಸಾರಿದರು. ಅಲ್ಲಿದ್ದ ಜೀವಗಳೆಲ್ಲ ರುದ್ರರೂಪರಾಗಿ ಶಿವಲೋಕಕ್ಕೆ ಹೋದರು ಎಂದರು.

ಮಾತಂಗತನು ಕಿರಿದಾದ ಈ ಮಂತ್ರದಿಂದ ಮಹಾಘನಪಾಪ ಹರಿದುದು ನನ್ನ ಮನಸ್ಸಿಗೆ ಅರ್ಥವಾಗಲಿಲ್ಲ ಎಂದನು. ಆಗ ಪಂಚಾಕ್ಷರಿಯ ಮಹಿಮೆಯನ್ನು ದೃಷ್ಟಾಂತಗಳ ಮೂಲಕ ತಿಳಿಸಿದರು. ಆಗ ಮಾತಂಗತನು ಭಕ್ತಿ ಸುಧಾವಾರ್ಧಿಯಲ್ಲಿ ಓಲಾಡಿದನೆಂದು ಬಸವಣ್ಣ ಶರಣತಿಂಥಿಣಿಗೆ ತಿಳಿಸಿದನು. ಶರಣ ಸಮೂಹ " ಯಮಲೋಕ ಬರಿದಾದ ಮೇಲೆ ಅಲ್ಲಿ ಸಾನಂದದೇವರು ಏನು ಮಾಡಿದರು ? ಯಮನೇನೆಂದ " ಎಂದರು.

ಸಾನಂದರು ಯಮನಿಗೆ ಅನಂತಕಾಲ ಸುಖವಾಗಿರೆಂದು ಹರಸಿ ಕೈಲಾಸಕ್ಕೆ ಹೋದರು. ಹಣ್ಣನ್ನು ಇಳಿಕಿದ ಮರದಂತೆ, ಪ್ರಾಣಹೋದ ದೇಹದಂತೆ, ತನ್ನ ಪಟ್ಟಣದ ಐಶ್ವರ್ಯವೆಲ್ಲ ನಿರ್ಮೂಲವಾದುದನ್ನು ಕಂಡು ಮಾಗಿಯ ಕೋಗಿಲೆಯಂತೆ, ರಾತ್ರಿಯ ತಾವರೆಯಂತೆ, ಹಗಲಚಂದ್ರನಂತೆ, ಬೇಸಗೆಯ ಕಾಡಿನಂತೆ, ನೀರಿಲ್ಲದ ಕೊಳದಂತೆ, ವಿಷವಿಲ್ಲದ ಹಾವಿನಂತಿದ್ದನು. ಶಿವನು ಕೊಟ್ಟಿದ್ದ ಲೆಕ್ಕದಪುಸ್ತಕ, ಕಡಿತದ ಸಿಪ್ಪಡು, ನರಕ

ಗಳ ಬೀಗಗಳನ್ನೆಲ್ಲ ತೆಗೆದುಕೊಂಡು ಕೈಲಾಸಕ್ಕೆ ಬಂದು ಶಿವನಿಗೆ ನಮಸ್ಕರಿಸಿದನು. ದಂಡ, ಮುದ್ರೆಯುಂಗುರ ಎಲ್ಲವನ್ನು ಶಿವನಿಗೊಪ್ಪಿಸಿ ಶಿವದೂತರ ಅಟ್ಟುಳಿಯನ್ನು ತಾಳಲಾರೆಯೆಂದನು. ಆಗ ಯಮನನ್ನು ಶಿವ ಸಮಾಧಾನಪಡಿಸಿ ಶಿವದೂತರು ಆತನ ತಂಟೆಗೆ ಬರದಂತೆ ಮಾಡುತ್ತೇನೆ ಎಂದನು ಎಂದು ಬಸವಣ್ಣ ಶರಣರಿಗೆ ತಿಳಿಸಿದನು.

ಹರ್ಷಿತರಾದ ಶರಣರು ಮಾತಂಗತಮುನಿಗೆ ಮತ್ತೆ ಯಾವ ಕಥೆಯನ್ನು ಹೇಳಿದರು ಎಂದರು. ಸುಜ್ಞಾನಿಗಳು ಮಾತಂಗತಮುನಿಗೆ ಹೇಳಿದ ಶ್ವೇತನ ಕಥೆಯನ್ನು ಬಸವಣ್ಣ ಮುಂದುವರೆಸಿದನು.

ಶ್ವೇತನ ಕಥೆ

ತನ್ನ ಸೂಳೆಗಾಗಿ ರಾಜನ ಅರಮನೆಯಿಂದ ಒಬ್ಬ ಹೂವನ್ನು ಕದ್ದು ತೆಗೆದುಕೊಂಡು ಹೋಗುತ್ತಿದ್ದನು. ಆಗ ದಾರಿಯಲ್ಲಿ ಒಂದು ಹೂವು ಬಿದ್ದು ಹೋಯಿತು. ಅದು "ಮಾರಾರಿಗೆ ಸಲ್ಲಲಿ" ಎಂದು ಆತ ಹೇಳಿದನು. ಆಯು ತೀರಲು ಆತನ ಜೀವವನ್ನು ಯಮಲೋಕಕ್ಕೆ ತೆಗೆದುಕೊಂಡು ಹೋದರು. ಈತನ ಧರ್ಮ ಕರ್ಮಗಳನ್ನು ಕೇಳಲು ಚಿತ್ರಗುಪ್ತರು ಹೀಗೆ ಹೇಳಿದರು–ಈತ ಪತಿಭಕ್ತೆಯಾದ ಹೆಂಡತಿಯನ್ನು, ಮಕ್ಕಳನ್ನು, ತಂದೆತಾಯಿಗಳನ್ನು ಸಾಕದೆ ದುಷ್ಟ ಹೆಂಗಸರೊಡನಿದ್ದ ಅತಿಪಾಪಿ. ಈತನಿಗೆ ಬಲು ದುರ್ಗತಿಯಲ್ಲಿ ನೆಲೆ ಎಂದನು. ಆದರೆ ಒಂದು ರಾತ್ರಿ ರಾಜನ ತೋಟದಿಂದ ಕದ್ದು ತನ್ನ ವೇಶ್ಯೆಗೆ ತೆಗೆದುಕೊಂಡು ಹೋಗುತ್ತಿದ್ದ ಹೂವಿನಲ್ಲಿ ಒಂದು ಅರಳು ನೆಲಕ್ಕೆ ಬೀಳಲು ಅದು ಶಿವನಿಗರ್ಪಿತವಾಗಲಿ ಎಂದನು. ಆದುದರಿಂದ ಈತನಿಗೆ ದೇವೇಂದ್ರಪದವಾಗಿ ಒಂದು ರಾತ್ರಿ ರಂಭೆಯೊಡನೆ ಇಷ್ಟ ಸುಖ ಕಾಮಭೋಗವನ್ನು ಅನುಭವಿಸುವ ಫಲವಿದೆ ಯೆಂದನು. ಅದರಂತೆ ಈತ ರಂಭೆಯ ಮನೆಗೆ ಬಂದಾಗ ಆಕೆ ಈತನ ಸಂಗವನ್ನು ನಿವಾರಿಸುವುದನ್ನು ಯೋಚಿಸಿದಳು. ಆಕೆ ಆತನಿಗೆ ಗುರುವಾದಳು. ನನ್ನ ಮೇಲಿನ ಆಸೆ ಯಿಂದ ನೀನು ಕೆಡಬೇಡ. ಕೈಜಾರಿದ ಒಂದು ಹೂವು ಶಿವನಿಗೆ ಎಂದ ಪುಣ್ಯದಿಂದ ಇಲ್ಲಿಗೆ ಬಂದೆ. ಈ ರಾತ್ರಿಯೆಲ್ಲ ಶಿವನನ್ನು ಪೂಜಿಸು ನಿನ್ನ ಇಷ್ಟಾರ್ಥಗಳೆಲ್ಲ ದೊರೆ ಯುತ್ತವೆ ಎಂದು ಆತನಿಗೆ ಶಿವಾರ್ಚನೆಗೆ ಅಣಿಮಾಡಿಕೊಟ್ಟಳು. ಇಡೀ ರಾತ್ರಿ ಆತ ಶಿವ ಪೂಜೆ ಮಾಡಿದನು. ಬೆಳಗಾಗಲು ಯಮದೂತರು ಬಂದರು. ಈ ವಿಚಾರವನ್ನು ರಂಭೆ ಶಿವದೂತರಿಗೆ ತಿಳಿಸಿದಳು. ಅವರು ಬಂದು ಈ ರಾತ್ರಿಯ ಶಿವಪೂಜೆಯಿಂದ ಶ್ವೇತನಿಗೆ ಶಿವಲೋಕದಿರವಾಯಿತೆಂದು ಅವರನ್ನು ಹಿಂದಕ್ಕೆ ಕಳಿಸಿದರು.

ಶಿವರಾತ್ರಿಯಲ್ಲಿ ತೋಹನ್ನಿದ್ದ ಕಿರಾತನ ಕಥೆ

ಅರಿಯದೆ ಮಾಡಿದ ಪೂಜೆಗೂ ಶಿವನು ಒಲಿದಿದ್ದಾನೆ ಆ ಧರ್ಮಾಧಿಕ್ಯವನ್ನು ಕೇಳು. ಬೇಡನೊಬ್ಬನ ಪರಿ ಹೀಗಿದೆ.

ಒಂದು ಭಯಂಕರವಾದ ಕಾಡು. ಒಮ್ಮೆ ಬೇಟೆಗೆಂದು ಬೇಡರು ಕಾಡಿಗೆ ಹೋದರು. ಅವನ ಗುರಿಗೆ ಗುರಿಯಾದ ಹೆಣ್ಣು ಹುಲಿಯೊಂದು ದೊಡ್ಡ ಮೊಲೆಯನ್ನು

ಹೊಕ್ಕಿತು. ಅದನ್ನು ಹುಡುಕಿ ತಡಕುವಷ್ಟರಲ್ಲಿ ಜಿಂಕೆಗಳ ಹಿಂಡು ಓಡಿತು. ಅವುಗಳ ಬೇಟೆಯಾಡುವಾಗ ಹುಲಿ ಮೇಲೆ ಬಿದ್ದಿತು. ಕಿರಾತಪಡೆ ಪಲಾಯಿಸಿತು. ಅವರಲ್ಲಿ ಒಬ್ಬ ಬೇಡ ಸಮೀಪದಲ್ಲಿ ಒಂದು ಕೊಳವನ್ನು ಕಂಡನು. ಅಲ್ಲಿ ಜಿಂಕೆಯ ಹೆಜ್ಜೆ ಗುರು ತುಗಳನ್ನು ಕಂಡನು. ಅಲ್ಲಿ ತೋಹನ್ನಿರಲು ನಿಶ್ಚಯಿಸಿ ಬಿಲ್ಲು ಬಾಣ ಸಹಿತ ಮರವೇರಿ ದನು. ಸೂರ್ಯಾಸ್ತವಾಯಿತು. ತರಗಲೆ ಗಾಳಿಗೆ ಅಲ್ಲಾಡಿದರೂ ನೋಡುತ್ತ, ಕಣ್ಣಿಗೆ ಮರೆಯಾದ ಸೊಪ್ಪನ್ನು ನೆಲಕ್ಕೆ ಕಿತ್ತುಹಾಕುತ್ತ ಹಸಿವು ನಿದ್ರೆಯನ್ನು ಗಮನಿಸದೆ ಮರದ ಮೇಲೆ ಇದ್ದನು. ಆ ರಾತ್ರಿ ಜಿಂಕೆಗಳು ಆಕಡೆ ಬರಲೇ ಇಲ್ಲ.

ರಾತ್ರಿಯಾದರೂ ಗಂಡ ಬರಲಿಲ್ಲವೆಂದು ಬೇಡನ ಹೆಂಡತಿ ವ್ಯಾಕುಲಚಿತ್ತಳಾಗಿ ಮನೆಯಿಂದ ಹೊರಟಳು. ದಾರಿಯಲ್ಲಿ ಸಿಕ್ಕಿದ ಈಶ್ವರನ ದೇವಸ್ಥಾನದ ಸಮೀಪ ನಿಂತಳು. ಆಗ ಶಿವಲಿಂಗಕ್ಕೆ ನೈವೇದ್ಯವಾಗುತ್ತಿದ್ದುದನ್ನು ನೋಡಿ ಮನೆಗೆ ಹೋದಳು. ಬೆಳಗಾಗು ತ್ತಲೆ ಬೇಟೆಸಿಗದೆ ಬೇಡ ಮನೆಗೆ ಬಂದನು. ತಾನು ತಂದ ಗೆಡ್ಡೆಗೆಣಸುಗಳನ್ನು ಮಡದಿ ಮಕ್ಕಳಿಗೆ ಕೊಟ್ಟನು.

ಬೇಡ ಮತ್ತು ಆತನ ಹೆಂಡತಿ ಒಟ್ಟಿಗೆ ಸತ್ತರು. ಅವರ ಭೋಕ್ತವನ್ನು ಚಿತ್ರ ಗುಪ್ತರು ಯಮನಿಗೆ ಹೇಳಿದರು. ಈ ಪುಳಿಂದ ಮಹಾ ಘನ ಕೀಟಕಯೋನಿಯಲ್ಲಿ ಮೂಡಿ ಮುಳುಗುತ್ತಿದ್ದಾನೆ. ಆದರೂ ಈತನಿಗೆ ಅರಿವಿಲ್ಲದಂತೆ ಒಂದು ಪುಣ್ಯ ಸಂಭವಿ ಸಿದೆ. ಹಿಂದೆ ಕಾಡಿನಲ್ಲಿ ಒಂದು ಶಿವಾಲಯವಿದ್ದಿತು. ಅದು ಬಿದ್ದುಹೋಗಲು ಅಲ್ಲಿದ್ದ ಶಿವನ ಶಲಾಕೆಗೆ ನೆರಳಾಗಿ ಒಂದು ಬಿಲ್ವದ ಮರವಿದೆ. ಮರದ ತೋಹಿನ ಬೇಟೆಯ ಬಯಕೆ ಯಿಂದ ಈ ಬೇಡ ಆ ಮರವನ್ನೇರಿದನು. ಕೊಳಕ್ಕೆ ಬರುವ ಜಿಂಕೆಗಳಿಗಾಗಿ ಕಾದು ಹಸಿವು ಮತ್ತು ನಿದ್ರೆಯನ್ನು ಮರೆತನು. ಕಣ್ಣಿಗೆ ಮರೆಯೊಂದು ತರದು ಬಿಟ್ಟ ಬಿಲ್ವಪತ್ರೆ ಮತ್ತು ನೇತುಹಾಕಿದ್ದ ಸಗ್ಗಳೆಯಿಂದ ಸೋರಿದ ನೀರು ಶಿವಲಿಂಗದ ಮೇಲೆ ಬಿದ್ದಿತು. ಅಂದು ಶಿವರಾತ್ರಿಯ ದಿನವಾದುದರಿಂದ ಈತನಿಗೆ ಭೂಮಿಯ ಒಡೆತನ ದೊರೆಕಿತು. ಈತನ ಹೆಂಡತಿ ಗಂಡನನ್ನು ಹುಡುಕಿಕೊಂಡು ಬಂದು ಶಿವನೈವೇದ್ಯವನ್ನು ನೋಡಿದ ಪುಣ್ಯವಿದೆ ಎಂದು ಶಿವಲೋಕಕ್ಕೆ ಕಳಿಸಿದರು. ಮತ್ತೆ ಹೀಗೆಂದರು—

ಬೇಡರ ಬಾಣದ ಹೊಡೆತವನ್ನು ತಪ್ಪಿಸಿಕೊಂಡು ಹಂದಿಯೊಂದು ಓಡಿತು. ಅದನ್ನು ನಾಯಿಗಳು ಬೆನ್ನಟ್ಟಿದುವು. ಕಾಣದೆ ಹಂದಿ ಮತ್ತು ನಾಯಿ ಶಿವಾಲಯದ ಒತ್ತಿನಲ್ಲಿದ್ದ ಬಾವಿಯಲ್ಲಿ ಬಿದ್ದು ಸತ್ತುವು. ಧರ್ಮರಾಜ ಅವುಗಳ ಬಗ್ಗೆ ವಿಚಾರಿಸಿದನು. ಚಿತ್ರಗುಪ್ತರು ಚತುಷ್ಪಾದಿಗಳಿಗೆ ಧರ್ಮ ಕರ್ಮಗಳಿಲ್ಲವೆಂದು ತಿಳಿಸಿ ಆದರೂ ಶಿವನಿಲಯದ ಬಾವಿಯಲ್ಲಿ ಬಿದ್ದು ಸತ್ತುದರಿಂದ ಶಿವಲೋಕದ ಇರವು ದೊರೆಕೊಂಡಿತು. ಶಿವಲೋಕಕ್ಕೆ ಅವನ್ನು ಕಳಿಸಿದಾಗ ಮಹಾಗಣಗಳು ಅವಕ್ಕೆ ಶಿವನ ದರ್ಶನ ಮಾಡಿಸಿ ಗಣತ್ವನ್ನಿತ್ತರು ಎಂದು ಹೇಳಿ ಮತ್ತೊಂದು ಕಥೆಯನ್ನು ಹೇಳಿದರು.

ಚಂಡೇಶನ ಕಥೆ

ಋಷಿಗಳ ಹೋಮಕ್ಕೆ ತುಪ್ಪವನ್ನು ಒಬ್ಬ ಗೋಪಾಲಕ ಒದಗಿಸುತ್ತಿದ್ದನು. ಆತನ

ಮಗ ದನಗಳನ್ನು ಮೇಯಿಸಲು ಹೊಡೆದುಕೊಂಡು ಹೋಗುತ್ತಿದ್ದನು. ಮಣ್ಣಿನಲ್ಲಿ ಶಿವಲಿಂಗವನ್ನು ಮಾಡಿ ನಿತ್ಯವೂ ಅದರ ತಲೆಯ ಮೇಲೆ ಹಸುವಿನ ಹಾಲನ್ನು ಕರೆಯುತ್ತಿದ್ದನು. ಈ ವಿಚಾರವನ್ನು ತಿಳಿದ ತಂದೆ ಅಲ್ಲಿ ಹೋಗಿ ಕೋಪಿಸಿ ಮಣ್ಣಿನ ಲಿಂಗವನ್ನು ಒದ್ದನು. ಆ ಕ್ಷಣ ಆ ಹುಡುಗ ತನ್ನ ತಂದೆಯನ್ನು ಕೊಂದನು. ಉಮಾವರನು ಅವರಿಬ್ಬರಿಗೂ ಸುಖ ಸಂಪದವಿತ್ತನು. ಮಕ್ಕಳು ಆಟಕ್ಕೆಂದು ಮರಳಲಿಂಗವನ್ನು ಮಾಡಿಕೊಂಡು ಆಡಿದರೂ ಶಿವನು ಅವರಿಗೆ ಧರಣಿಯೊಡೆತನವನ್ನು ಕೊಟ್ಟನು.

ಗೃಧ್ರ ರಜವನ್ನು ಉಡುಗಿದ ಕಥೆ

ಶಿವಾಲಯದ ಬಲಿಪೀಠದ ಅನ್ನಕ್ಕಾಗಿ ಹದ್ದು ಬಂದಿತು. ಅದು ಬರುವಾಗ ರೆಕ್ಕೆ ಬಡಿದದ್ದರಿಂದ ಉಂಟಾದ ಗಾಳಿಗೆ ಅಲ್ಲಿನ ಧೂಳು ಹಾರಿತು. ಆ ಪುಣ್ಯದ ಫಲವಾಗಿ ಆ ಹದ್ದು ಪಕ್ಷಿಗಳಿಗೆ ಅಧಿಪತಿಯಾಯಿತು. ಸುಜ್ಞಾನಿಗಳು ಇಂತಹ ಧರ್ಮಸೂಕ್ಷ್ಮದ ಕಥೆಗಳನ್ನು ಮಾತಂಗಮುನಿಗೆ ಹೇಳಿ ಮತ್ತೆ ಮುಂದುವರೆಸಿದರು.

ದೀಪವ ಬೆಳಗಿದ ಕಥೆ

ಕಳ್ಳನೊಬ್ಬ ಶಿವಾಲಯವನ್ನು ಹೊಕ್ಕನು. ಹಣದ ಆಸೆಯಿಂದ ಪಟ್ಟೆ ಮತ್ತು ಹರಿವಾಣಗಳನ್ನು ತೆಗೆದುಕೊಳ್ಳುವ ಸಲುವಾಗಿ ಆರುತ್ತಿದ್ದ ದೀಪದ ಬತ್ತಿಯನ್ನು ಉದ್ದಕ್ಕೆ ಎತ್ತಿದನು. ಕಳ್ಳನು ಸತ್ತಾಗ ಯಮಧರ್ಮ ಈತನಿಗೇನು ಭೋಕ್ತ ಎಂದನು. ಆಗ ಚಿತ್ರಗುಪ್ತ ಈತನ ಪಾತಕಕ್ಕೆ ಕೊನೆ ಮೊದಲಿಲ್ಲ. ಕರ್ಮವಾರಿಧಿಯಲ್ಲಿ ಮೂಡಿ ಮುಳುಗುತ್ತಿದ್ದಾನೆ. ಆದರೂ ಈತನಿಗೆ ಕಲ್ಪಿತದ ಪುಣ್ಯವೊಂದಿದೆ ಎಂದು ಶಿವಾಲಯದಲ್ಲಿ ನಡೆದುದನ್ನು ಹೇಳಿದನು. ಅದರ ಫಲವಾಗಿ ಆತ ಶಿವಲೋಕಕ್ಕೆ ಹೋದಾಗ ಶಿವಗಣಗಳು ಅವನಿಗೆ ಶಿವದರ್ಶನವನ್ನು ಮಾಡಿಸಿ ಗಣತ್ವವನ್ನು ನೀಡಿದರು ಎಂದು ಪಾತಕಪಾರ್ವನ ಕಥೆಯನ್ನು ಹೇಳಿದರು.

ಪಾತಕಪಾರ್ವನ ಕಥೆ

ಪಾತಕಪಾರ್ವನ ವಿವರಗಳನ್ನು ಚಿತ್ರಗುಪ್ತ ಹೇಳಿದನು—

ಈತನ ಪಾತಕಕ್ಕೆ ಲೆಕ್ಕವಿಲ್ಲ. ಬ್ರಾಹ್ಮಣನಾಗಿ ಹುಟ್ಟಿ ಹೊಲತಿಯನ್ನು ಕೂಡಿದನು. ಬಂಧುಗಳು, ಪುರಜನ, ದೊರೆಯ ಹೆದರಿಕೆಯಿಂದ ಆಕೆಯೊಡನೆ ಕಾಡಿಗೆ ಹೋದನು. ಅಲ್ಲಿ ಅವರಿಬ್ಬರಿಗೂ ಒಬ್ಬಳು ಮಗಳು ಹುಟ್ಟಿದಳು. ತುಂಬ ಸುಂದರಿಯಾದ ಆಕೆಗೆ ಯೌವನೋದಯವಾಗಲು ಒಡನಿದ್ದ ಹೊಲತಿಯನ್ನು ಬಿಟ್ಟು ಹೊಲೆ ಮಗಳೊಡನೆ ಇನ್ನೊಂದು ಕಾಡಿಗೆ ಹೋದನು. ಒಂದು ದಿನ ಕಳ್ಳತನಕ್ಕೆ ಹೊರಟನು. ಸ್ವಲ್ಪ ದೂರ ಹೋಗಲು ಜಾಗಟೆ, ಮದ್ದಳೆ, ತಾಳ, ಕಾಹಳೆಗಳ ಮೇಳವನ್ನು ಕೇಳಿದನು ಆ ಶಬ್ದದ ಜಾಡನ್ನು ಹಿಡಿದು ಸ್ವಲ್ಪ ಮುಂದೆ ಹೋದಾಗ ಅಲ್ಲೊಂದು ಶಿವಾಲಯವಿದ್ದಿತು. ಅಲ್ಲಿನ ದೀಪದ ಬೆಳಕಿನ ನೆರವಿನಿಂದ ಶಿವನಿಗೆ ಅರ್ಪಿಸಿದ ನೈವೇದ್ಯವನ್ನು ಕಂಡನು.

ಅಂದು ಮಾಘಚತುರ್ದಶಿಯಾದುದರಿಂದ ಶಿವನೈವೇದ್ಯವನ್ನು ಕಂಡುದರಿಂದ ಆತನ ಪಾಪವೆಲ್ಲ ಹರಿಯಿತು. ತನ್ನ ಮೊದಲಿನ ಆಸ್ನಾಯದ ಫಲವನ್ನು ಕಳೆದುಕೊಂಡನು. ಆದುದರಿಂದ ಯಮಧರ್ಮನು ಆತನನ್ನು ಶಿವಲೋಕಕ್ಕೆ ಕಳಿಸಿದನು. ಆತನಿಗೆ ಗಣತ್ವ ದೊರೆಯಿತು. ಸುಧಿತ್ರಯದಲ್ಲಿ, ಉದಯಕಾಲಕ್ಕೆ ಮುನ್ನ ಶಿವಪದಪೂಜೆ ಮಾಡುವ ಮನುಜರು ಭೂದಾನಕ್ಕಿಂತ ಮಿಗಿಲಾದ ಫಲವನ್ನು ಪಡೆಯುತ್ತಾರೆ. ಶಿವನೊಲಿದ ಧರ್ಮ ವೇಧರ್ಮ. ಒಲಿಯದುದು ಅಧರ್ಮ ಎನ್ನುವುದಕ್ಕೆ ಕಥೆ—

ದಕ್ಷನ ಕಥೆ

ದಕ್ಷ ನವಬ್ರಹ್ಮರಲ್ಲಿ ಮುಖ್ಯನಾದವನು. ಶಿವವಿರಹಿತ ಯಾಗವನ್ನು ಮಾಡಿದನು. ಶಿವ ಕೇಳಿದನು. ಆತನ ನೈಜರೂಪದಿಂದ ವೀರೇಶ್ವರ ಹುಟ್ಟಿದನು. ದಕ್ಷನಯಾಗ ಮಂಟಪಕ್ಕೆ ಶಿವನ ಅಪ್ಪಣೆಯನ್ನು ಪಡೆದು ಭೂತಗಣಗಳೊಡನೆ ಬಂದನು. ಎದುರಾದವ ರನ್ನು ಕೊಂದು ವಂದಿಸಿದವರನ್ನು ರಕ್ಷಿಸಿದನು. ಹೋರಾಟದ ಭರದಲ್ಲಿ ತಿಳಿಯದೆ ಭೂತ ಗಣ ದಕ್ಷನ ಶಿರವನ್ನು ಕಡಿದರು. ಶಿವನಿತ್ತ ನೇಮವನ್ನು ನೆನೆದು ಕುರಿದಲೆಯನ್ನಿಕ್ಕಿ ಆತ ನಿಗೆ ವೀರೇಶ ಪ್ರಾಣವನ್ನಿತ್ತನು. ಇದೆಲ್ಲವೂ ಪಾರ್ವತಿಯ ಕಡೆಯಿಂದ ಆಯಿತೆಂದು ಈಗಲೂ ಆಡುಗಳು ಕೂಗುವಾಗ "ಉಮೆ ಉಮೆ"ಯೆಂದು ದೇವಿಯನ್ನು ನೆನೆಯುತ್ತಿವೆ. ಶಿವನೊಲಿದುದರಿಂದ ಕರ್ಮ ಧರ್ಮವಾದುದಕ್ಕೆ ಕಥೆ—

ಸಿರಿಯಾಳನ ಕಥೆ

ಚೋಳದೇಶದ ಕಾಂಚೀಪುರದ ಅಕ್ಕಾಚನ ಮಗ ಸಿರಿಯಾಳ. ಆತನ ಹೆಂಡತಿ ಚಂಗಳೆ. ಅವರ ಮಗ ಚೀಲಾಳ. ಬೇಡಿದವರಿಗೆ ಇಚ್ಛಾಭೋಜನ ಇಕ್ಕುವೆನೆಂದು ಸಿರಿಯಾಳ ಶಪಥ ಮಾಡಿ ಅಂತೆಯೇ ನಡೆದುಕೊಂಡನು. ಸಿರಿಯಾಳನ ಭಕ್ತಿ ನಿಶ್ಚಯವನ್ನು ತಿಳಿಯಲು ಶಿವನು ಕಂಚಿಗೆ ಬಂದನು ಸಿರಿಯಾಳನ ಮನೆಗೆ ಬಂದು ನಿನ್ನ ಮಗನ ಮಾಂಸ ಬೇಕು ಎಂದನು. ಸಿರಿಯಾಳ, ಆತನ ಹೆಂಡತಿ ಮತ್ತು ಮಗ ಎಲ್ಲರೂ ಒಪ್ಪಿದರು. ಬ್ರಾಹ್ಮಣ ವೇಷದ ಶಿವನು ಚಂಗಳೆ ಮತ್ತು ಚೀಲಾಳನ ಬಳಿಗೆ ಬಂದು ಭಿನ್ನವನ್ನು ಹುಟ್ಟಿಸಲು ಪ್ರಯತ್ನಪಟ್ಟನು. ಆದರೆ ಪ್ರಯೋಜನವಾಗಲಿಲ್ಲ. ಪತಿಪತ್ನಿಯರು ಅಂದು ಚೀಲಾಳನನ್ನು ಕತ್ತರಿಸಿ ಅಡಿಗೆಮಾಡಿ ಶಿವನಿಗೆ ಬಡಿಸಿದರು. ಶಿವ ಮೆಚ್ಚಿದನು. ಕಾಂಚೀಪುರ ಸಹಿತ ಎಲ್ಲರನ್ನೂ ಕೈಲಾಸಕ್ಕೆ ಕರೆದುಕೊಂಡು ಹೋದನು. ಇದು ಶಿವಪೂಜೆ ಮಾಡಿದವರಿಗೆ ಪಶುಪತಿಯೊಲಿದುದಕ್ಕೆ ದೃಷ್ಟಾಂತ ಎಂದು ಸುಜ್ಞಾನಿಗಳು ಸತ್ಯ ನುಡಿಯಲು ಪಾಪವಾದ ಕಥೆಯನ್ನು ಹೇಳಿದರು—

ಸತ್ಯವ ನುಡಿಯುಲು ಪಾಪವಾದ ಕಥೆ

ಸತ್ಯ ನುಡಿಯೇ ನಿರ್ವಾಣ ಎನ್ನುವ ಸತ್ಯವ್ರತನಿಗೂ ಅಪಾಯವಾದುದು. ಅದು ಹೇಗೆಂದರೆ-

ರಾಜಪುರೋಹಿತರಿಗೆ ಇಬ್ಬರು ಬ್ರಾಹ್ಮಣರು ಪರೀಕ್ಷೆಗೊಟ್ಟು ಎರಡು ಸಾವಿರ ಹೊನ್ನನ್ನು ಸಂಪಾದಿಸಿದರು. ಇದನ್ನು ತಿಳಿದ ಇಬ್ಬರು ಕಳ್ಳರು ಅವರಲ್ಲಿ ಸುಳ್ಳು ಸ್ನೇಹವನ್ನು ತೋರಿದರು. ಆ ಸುಳಿವು ತಿಳಿದ ಬ್ರಾಹ್ಮಣರು ಆ ಇಬ್ಬರನ್ನೂ ವಂಚಿಸಿ ಹೋಗುತ್ತ ದಾರಿಯಲ್ಲಿ ಸಿಕ್ಕಿದ ಮುನಿಯೊಬ್ಬನಿಗೆ ನಮಸ್ಕರಿಸಿ ಹೋದರು. ಅವರ ಹಿಂದೆಯೇ ಬಂದ ಕಳ್ಳರು ಆ ಮುನಿಯನ್ನು ಕಂಡು ನಮ್ಮ ಇಬ್ಬರು ಬಂಧುಗಳು ಈ ಮಾರ್ಗವಾಗಿ ಹೋದರೇ ಎಂದರು. ಅವರನ್ನು ಕಳ್ಳರೆಂದು ತಿಳಿಯದ ಮುನಿ ಇದ್ದುದನ್ನು ಹೇಳಿದನು. ಕಳ್ಳರು ಬ್ರಾಹ್ಮಣರನ್ನು ಹಿಂಬಾಲಿಸಿ ಕೊಂದು ಹಣವನ್ನು ದೋಚಿದರು. ಭೂಸುರರನ್ನು ಕೊಂದ ಪಾತಕ ಮುನಿಗೆ ಸೇರಿತು. ಇದನ್ನು ಮಹಾಭಾರತದಲ್ಲಿ ಅರ್ಜುನನಿಗೆ ಕೃಷ್ಣ ಹೇಳಿದನೆಂದು ಸುಜ್ಞಾನಿಗಳು ಮಾತಂಗತಮುನಿಗೆ ಹೇಳಿದನು.

ಪುಸಿದರೆ ಧರ್ಮವಾದ ಕಥೆ

ಕೈ ಕೂಲಿಯವನೊಬ್ಬ ಸುಳ್ಳು ಹೇಳಿದನು. ಆ ಫಲವಾಗಿ ಆತನಿಗೆ ದೇವತ್ವ ಲಭಿಸಿತು. ಹೇಗೆಂದರೆ–

ಒಬ್ಬ ರಾಜ ಕಾಶಿಯಲ್ಲಿ ಸಾವಿರ ಹಸುಗಳನ್ನು ದಾನಮಾಡಿದನು. ಒಬ್ಬ ಬ್ರಾಹ್ಮಣನಿಗೆ ಐದು ಹಸುಗಳನ್ನು ಕೊಟ್ಟನು. ಅವುಗಳನ್ನು ಊರಿಗೆ ಹೊಡೆದುಕೊಂಡು ಹೋಗಲು ಬ್ರಾಹ್ಮಣ ಪ್ರಯತ್ನಪಟ್ಟನು. ಅಭ್ಯಾಸವಿಲ್ಲದ ಆ ಹಸುಗಳು ತಂಟೆ ಮಾಡಿದುವು. ಆಗ ಬ್ರಾಹ್ಮಣ ಒಬ್ಬ ಕೂಲಿಯವನನ್ನು ನೇಮಿಸಿಕೊಂಡನು. ಊರದಾರಿಯಲ್ಲಿ ಒಂದು ದೊಡ್ಡ ಕಾಡು. ಅಲ್ಲಿ ಹೋಗುತ್ತಿರುವಾಗ ಆರು ಜನ ಹೊಲೆಯರು ಹಸುಗಳನ್ನು ಕೊಂದು ತಿನ್ನುವ ಬಯಕೆಯಿಂದ ಹಿಂಬಾಲಿಸಿದರು. ಆ ಬ್ರಾಹ್ಮಣ ಕಾಡು ಕಳೆದು ಊರುಸಮೀಪವಾಗಲು ದನಗಳು ತಂಟೆ ಮಾಡದಿರಲು ಕೂಲಿಯವನನ್ನು ಹಿಂದಕ್ಕೆ ಕಳಿಸಿದನು. ಆತನನ್ನು ಎದುರುಗೊಂಡ ಹೊಲೆಯರು ಹಸುವಿನೊಡನೆ ಆ ಬ್ರಾಹ್ಮಣ ಎಷ್ಟು ದೂರ ಹೋದ ಎಂದರು. ಆ ಕೂಲಿಕಾರ ಇಲ್ಲಿ ಹೋದವರು ಯಾರನ್ನೂ ಕಾಣೆ ಎಂದನು. ಕಳ್ಳರು ಆ ಬ್ರಾಹ್ಮಣ ಇನ್ನೂ ಹಿಂದೆಯೇ ಇದ್ದಾನೆಂದು ಹಿಂದಕ್ಕೆ ಹೋದರು. ಈತ ಹೇಳಿದ ಸುಳ್ಳಿನಿಂದ ಬ್ರಾಹ್ಮಣ ಮತ್ತು ಗೋವಧೆ ತಪ್ಪಿತು. ಈತ ಹೇಳಿದ ಸುಳ್ಳಿನ ಕಾರಣ ಈತನಿಗೆ ಸ್ವರ್ಗವಾಯಿತು ಎಂದು ಇನ್ನೊಂದು ಕಥೆಯನ್ನು ಸುಜ್ಞಾನಿಗಳು ಹೇಳಿದರು.

ಪರೋಪಕಾರದ ಕಥೆ

ಸುಜ್ಞಾನಿಗಳು ಮಾತಂಗತಮುನಿಗೆ ಪರೋಪಕಾರವನ್ನು ಮಾಡಿ ಶರೀರವನ್ನು ಬಿಟ್ಟವರಿಗಾದ ಫಲವನ್ನು ಹೇಳಿದರು–

ಪಾತಕ ಕೋಟಿಯನ್ನು ಮಾಡಿದ ಒಬ್ಬ ಬ್ರಾಹ್ಮಣ ಸತ್ತ. ಆತನ ಭೋಗೋದಯವನ್ನು ಸಮವರ್ತಿಯು ಮುಂದೆ ಹೀಗೆ ಹೇಳಿದನು–

ಸುಶಂಗಕನೆಂಬ ಬ್ರಾಹ್ಮಣನೊಬ್ಬ ಬೇಡರ ಪಡೆಯೊಡನೆ ಸೇರಿಕೊಂಡು ದಾರಿ

ಚಾರಗಳನ್ನು ಆಚರಿಸುತ್ತಿದ್ದನು. ಒಂದು ಸಲ ಬೇಡರು ಒಬ್ಬ ಬ್ರಾಹ್ಮಣನನ್ನು ತಡೆದು
ಅವನಲ್ಲಿದ್ದ ಅಪಾರ ಹಣವನ್ನು ದೋಚಿದರು. ದೊರೆಗೆ ಈತ ದೂರನ್ನು ಕೊಡುತ್ತಾನೆಂದು
ಭಾವಿಸಿದ ಅವರು ಆತನನ್ನು ಕೊಲ್ಲಲು ಪ್ರಯತ್ನಿಸಿದರು. ಬೇಡನೊಡನಿದ್ದ ಬ್ರಾಹ್ಮಣ
ತನ್ನ ಜನ್ಮ ವಾಸನೆಯಿಂದ ಬ್ರಾಹ್ಮಣ ವಧೆಯನ್ನು ಸಹಿಸದಾದನು. ಆತ ತನಗೆ ಗಾಯ
ಗಳಾದರೂ ಲೆಕ್ಕಿಸದೆ ಬೇಡರನ್ನು ಹಿಂದಿರುಗಿಸಿ ಬ್ರಾಹ್ಮಣನನ್ನು ಬದುಕಿಸಿದನು. ಆತ
ನನ್ನು ಸ್ವಲ್ಪ ದೂರ ಕಳುಹಿಸುವಷ್ಟರಲ್ಲಿ ಗಾಯ ಸೊಕ್ಕಿ ಸತ್ತನು. ಬ್ರಾಹ್ಮಣ ರಕ್ಷಣಾ
ರ್ಥವಾಗಿ ಸತ್ತುದರಿಂದ ಆತನಿಗೆ ನಾಗಲೋಕದ ಅರಸುತನವಾಯಿತು. ಅಲ್ಲಿ ಇದಿರಾ
ಗುವ ನಾಗಕನ್ಯೆಯಿಂದ ನಿನಗೆ ಎಲ್ಲವೂ ಹೃದಯಸ್ಥವಾಗುತ್ತದೆ ಎಂದು ಮತಂಗಕನ
ಜೀವವನ್ನು ಯಮಲೋಕದಿಂದ ಭೂಲೋಕಕ್ಕೆ ತರುತ್ತಿದ್ದರು. ಆ ಅಡವಿಯಲ್ಲಿದ್ದ
ಬ್ರಾಹ್ಮಣ ಮತಂಗಕನ ಕಳೇವರವನ್ನು ನೋಡಿ ದುಃಖಿಸುತ್ತಿದ್ದನು. ಕಳೇವರಕ್ಕೆ
ಅಂತ್ಯ ಸಂಸ್ಕಾರ ಮಾಡಿ ಅಸ್ಥಿಯನ್ನು ಕಾಶಿಗೆ ತೆಗೆದುಕೊಂಡು ಹೋಗುತ್ತೇನೆ ಎಂದು
ಭಾವಿಸಿ ಚಿತೆಯ ಮೇಲಿಡುವಷ್ಟರಲ್ಲಿ ಮತಂಗಕನಿಗೆ ಪ್ರಾಣ ಬಂದಿತು. ಇಬ್ಬರೂ
ಸಂತೋಷಗೊಂಡರು. ಮತಂಗಕನು ನಿನಗಾಗಿ ಪ್ರಾಣ ನೀಡಲು ನನಗೆ ನಾಗಲೋಕ
ದರಸುತನವಾಯಿತು ಎಂದನು. ಇದಾದ ಮೇಲೆ ಮತ್ತೊಂದು ಕಥೆಯನ್ನು ಸುಜ್ಞಾನಿ
ಗಳು ಹೇಳಿದರು–

ಒಬ್ಬ ಬ್ರಾಹ್ಮಣ ಸತ್ತ. ಆತನಿಗೆ ಪಾಪ ದೊರೆಕೊಂಡುದನ್ನು ಚಿತ್ರಗುಪ್ತರು
ಯಮನಿಗೆ ಹೇಳಿದರು–

ಒಬ್ಬ ಬ್ರಾಹ್ಮಣ ಕಾಶಿಗೆ ಹೊರಟನು. ದಾರಿಯಲ್ಲಿ ತೀರ್ಥವೊಂದನ್ನು ಕಂಡು
ಸ್ನಾನಮಾಡಿ ಮರದಡಿಯಲ್ಲಿ ಊಟಕ್ಕೆ ಕುಳಿತನು. ಅಷ್ಟರಲ್ಲಿ ಹಸಿದ ಬ್ರಾಹ್ಮಣನೊಬ್ಬ
ಅಲ್ಲಿಗೆ ಬಂದ. ಕಾಶಿಗೆ ಹೊರಟಾತ ತಂದಿದ್ದ ಬುತ್ತಿಯನ್ನು ಬಿಚ್ಚಿ ಎಲೆಯನ್ನು ಎರಡು
ಭಾಗ ಮಾಡಿ ಆತನಿಗೆ ಊಟಕ್ಕಿಕ್ಕಿದನು. ಹಸಿದು ಬಂದ ಬ್ರಾಹ್ಮಣ ಸಂತೋಷದಿಂದ
ಊಟ ಮಾಡುತ್ತಿರುವಾಗ ಸತ್ತನು. ಈ ಪ್ರಸಂಗದಿಂದ ಕಾಶಿಗೆ ಹೊರಟ ಬ್ರಾಹ್ಮಣ
ಕ್ಲೇಶಿತನಾದನು. ತಾನು ಮಾಡಿದ ಧರ್ಮ ಅಧರ್ಮವಾದುದಕ್ಕೆ ಅಳುಕಿ ನೇಣುಹಾಕಿ
ಕೊಳ್ಳುವಾಗ ಶಿವಧ್ಯಾನ ಮಾಡಿದನು. ಆಗ ಈಶ್ವರ ಪ್ರೀತಿಯಿಂದ ಆ ಬ್ರಾಹ್ಮಣನಿಗೆ
"ನಿನ್ನ ಉರುಲನ್ನು ಹರಿ, ಈತನಿಗಾದ ಸಾವಿನ ರೀತಿಯನ್ನು ಹೇಳುತ್ತೇನೆ" ಎಂದು ಆಕಾಶ
ದಲ್ಲಿ ಹೇಳಿದನು.

ಹಿಂದೆ ಹದ್ದೊಂದು ಈತನಿಗೆ ವಶವಾಗಲಿಲ್ಲ. ಆಗ ಅದನ್ನು ಉಪಾಯದಿಂದ
ಕೊಂದನು. ಅದು ಈತನ ಬಗ್ಗೆ ವಿರೋಧವನ್ನು ತಾಳಿ ಮತ್ತೆ ಹುಟ್ಟಿ ಸಮಯವನ್ನು
ಕಾದು ಈಗ ಹಾವೊಂದನ್ನು ತಂದು ಅದರ ಗೋಣನ್ನು ಒತ್ತಿ ಈತನ ಅನ್ನದಲ್ಲಿ ವಿಷವನ್ನು
ಸುರಿಸಿತು. ಆ ಕಾರಣ ಈತ ಸತ್ತ. ಆಗ ಕಾಶಿಗೆ ಹೊರಟ ಬ್ರಾಹ್ಮಣ ಕತ್ತೆತ್ತಿ ಮೇಲೆ
ನೋಡಲು ಹದ್ದೊಂದು ಹಾವನ್ನು ಹಿಡಿದಿರುವುದು ಕಂಡಿತು. ಜನಾಪವಾದವನ್ನು
ಬಿಡಿಸುವುದು ಹೇಗೆ ಎನ್ನಲು–ನೀನು ಬ್ರಾಹ್ಮಣರಲ್ಲಿಗೆ ಹೋಗಿ ಸತ್ಯಸಂಗತಿಯನ್ನು

ತಿಳಿಸು. ಅದನ್ನು ನೋಡದೆ ಅವಿಚಾರದಿಂದ ನೀನೇ ಕೊಂದವನು ಎಂದಾತನಿಗೆ ಈ ಪಾಪ ಅಂಟುತ್ತದೆ ಎಂದನು. ಆ ಮಾತಿನಂತೆ ಬ್ರಾಹ್ಮಣ ಬಂದು ಬ್ರಾಹ್ಮಣ ಸಭೆಯಲ್ಲಿ ಹೇಳಿದನು. ಪುರಾಣಿಕರು, ಧರ್ಮಾಧಿಕರಣ, ವಿಜ್ಞಾನೇಶ್ವರ ಮೊದಲಾದ ಶಾಸ್ತ್ರಗ್ರಂಥಗಳನ್ನು ನೋಡಿ ಹೇಳುವ ಮೊದಲೆ ಈ ಬ್ರಾಹ್ಮಣ ಸಭಾಮಧ್ಯದಲ್ಲಿ ಹೀಗೆಂದನು. ಈತ ತಾನೇ ಬ್ರಾಹ್ಮಣನನ್ನು ಕೊಂದು ಇಲ್ಲಿ ಬಂದು ಸುಳ್ಳು ಹೇಳುತ್ತಿದ್ದಾನೆ ಎಂದನು. ಆದುದರಿಂದ ಈತನಿಗೆ ಬ್ರಾಹ್ಮಣವಧೆಯ ಪಾಪ ಬಂದಿತು. ಆದುದರಿಂದ ಬೇರೆಯವರ ಮೇಲೆ ನಿಂದೆಯ ಮಾತುಗಳನ್ನು, ಅವಿಚಾರದ ಪಾತಕಗಳನ್ನು ಆರೋಪಿಸಿದರೆ ಆ ಪಾಪ ಇಲ್ಲವೆಯನ್ನು ನುಡಿದವರಿಗೆ ಆಗುತ್ತದೆ ಎಂದು ಸುಜ್ಞಾನಿಗಳು ಮಾತಂಗಮುನಿಗೆ ಕಪೋತಾಖ್ಯಾನವನ್ನು ಹೇಳಿದರು–

ಕಪೋತ ಪಕ್ಷಿಯ ಕಥೆ

ಯಮಧರ್ಮನು ಓಲಗದಲ್ಲಿದ್ದನು. ಆಗ ದೇವತೆಗಳು ಖಗದಂಪತಿಗಳ ಮತ್ತು ಶಬರನ ಜೀವವನ್ನು ಪುಷ್ಪಕದಲ್ಲಿ ತೆಗೆದುಕೊಂಡು ಹೋದರು. ಯಮನಿಗೆ ಅದನ್ನು ಕುರಿತು ಚಿತ್ರಗುಪ್ತರು ಹೇಳತೊಡಗಿದರು.

ಕಲ್ಲಿ ಬಳಿ ಸಮೀಪ ಕಾಡಿಗೆ ಒಬ್ಬ ಶಬರ ಬಂದನು. ಒಂದು ಮರದಡಿಯಲ್ಲಿ ಹಕ್ಕಿಗಳ ಗೂಡನ್ನು ಕಂಡನು. ಬಲೆಯೊಡ್ಡಿ ಮರದ ಮರೆಯಲ್ಲಿ ನಿಂತನು. ಬಲೆಗೆ ಬಿದ್ದ ಬಹಳ ಹಕ್ಕಿಗಳಲ್ಲಿ ಕಪೋತ ದಂಪತಿಗಳೂ ಇದ್ದುವು. ಗಂಡುಹಕ್ಕಿ ತಪ್ಪಿಸಿಕೊಂಡಿತು. ಗಂಡನಿಲ್ಲವಾಗಲೀ ಹೆಂಡತಿಗೆ ಮರಣ ದೊರಕುವುದು ಪುಣ್ಯ ಎಂದು ಕಪೋತಿಯ [illegible] ಯಿಂದ ಇದ್ದಿತು. ಹಕ್ಕಿಗಳನ್ನು ಕಟ್ಟಿಕೊಂಡು ಬೇಡ ಊರಿಗೆ ಹೋಗಬೇಕು ಎನ್ನುವಷ್ಟರಲ್ಲಿ ಕತ್ತಲಾಯಿತು. [illegible] ಶಬರ ಅಡವಿಯಲ್ಲಿ ಸಿಕ್ಕಿದನು. [illegible] ಕಪೋತ ದಂಪತಿಗಳ ಗೂಡು ಇದ್ದ ಮರದಡಿಯಲ್ಲಿ ಮಲಗಿದನು. ಈತ ನಮ್ಮ ಮನೆಗೆ ಬಂದಿದ್ದಾನೆ. ಈತ ನಮ್ಮನ್ನು ಕೊಲ್ಲುವವನಾದರೂ ಈತನಿಗೆ ಅತಿಥಿ ಸತ್ಕಾರವನ್ನು ಮಾಡಬೇಕು ಎಂದು ಕಪೋತಿಯ ಭಾಷಿಸಿ ತನ್ನ ಗಂಡನಿಗೆ ಹೇಳಿತು. ಹೆಂಡತಿಯ ಮಾತಿನಂತೆ ಬೇಡನ ಚಳಿ ನಿವಾರಣಾರ್ಥವಾಗಿ ಕಾಡುಗಿಚ್ಚಿನಿಂದ ಉರಿಯುವ ಕೊಳ್ಳಿಯನ್ನು ತಂದಿತು, ಬೆಂಕಿ ಕಾಯ್ದು ಚಳಿ ಹೋಗಿಸಿಕೊಂಡ ಬೇಡ ಹಸಿವೆ ಎಂದನು. ಆ ಮಾತು ಕೇಳಿ ಕಪೋತ ಬೆಂಕಿಗೆ ಬಿದ್ದು ಆತನಿಗೆ ಆಹಾರವಾಯಿತು. ಗಂಡನ ಸಾವಿಗೆ ದುಃಖಿಸಿದ ಹೆಣ್ಣು ಹಕ್ಕಿಯೂ ಬೆಂಕಿಗೆ ಬಿದ್ದಿತು. ಕಪೋತದಂಪತಿಗಳ ಸಾವಿನಿಂದ ನೊಂದ ಬೇಡನೂ ಬೆಂಕಿಗೆ ಬಿದ್ದನು. ಅವರಿಗೆ ಸ್ವರ್ಗಪದವಿ ಆಯಿತು —ಎಂದು ಚಿತ್ರಗುಪ್ತನು ಹೇಳಿದನು. ಯಮಧರ್ಮ ಪುಷ್ಪಕವನ್ನು ಕರೆಸಿ ಮೂವರ ಜೀವನವನ್ನು ನೋಡಿ ಸ್ವರ್ಗಕ್ಕೆ ಕಳಿಸಿದನು.

ಮಹಾಭಾರತದ ಕಪೋತಾಖ್ಯಾನವನ್ನು ಸುಜ್ಞಾನಿಗಳು ಮಾತಂಗಮುನಿಗೆ ಹೇಳಿದರು. ಶಾಂತಿ ಧರ್ಮ [illegible] ನಿರ್ಮಲ [illegible] ಮಾತಂಗಮುನಿಗೆ ಸುಜ್ಞಾನಿಗಳು ಶಿವನನ್ನು ಒಲಿಸುವ ಸೋಮವಾರದ ವ್ರತ ಕಥೆಯನ್ನು ಹೇಳಿದರು.

ಸೋಮವಾರ ವ್ರತ ಮಹಾತ್ಮೆ

ಪಾರ್ವತಿಯು ಕೇಳಿಕೊಳ್ಳಲು ಶಿವನು ಹೇಳಿದ ಸೋಮವಾರ ವ್ರತವನ್ನು ನೇಪಾಳದ ದೊರೆಗೆ ಕೃಪಾಕರ ಮುನಿ ಹೇಳಿದನು. ಇದು ಭೂಲೋಕದಲ್ಲೆಲ್ಲ ಹಬ್ಬಿತು. ಹೇಗೆಂದರೆ–

ನೇಪಾಳದ ಅಧಿಪ ಚಂದ್ರಗುಪ್ತ. ಆತನ ಹೆಂಡತಿ ಸಪ್ತಾವಿನಿ. ಅವರ ಮಗಳು ರಂಭೆ. ವಸಂತ ಋತುವಿನಲ್ಲಿ ಒಂದು ದಿವಸ ಆಕೆ ಸಖಿಯರೊಡನೆ ಹಾಡುತ್ತ ಉಯ್ಯಾಲೆಯಾಡುತ್ತ ಇದ್ದಳು. ಆಗ ಆಕಾಶದಿಂದ ಬಂದ ಮಹಕೇಶಿಯೆಂಬ ಋಷಿಗೆ ಆಕೆ ನಮಿಸಲಿಲ್ಲ. ಹನುಮಂತನ ಶರೀರದಂತೆ ಈತನ ಶರೀರವೆಲ್ಲ ರೋಮಮಯ ಎಂದು ರಂಭೆ ನೆನೆಯುವಷ್ಟರಲ್ಲಿ ಆಕೆಯ ಘನತರ ರೂಪಳಿದು ವಿಕಟರೂಪಾದಳು. ಆಕೆಯ ತಂದೆ ತಾಯಿಗಳು ಮಹಕೇಶಿ ಋಷಿಯಲ್ಲಿಗೆ ಬಂದು ಮಗಳನ್ನು ಕಾಪಾಡಬೇಕು ಎಂದರು. ದೂರ್ವಾಸನ ಶಾಪದಿಂದ ಇಂದ್ರನ ಐಶ್ವರ್ಯ ಹೋಯಿತು. ಆತ ಬೇಡಲು ದೂರ್ವಾಸನಿಗೆ ಕರುಣೆ ಉಕ್ಕಿತು. ತಾಪಸರಿಗೆ ನಿಷ್ಠುರದ ಅತಿಕೋಪವಿಲ್ಲ ಎಂಬುದನ್ನು ಮುನಿವರ ನೀನು ಬಲ್ಲೆ ಕಾಪಾಡು ಎಂದರು. ಆಗ ಮಹಕೇಶಿ ಕರುಣದಿಂದ ಈಕೆಗೆ ಉನ್ನತ ರೂಪು, ಉನ್ನತಯಶನಾದ ವರ ದೊರೆಯುತ್ತಾನೆ ಎಂದು ಹೇಳಿ ಶಶಿವಾರದ ವ್ರತವನ್ನು ಬೋಧಿಸಿದನು. ಅಷ್ಟರಲ್ಲಿ ಬೆಳಗಾಯಿತು. ಚಂದ್ರಗುಪ್ತನು ಮುನಿ ಹೇಳಿದ ರೀತಿಯಲ್ಲಿ ಮಗಳ ಕೈಯಲ್ಲಿ ವ್ರತವನ್ನು ಉದ್ಯಾಪನೆ ಮಾಡಿಸಿದನು. ಸುಜ್ಞಾನಿಗಳು ಮಾತಂಗಮುನಿಗೆ ವ್ರತಮಹಿಮೆಯನ್ನು ತಿಳಿಸಿ ಅನ್ನದಾನದ ಮಹಿಮೆಯನ್ನು ಹೇಳಿದರು.

ಅನ್ನದಾನದ ಕಥೆ

ಹುಸಿದನ ಹೊಲೆಯ, ಹಸಿದನ ವಿಪ್ರ ಎನ್ನುವ ಲೋಕದ ಮಾತು ಸುಳ್ಳಲ್ಲ ಮಾತಂಗತನು, ಹೊಲೆಯನಿಗಿಕ್ಕಿದ ಅನ್ನದ ಫಲವನ್ನು ಕೇಳು ಎಂದು ಸುಜ್ಞಾನಿಗಳು ಹೇಳಿದರು–

ಗೋದಾವರೀ ತೀರದ ಗಂಗಾವತಿಯಲ್ಲಿ ಅನಂತ ಭಟ್ಟನಿದ್ದನು. ಆತ ಮಕ್ಕಳಿಗೆ ಬೆಣ್ಣೆಯನ್ನು ಹಸಿದವರಿಗೆ ಅನ್ನವನ್ನು ಇಕ್ಕುವ ಸುಚರಿತ. ಹಣ್ಣು ಹಣ್ಣು ಮುದುಕನೊಬ್ಬ ಸೌದೆ ಮಾರುವ. ಮಳೆಯಲ್ಲಿ ನೆನೆದು ಒಂದು ರಾತ್ರಿ ಆತನ ಮನೆಯ ಜಗುಲಿಗೆ ಬಂದನು. ನಡುಗುತ್ತ ನರಳುತ್ತ ನಿಂತ ಆ ಹೊಲೆಯನನ್ನು ಕಡುಗತ್ತಲೆಯಲ್ಲಿ ಹೊರ ಬಂದ ಅನಂತಭಟ್ಟ ವಿಚಾರಿಸಿದನು. ಮುದುಕನಿಗೆ ಮೈಕಾಯಿಸಿಕೊಳ್ಳಲು ಬೆಂಕಿಯನ್ನು ಹಸಿವಿಗೆ ಊಟವನ್ನು ಕೊಟ್ಟನು. ಬೆಳಗಾಗುತ್ತಲೆ ಮುದುಕ ಆ ಕೇರಿಯ ಬೇರೆ ಯಾರಿಗೂ ಕಾಣಿಸದಂತೆ ಉಳಿದಿದ್ದ ಅನ್ನವನ್ನು ತೆಗೆದುಕೊಂಡು ಮನೆಗೆ ಹೋದನು. ಆತನ ಹೆಂಡತಿ ಮಕ್ಕಳು ಬ್ರಾಹ್ಮಣನನ್ನು ಹರಸಿದರು.

ಇತ್ತ ಜಯಂತೀಪುರದ ಸರ್ವಜ್ಞನೆಂಬ ಶ್ರೀಮಂತ ಬ್ರಾಹ್ಮಣನ ಮಗನನ್ನು ಒಬ್ಬ ರಾಕ್ಷಸ ಹಿಡಿದನು. ಇದ್ದ ಒಬ್ಬನೇ ಮಗನಿಗೆ ಈ ರೀತಿಯಾಗಲು ಆತ ಮರುಗಿದನು.

ವಿಶೇಷ ಆರಾಧನೆಗಳನ್ನು ಮಾಡಿದರು ಪ್ರಯೋಜನವಾಗಲಿಲ್ಲ. ಸರ್ವಜ್ಞಭಟ್ಟ ಮಗ, ಹೆಂಡತಿ, ಸೊಸೆಯರೊಡನೆ ಬೆಂಕಿಗೆ ಬೀಳಲು ಸಿದ್ಧನಾದ. ಇದನ್ನು ತಿಳಿದು ಅನಂತ ಭಟ್ಟ ಜಯಂತೀ ಪುರಕ್ಕೆ ಬಂದನು. ಸರ್ವಜ್ಞನ ಮಗನನ್ನು ಆತ ಕಂಡ ಕೂಡಲೇ ಬ್ರಹ್ಮರಾಕ್ಷಸನೆದ್ದು ಅನಂತಭಟ್ಟನನ್ನು ಕೊಂಡಾಡಿತು. ಅಲ್ಲಿ ನೆರೆದಿದ್ದವರು ಆಶ್ಚರ್ಯ ಪಟ್ಟರು. ಸರ್ವಜ್ಞಭಟ್ಟನು ಅನಂತಭಟ್ಟರಿಗೆ ವಂದಿಸಿ ಬೇಡಿಕೊಂಡನು. ಅನಂತ ಭಟ್ಟ ನೀನು ಯಾರು? ಏಕೆ ಈತನನ್ನು ಹಿಡಿದಿರುವೆ ಎನ್ನಲು ಬ್ರಹ್ಮರಾಕ್ಷಸ ಪೂರ್ವ ವೈರದಲ್ಲಿ ಈತನನ್ನು ಹಿಡಿದಿದ್ದೇನೆ ಎಂದಿತು. ಆ ವೈರ ಏನು ಎನ್ನಲು ಅದು ಹೇಳತೊಡಗಿತು.

ನಾನು ಮತ್ತು ಈತ ಜೊತೆಯಲ್ಲಿ ಓದಿದೆವು. ನನಗೆ ಹೆಚ್ಚಿನ ವಿದ್ಯೆ ಲಭಿಸಿತು. ಅದನ್ನು ಸೈರಿಸದೆ ಈತ ನನ್ನನ್ನು ಕೊಂದನು. ಆದುದರಿಂದ ನಾನು ಇವನನ್ನು ಹಿಡಿದೆ. ಈಗ ಕೊಲುತ್ತಿದ್ದೆ. ನಿನ್ನಿಂದ ಉಳಿದನು ಎಂದಿತು. ಇವನು ಬದುಕುವುದು ಮುಖ್ಯ. ಆದರೆ ನನ್ನಿಂದ ನಿನಗೆ ಏನಾಗಬೇಕು ಹೇಳು ಅದನ್ನು ನಡೆಸಿಕೊಡುತ್ತೇನೆ ಎಂದು ಅನಂತ ಭಟ್ಟ ಹೇಳಿದಾಗ ಬ್ರಹ್ಮರಾಕ್ಷಸ ಸಂತೋಷಪಟ್ಟಿತು. ನಡುರಾತ್ರಿಯಲ್ಲಿ ಹಸಿದು ಬಂದ ಹೊಲೆಯನಿಗೆ ನೀನು ಇಕ್ಕಿದ ಅನ್ನದ ಫಲವನ್ನು ನನಗೆ ಕೊಡು ನಾನು ಹೊರಟುಹೋಗುತ್ತೇನೆ ಎಂದಿತು. ಅನಂತಭಟ್ಟ ಆ ಫಲವನ್ನು ಧಾರೆಯೆರೆದು ಕೊಟ್ಟಾಗ ಬ್ರಹ್ಮರಾಕ್ಷಸ ಹೋಯಿತು. ಸರ್ವಜ್ಞಭಟ್ಟರಿತ್ತ ಹಣದ ಅಪೇಕ್ಷೆಯನ್ನು ಮಾಡದೆ ಅನಂತಭಟ್ಟನು ನೀಡಿದ ಅನ್ನದಾನದ ಫಲದಿಂದ ಅವರಿಗೆ ಸ್ವರ್ಗಲೋಕ ದೊರೆಯಿತು. ಇದು ಅನ್ನದಾನದ ಫಲ ಎಂದು ಹೇಳಿ ಮಾತಂಗತಮುನಿಗೆ ಸುಜ್ಞಾನಿಗಳು ಕುಲಗುರುವಿನಲ್ಲಿ ದೀಕ್ಷೆ ತೆಗೆದುಕೊಳ್ಳದೆ ಬೇರೊಂದೆಡೆಯಲ್ಲಿ ತೆಗೆದುಕೊಂಡರೆ ಹೊಲೆತನ ನೆಲೆಯಾಯಿತು ಎಂದು ತ್ರಿಶಂಕುವಿನ ಕಥೆ ಹೇಳಿದರು.

ತ್ರಿಶಂಕುವಿನ ಕಥೆ

ಷಟ್ಚಕ್ರವರ್ತಿಗಳಲ್ಲಿ ಹಿರಿಯ ತ್ರಿಶಂಕು. ಇಂದ್ರಪದವಿಗಾಗಿ ಆಶಿಸಿದನು. ತನ್ನ ಕುಲ ಗುರು ವಸಿಷ್ಠನಿಗೆ ವಂದಿಸಿ "ನೂರು ಯಾಗ ಮಾಡಿದಲ್ಲದೆ ಇಂದ್ರಪದವಿ ಲಭಿಸದು. ಭೂಮಿಯಲ್ಲಿ ಯಾಗಮಾಡುವವರಿಗೆ ಇಂದ್ರ ಕಂಟಕಪ್ರಾಯ. ಯಾಗಗಳನ್ನು ಮಾಡದೆ ಈ ಶರೀರ ಸಮೇತ ಸ್ವರ್ಗಭೋಗವನ್ನು ಈಯುವ ಉನ್ನತಿ ನಿಮಗುಂಟೆ?" ಹೇಳಿ ಎಂದನು. ವಸಿಷ್ಠರು ಈತ "ನೀವು ಮಾಡುವುದು" ಎನ್ನದೆ "ನಿಮ್ಮಿಂದ ಆಗುತ್ತದೆಯೆ?" ಎಂದನು. ನನ್ನಲ್ಲಿ ಈತನಿಗೆ ಗುರುಭಕ್ತಿಯಿಲ್ಲ. ಹರಿಪದ, ಸುರಪದ, ತಪಸ್ಸಿನಿಂದಾದ ಫಲವನ್ನು ಬೇಕು ಎಂದರೆ ಕೊಡಬಲ್ಲೆ. ಈಗ ಈ ದೊರೆ ನನ್ನನ್ನು ಲಘುಮಾಡಿ ನುಡಿದನು. ನಾನು ಮಾಡದೆ ಇನ್ನು ಯಾರು ತಾನೆ ಮಾಡಬಲ್ಲರು ಎಂದು ಭಾವಿಸಿದ ವಸಿಷ್ಠ ಮತ್ತೆ ಯಾರ ಕೈಯಲ್ಲಿ ಮಾಡಿಸಿಕೊಳ್ಳುವನೋ ನೋಡಬೇಕಾ ವೆಂದು "ನನ್ನ ಕೈಯಲ್ಲಿ ಆಗದು" ಎಂದನು.

ತ್ರಿಶಂಕು ಯಾವ ಮಾತನ್ನು ಆಡದೆ ವಿಶ್ವಾಮಿತ್ರನ ಬಳಿ ಬಂದನು. ಆತನಿಗೆ

ನಮಸ್ಕರಿಸಿ "ನನ್ನನ್ನು ಶರೀರ ಸಹಿತ ಸ್ವರ್ಗಕ್ಕೆ ಕಳಿಸಲು ನಿಮ್ಮಿಂದ ಆಗುತ್ತದೆಯೆ ?" ಎಂದನು. ವಿಶ್ವಾಮಿತ್ರ "ಆಗುವುದಿಲ್ಲ" ಎಂದನು. ನಿಮ್ಮಿಂದ ಈ ಕೆಲಸ ಆಗಲೇಬೇಕು ಎಂದಾಗ ವಿಶ್ವಾಮಿತ್ರ ಹೀಗೆ ಯೋಚಿಸಿದನು. "ಈ ಕಾರ್ಯ ವಸಿಷ್ಠನಿಂದ ಆಗದುದೇನಲ್ಲ. ಈತನ ಉದ್ಧತತನಕ್ಕೆ ಆತ ಆಗದು ಎಂದನು. ಆದರೂ ವಸಿಷ್ಠ ಮಾಡಲಾಗದ್ದನ್ನು ವಿಶ್ವಾಮಿತ್ರ ಮಾಡಿದ ಎನ್ನುವ ಖ್ಯಾತಿಯನ್ನು ತಳೆಯುತ್ತೇನೆ" ಎಂದು ಇಂದ್ರನನ್ನು ಮನದಲ್ಲಿ ನೆನೆದನು. ವಿಶ್ವಾಮಿತ್ರನು ಆತನನ್ನು ಒಡಂಬಡಿಸಿ ತ್ರಿಶಂಕುವನ್ನು ಜೊತೆಯಲ್ಲಿ ಸ್ವರ್ಗಕ್ಕೆ ಕಳಿಸಿದನು.

ಇಂದ್ರನೊಡನೆ ಅರ್ಧಾಸನದಲ್ಲಿದ್ದ ತ್ರಿಶಂಕುವನ್ನು ಭಾರದ್ವಾಜ, ದಧೀಚಿ, ಗೌತಮ ಮೊದಲಾದ ಋಷಿಗಳು ಕಂಡು ಹೀಗೆ ಚಿಂತಿಸಿದರು. ಇಹ–ಪರಂಗಳ ಫಲವನ್ನು ಗುರುವಿನಿಂದ ಪಡೆಯಬೇಕು. ಈತ ಹಾಗೆ ಮಾಡಿಲ್ಲ. ಇಂದ್ರಸಮನಾಗಿ ಈತ ಕುಳಿತಿರುವುದನ್ನು ನಾವು ನೋಡುವುದು ಸಲ್ಲ. ಈತನನ್ನು ಶಪಿಸಲು ನಮಗೆ ಕಾರಣ ಇದೆ ಎಂದು ಭಾವಿಸಿ ತ್ರಿಶಂಕುವನ್ನು ಇಂದ್ರ ಪೀಠದಿಂದ ಕೆಳಗೆ ನೂಕಿದರು. ಗುರುವಿಲ್ಲದವನು ತ್ರಾತನೇ ಆಗನು. ಗುರುವಲ್ಲದೆ ಬೇರೆಯವರಿಂದ ದೀಕ್ಷೆ ಪಡೆದರೆ ಚಾಂಡಾಲ ಜನ್ಮ ಪ್ರಾಪ್ತವಾಗುತ್ತದೆ. ಸುಜ್ಞಾನಿಗಳಿಂದ ಈ ಮಾತು ಕೇಳಿದ ಮಾತಂಗತನು ಗುರುವಿನಿಂದ ಆಗ ದೀಕ್ಷೆ ಪಡೆದಿದ್ದನು ಎಂದು ಬಸವಣ್ಣ ಶರಣ ತಿಂಥಿಣಿಗೆ ಹೇಳಿದನು. ಶರಣಸಮೂಹ ಮುಂದಿನ ಕಥೆಯೇನು ಎಂದಾಗ ಬಸವಣ್ಣ ಹೇಳತೊಡಗಿದನು—

ಸ್ವರ್ಗದಿಂದ ನೆಲಕ್ಕುರುಳುತ್ತಿದ್ದ ತ್ರಿಶಂಕುವಿನ ಮೊರೆಯನ್ನು ಕೇಳಿ ವಿಶ್ವಾಮಿತ್ರ ಆಕಾಶದಲ್ಲಿ ಅಂತರಲೋಕವೊಂದನ್ನು ಜೋಡಿಸಿದನು. ಇರುವೆ–ಆನೆ ಮುಖ್ಯವಾಗಿ ಭೂಲೋಕದ ಎಲ್ಲ ಚರಾಚರಗಳನ್ನು ಅಲ್ಲಿ ನಿರ್ಮಿಸಿದನು. ತ್ರಿಶಂಕು ಅಂತರಲೋಕದೊಡೆಯನಾಗಿ ಹೊಸಲೋಕವನ್ನು ಅನುಭವಿಸುತ್ತಿದ್ದನು. ದೇವತೆಗಳು ಇದನ್ನು ಸೈರಿಸದಾದರು. ಇಂದ್ರ–ಬ್ರಹ್ಮನಿಗೆ, ಬ್ರಹ್ಮ–ವಿಷ್ಣುವಿಗೆ, ವಿಷ್ಣು ಶಿವನಿಗೆ ಹೇಳಿದನು. ಅವರು ವಿಶ್ವಾಮಿತ್ರನನ್ನು ಕರೆಸಿ ಎಲ್ಲವನ್ನೂ ತಿಳಿದು ಪಂಡಿತನ್ಯಾಯವನ್ನು ಹುಟ್ಟಿಸಿದರು. ಪರಮೇಶ್ವರನು ಎಲ್ಲರಿಗೂ ಗುರು ಒಬ್ಬನೆ. ಎರಡು ಎಂದವರಿಗೆ ನರಕ ತಪ್ಪದು. ಇದನ್ನು ತಿಳಿದು ನಡೆಯಬೇಕು ಎಂದು ತ್ರಿಶಂಕುವಿಗೆ ಊರ್ಧ್ವಲೋಕವನ್ನು ಕೊಟ್ಟು ಅಂತರಲೋಕವನ್ನು ಹೋಗಲಾಡಿಸಿದರು. ವಿಶ್ವಾಮಿತ್ರನಿಗೆ ಸಂತೋಷವಾಗುವಂತೆ ತ್ರಿಶಂಕುವಿನ ಹೊಸಲೋಕವನ್ನು ಪರಿಷ್ಕರಿಸಿದರು. ಅಂತರಲೋಕದ ಕೆಲವು ಪ್ರಾಣಿಗಳನ್ನು ಸಮುದ್ರದಲ್ಲೂ ಮತ್ತೆ ಕೆಲವು ಪ್ರಾಣಿಗಳನ್ನು ಭೂಮಿಯ ಮೇಲೂ ನೆಲೆಗೊಳಿಸಿದರು. ಬಸವಣ್ಣ ಹೇಳಿದ ತ್ರಿಶಂಕುವಿನ ಕಥೆಯನ್ನು ಕೇಳಿ ಶರಣ ಸಮೂಹ ಅಡವಿಯ ಬೇಡ ಜಡಕರ್ಮವಳಿದು ಭಕ್ತನಾದನೆ ಎಂದರು. ಬಸವಣ್ಣ ಮುಂದುವರೆಸಿದನು—

ಮಾತಂಗತನು ಸುಜ್ಞಾನಿಗಳಿಗೆ "ನೀವು ಇದುವರೆಗೆ ಹೇಳಿದ ಎಲ್ಲ ಕಥೆಗಳಿಂದ ನನ್ನ ಮನಸ್ಸು ಶಾಂತವಾಯಿತು. ಆದರೆ ಒಂದು ಸಂಶಯ ಬಿಡಲಿಲ್ಲ. ಚಿತ್ರಗುಪ್ತರಿಗೆ ಭೂಲೋಕದ ಜನರು ಮಾಡಿದ ಕರ್ಮ–ಧರ್ಮಗಳ ಅರಿವು ಹೇಗೆ ಉಂಟಾಗುತ್ತದೆ" ಎಂದನು. ಸುಜ್ಞಾನಿಗಳು ಹೇಳಿದರು–

***

ಚಿತ್ರಗುಪ್ತರಿಗೆ ಈಶ್ವರ ಒಂದು ವರವನ್ನು ಕೊಟ್ಟಿದ್ದಾನೆ. ತಾವು ಮಾಡುವ ಕೆಲಸಗಳನ್ನು ಯಾರು ಕಾಣರು ಎಂದು ಯಾರು ಅಂದುಕೊಂಡಿರುತ್ತಾರೆಯೊ ಅವರ ಕೆಲಸದ ಪುಣ್ಯ–ಪಾಪಗಳನ್ನು ಚಿತ್ರಗುಪ್ತರು ಕಾಣುತ್ತಾರೆ. ಅವುಗಳನ್ನು ಬರೆಯುವ ಜ್ಞಾನವೂ ಅವರಿಗಿದೆ. ಪಾಪಿಷ್ಠರಿಗೆ ದಂಡನೆ ಮಾಡುವ ಅಧಿಕಾರ ಯಮನಿಗಿದೆ. ಸಕಲ ಜೀವಗಳ ಲೌಕಿಕ ಪ್ರಪಂಚವನ್ನು. ಭೂತ ಭವಿಷ್ಯದ್ವರ್ತಮಾನಗಳನ್ನು ಚಿತ್ರಗುಪ್ತರು ಅರಿಯಬಲ್ಲರು ಎಂದರು. ಮಾತಂಗತಮನು ಹರನ ಸ್ವರೂಪವನ್ನು ಕೇಳಿದನು.

ಹರನ ಸ್ವರೂಪವನ್ನು ವರ್ಣಿಸಿದ ಸುಜ್ಞಾನಿಗಳು ಹರ. ಶಂಕರ, ಬೌದ್ಧ, ಆರುಹತ ಎಂದರೆ. ಪರಬೊಮ್ಮತತ್ವ ಎಂದರೆ ಹರನೊಬ್ಬನೆ. ಆತ ಏಕಮೇವಾದ್ವಿತೀಯಾತ್ಮ. ಅವರವರ ಭಕ್ತಿಗೆ ತಕ್ಕಂತೆ ಇಷ್ಟಫಲವನ್ನು ದೇವ ಪರಮೇಶನು ಕೊಡುತ್ತಾನೆ. ಆತ ಪರಿಪೂರ್ಣ. ಮರದ ಮೂಲವನ್ನು ಸಲಹಿದರೆ ಹೇಗೆ ಮರ ಪೂರ್ತಿ ಬಾಳುತ್ತದೆಯೋ ಹಾಗೆ ಸದಾಶಿವನ ಪಾದಪೂಜೆ ಪಾಪಕ್ಷಯವನ್ನು. ಸರ್ವದೇವ ಕುಲ ತೃಪ್ತಿಯನ್ನು ಉಂಟು ಮಾಡುತ್ತದೆ. ಶಿವನು ಅಖಂಡಿತ ಮಂಡಲಾಕಾರ. ಅಕ್ಷಯ, ಅಭವ, ಅಗಣಿತ, ಅಪ್ರಮಾಣ, ಅಭೇದ್ಯನೆಂದು ಮಾತಂಗತಮನಿಗೆ ಸುಜ್ಞಾನಿಗಳು ಹೇಳಿದರು.

ಶುದ್ಧಾಂತಃಕರಣನಾಗಿ ಮಾತಂಗತಮನು ಸುಜ್ಞಾನಿಗಳ ಕಾಲಿಗೆರಗಿ ಇಂತಹ ಘನವನ್ನುಳ್ಳ ಮಹಂತ ನೆಲಸಿರುವ ತಾವು ಯಾವುದು ತಿಳಿಸಿ ಎಂದನು. ಆಗ ಸುಜ್ಞಾನಿಗಳು ಆತನಿಗೆ ಮಂತ್ರೋಪದೇಶ ಮಾಡಿ ದೀಕ್ಷೆಯಿತ್ತರು. ಮಾತಂಗತಮು ಜಾತಿಧರ್ಮ ವಳಿದು ಸನ್ಯಾಸ್ಯನಾದನು. ದುರುಳ, ದುರ್ಗುಣಿ, ದುಶ್ಚರಿತ, ದುರ್ಜನನ ಕರ್ಮಯಾದ ಜೇಡನಲ್ಲಿ ನೆರೆದ ಅಜ್ಞಾನವನ್ನು ಕಳೆದ ಆ ಗುರು ಸುಜ್ಞಾನಿಗಳ ಹಿರಿಮೆಯನ್ನು ಬಣ್ಣಿಸುವವರು ಯಾರು ? ಎಂದು ಅನೇಕ ವಿಧವಾಗಿ ಶರಣರು ಸುಜ್ಞಾನಿಗಳನ್ನು ಭಕ್ತಿಪುರಸ್ಸರ ಸ್ತುತಿಸಿದರು. ಬಸವಣ್ಣ ಕಥೆಯನ್ನು ಮುಂದುವರೆಸಿದನು–

ಸುಜ್ಞಾನಿಗಳ ಅಡಿಯಿಂದ ಅಗಲದ ವರವನ್ನು ಕೊಡಿ ಎಂದು ನನ್ನಯ್ಯನು ಬೇಡಿದನು. ಕಲ್ಯಾಣದ ಭಕ್ತರನ್ನು ಕಂಡು ಅನಂತರ ದೇವಗೃಹ. ತೀರ್ಥಕ್ಷೇತ್ರಗಳನ್ನು ನೋಡುತ್ತ ಪುಣ್ಯದೇಶಗಳನ್ನು ಧರ್ಮಾತ್ಮರನ್ನು ಕಾಣೋಣ ಎಂದು ಸುಜ್ಞಾನಿಗಳು ನನ್ನಯ್ಯನಿಗೆ ಹೇಳಿದರು. ನನ್ನಯ್ಯ ಒಪ್ಪಿ ಪ್ರಯಾಣ ಮಾಡುತ್ತ ಬಂದರು. ಯೋಜನ ಬರಲು ಸುಜ್ಞಾನಿಗಳು ಬಳಲಿದರು. ಹಸಿವು, ಬಾಯಾರಿಕೆ. ಕಡುನಿದ್ರೆಯಾದ ನಿದ್ರೆ ಅಲಬದಿರಿ ಎನ್ನುತ್ತ ಕೈಗೊಟ್ಟು ನನ್ನಪ್ಪ ಕಣ್ಣನೆಯ ನೆಳಲಿಗೆ ಸುಜ್ಞಾನಿಗಳನ್ನು ಕರೆತಂದನು. ಗುರುಗಳಿಗೆ ಧ್ಯಾನ ಹೇಳಿ ಹಣ್ಣು ನೀರು ತರಲು ಹೋದನು. ಸುಜ್ಞಾನಿಗಳು [illegible].

ಇತ್ತ ಅಮರಾವತಿಯ ಕೌಶಿಕರಾಜನ ಮನೆಯಲ್ಲಿ [illegible] ಕಳ್ಳರು ಕನ್ನವಿಕ್ಕಿ ದವು ರತ್ನಾಭರಣಗಳನ್ನು ಕದ್ದು ಹೊತ್ತುಕೊಂಡು ಹೋಗುವಾಗ ಹಿಂದೆ [illegible]

ಲಿದ್ದಿತು. ಅವರು ಒಡವೆಗಳೊಡನೆ ಮುಂದೆ ಸಾಗಲಾರದೆ ಯೋಗಸಿದ್ಧಿಯಲ್ಲಿದ್ದ ಸುಜ್ಞಾನಿ
ಗಳ ಮುಂದೆ ಮಡಗಿ ಓಡಿದರು. ರಾಜಸೇನೆ ಸುಜ್ಞಾನಿಗಳ ಕತ್ತನ್ನು ಕತ್ತರಿಸಿ
ಒಡವೆಗಳೊಡನೆ ತಂದು ರಾಜನಿಗೆ ತೋರಿಸಿದರು. ಭಸ್ಮಲೇಪಿತ ತಲೆಯನ್ನು ಕಂಡು
ರಾಜ ತನಗೆ ವೃಥಾಪವಾದ ಒದಗಿತೆಂದು ಚಿಂತಿಸಿದನು. ಯಾರಾದರಾಗಲಿ ನಮ್ಮ
ಹಣ ನಮಗೆ ಸಿಕ್ಕಿತು ಎಂದು ಭಾವಿಸಿ ಆ ತಲೆಯನ್ನು ಮರದ ತುದಿಯಲ್ಲಿ ಕಟ್ಟಿಸಿದನು.

ಹಣ್ಣು ನೀರು ತರಹೋದ ನನ್ನಯ್ಯನಿಗೆ ಚಿತ್ತ ಮರುಗುತ್ತಿದೆ. ತವಕದಿಂದ ಗುರು
ವಿನೆಡೆಗೆ ಬಂದು ಹೊರೆಯನ್ನಿಳಿಸಿ ಶಿರತ್ತೊಲಗಿದ ಮೂರ್ತಿಯನ್ನು ಕಂಡನು. ಹಲವು
ಪರಿಯಲ್ಲಿ ದುಃಖಿಸಿದನು. ತನ್ನ ಕತ್ತನ್ನು ಕತ್ತರಿಸಿಕೊಳ್ಳಲು ಉದ್ಯುಕ್ತನಾದನು.
ಶಿವ ಇದನ್ನು ಅರಿತನು. ನಾನು ಇಲ್ಲಿ ಪ್ರತ್ಯಕ್ಷನಾಗಿ ಕೈಲಾಸಕ್ಕೆ ಕೊಂಡೊಯ್ದರೆ
ಭೂಮಿಯ ಜನರಿಗೆ, ಕಲ್ಯಾಣದ ಸದ್ಭಕ್ತರಿಗೆ ಈತನ ಗುಪ್ತ ಭಕ್ತಿ ತಿಳಿಯದು ಎಂದು
ಮಾತನಾಡದಿದ್ದನು. ನನ್ನಯ್ಯ ಎತ್ತಿದ ಕೂರಸಿಯಿಂದ ತನ್ನ ಕತ್ತನ್ನು ಕುತ್ತಿ
ಕೊಳ್ಳುತ್ತಿರಲು "ಹಾಗೆ ಮಾಡಬೇಡ. ಮೃತ್ತಿಕೆಯಿಂದ ಶಿರವನ್ನು ಮಾಡಿಹತ್ತಿಸು" ಎಂದು
ಆಕಾಶವಾಣಿಯಾಯಿತು. ಹಾಗೆ ಮಾಡಿದಾಗ ಮಲಗಿದವನು ಎದ್ದಂತೆ ಸುಜ್ಞಾನಿಗಳು
ಎದ್ದರು. ನನ್ನಯ್ಯ ಸಂತಸದಿಂದ ಗುರುಪದಗಳಿಗೆರಗಿದನು. ಹಣ್ಣು ಹಂಪಲು ತಿಂದು
ಗುರುಶಿಷ್ಯರು ಪ್ರಯಾಣವನ್ನು ಮುಂದುವರೆಸಿದರು. ಸುಜ್ಞಾನಿಗಳಿಗೆ ನಡೆದುದೇನೂ
ತಿಳಿಯಲಿಲ್ಲ. ನನ್ನಯ್ಯನೂ ಹೇಳಲಿಲ್ಲ. ಹೀಗೆ ಮುಂದುವರೆದು ಅವರು ಅಸುರಾಪುರ
ವನ್ನು ತಲಪಿದರು. ಭಕ್ತರ ಮನೆಯಲ್ಲಿ ತಂಗಿ ಪೂಜೆಗೆ ಹೂವನ್ನು ತರಹೋದ ನನ್ನಯ್ಯ
ಆಲದ ಮರದ ಮೇಲಿದ್ದ ತನ್ನ ಗುರುವಿನ ಶಿರವನ್ನು ಕಂಡನು. ಶಿವನನ್ನು ಪ್ರಾರ್ಥಿಸಿ
ತನ್ನ ಕತ್ತನ್ನು ಕತ್ತರಿಸಿಕೊಳ್ಳಲು ಕತ್ತಿಯನ್ನು ಎತ್ತಿದನು. ಆಗ ಶಿವ "ಎರೆಮಣ್ಣಿನಲ್ಲಿ
ಒಂದು ಶರೀರವನ್ನು ಮಾಡಿ ಅಲಂಕರಿಸಿ ಈ ಶಿರವನ್ನು ಹತ್ತಿಸಲು ಪ್ರಾಣ ಬರುತ್ತದೆ.
ನಾಳೆ ಕಲ್ಯಾಣವನ್ನು ಹೊಕ್ಕಾಗ ಬಸವಣ್ಣ ಇದಿರುಗೊಂಡು ಅಲ್ಲಿಯ ಶರಣ ತಿಂಥಿಣಿಗೆ
ನಿನ್ನ ವೃತ್ತಾಂತವನ್ನು ಹೇಳುತ್ತಾನೆ. ಆಗ ನಾವು ಪುಷ್ಪಕವನ್ನು ಕಳಿಸುತ್ತೇವೆ. ನೀವು
ಮೂವರೂ ನನ್ನ ಸನ್ನಿಧಿಗೆ ಬರುವುದೆಂದು ಸೂಚಿಸಲು" ನನ್ನಯ್ಯ ಹೀಗೆಂದನು.

ಹರನೆ, ನಿನ್ನ ಕರುಣ ತುಂಬಿದ ಶರಣರ ಮುಂದೆ ನನ್ನ ಹೆಸರನ್ನು ಹೇಳಿದರೆ ನಾಚಿ
ಸ್ಟರನು. ಇಲ್ಲಿಯೇ ನಿನ್ನ ಪಾದ ಸೇರುವುದನ್ನು ಕರುಣಿಸು ಎಂದನು. ನನ್ನ ನುಡಿ
ಭಕ್ತಿಯುಕ್ತಿಯ ಅತಿ ಸುಜ್ಞಾನ ಜಗದ ಭಕ್ತ ಸಂಕುಲಕ್ಕೆಲ್ಲ ತಿಳಿಯಲಿ ಎಂದು ಶಿವ
ನನ್ನಯ್ಯನ ಇಷ್ಟಲಿಂಗದಲ್ಲಿ ಅಡಗಿದನು. ಅನಂತರ ನನ್ನಯ್ಯ ಮಣ್ಣಿನ ದೇಹವನ್ನು
ಮಾಡಿ ಶಿರವನ್ನು ತಂದು ಸೇರಿಸಲು ಪ್ರಾಣ ಬಂದಿತು. ಕಾರುಣ್ಯ ದೃಷ್ಟಿಯಿಂದ ನೋಡು
ತ್ತಿದ್ದ ಶರಣನಿಗೆ ಕೈಮುಗಿದು ನನ್ನಯ್ಯ ಮೊದಲಿನವರ ಜೊತೆ ಇವರನ್ನು ಸೇರಿಸಿದನು.
ಅಲ್ಲಿಂದ ಕಲ್ಯಾಣಕ್ಕೆ ಮೂವರೂ ನಡೆದರು.

ಬಸವಣ್ಣ ಇವರ ಸ್ವರೂಪವನ್ನು ಆ ಶರಣರ ಶಿರ ಶರೀರದ ಭೇದವನ್ನು ತೋರಿದನು.
ಹಾಗೆ ತೋರುತ್ತಿರಲು ಆಕಾಶದಲ್ಲಿ [illegible] ಪುಷ್ಪಕವನ್ನು ಶರಣ ತಿಂಥಿಣಿಗೆ ಬಸವಣ್ಣ
ತೋರಿಸಿದನು. ಒಂದು ಪುಷ್ಪಕದಲ್ಲಿ ನನ್ನಯ್ಯನ ಮತ್ತೊಂದರಲ್ಲಿ ಸುಜ್ಞಾನಿ ಮತ್ತು

ಜ್ಞಾನಾನಂದರೂ ಕುಳಿತರು. ಪುಷ್ಪಕ ಕೈಲಾಸವನ್ನು ಹೊಕ್ಕಿತು. ನನ್ನಯ್ಯನ ಗುರುಭಕ್ತಿಯನ್ನು, ಛಲವನ್ನು ಶಿವನು ಪ್ರಮಥರಿಗೆ ತಿಳಿಸಿ ಮೂವರಿಗೂ ಗಣಪದವನ್ನಿತ್ತನು.

ಇತ್ತ ಕಲ್ಯಾಣದಲ್ಲಿ ಶರಣ ಸಮೂಹ ಬಸವಣ್ಣ ಹೇಳಿದ ಕಥೆಯನ್ನು ಕೇಳಿ ಕೌತುಕಗೊಂಡರು.

ಕಥಾಸಾಹಿತ್ಯ ಸಮೀಕ್ಷೆ

ನನ್ನಯ್ಯ ಚಾರಿತ್ರದ ಕಥಾಲೋಕವನ್ನು, ಅದರ ವೈವಿಧ್ಯ ವೈಶಾಲ್ಯವನ್ನು ಕಂಡ ಓದುಗನಿಗೆ ಆಶ್ಚರ್ಯವೂ ಸಂತೋಷವೂ ಏಕ ಕಾಲಕ್ಕೆ ಆಗುತ್ತದೆ. ಭಾರತೀಯ ಕಥಾ ಸಾಹಿತ್ಯದ ಹಿರಿಮೆಯನ್ನು ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳು ಹೀಗೆ ಹೇಳಿದ್ದಾರೆ "ಭರತಖಂಡವು ಕಥೆಗಳ ತವರು; ಇಲ್ಲಿಂದ ಪಾರಸೀಕರೂ, ಅವರಿಂದ ಅರಬರೂ, ಅವರಿಂದ ಇಟಲಿಯವರೂ, ಫ್ರೆಂಚರೂ, ಇಂಗ್ಲೀಷರೂ ಅವುಗಳನ್ನು ಅರಿತರು"[1] ಅವರೇ ಮತ್ತೊಂದೆಡೆ ಭಾರತೀಯ ಕಥಾಸ್ವರೂಪವನ್ನು ಕುರಿತು ಹೇಳಿರುವ ಮಾತು "ಹಿಂದಿನ ಕಾಲದಲ್ಲಿ, ಕಿವಿ ಹರಿದು ಹಾಲೆ ಜೋಲು ಬಿದ್ದಿದ್ದರೂ ಮುತ್ತೈದೆಯರು ತಪ್ಪಲೆ ಓಲೆಗಳನ್ನು ಧರಿಸುತ್ತಿದ್ದಂತೆ, ಇಲ್ಲಿ ಅನೇಕ ವೇಳೆ ಮೂಲ ಕಥೆಯ ಸಂಬಂಧ ನಿಮಿತ್ತ ಮಾತ್ರಕ್ಕೆ ಒಂದು ಎಳೆ ಅಂಟಿಕೊಂಡಿರುತ್ತದೆ. ಅದಕ್ಕೆ ಉಪಕಥೆಗಳು ಸಿಂಬಿಸಿಂಬಿಯಾಗಿ ಕೊಂಡಿ ಕೊಂಡಿಯಾಗಿ ಜೋತು ಬೀಳುತ್ತವೆ"[2] ನನ್ನಯ್ಯ ಚಾರಿತ್ರಕ್ಕೂ ಯಥಾವತ್ತಾಗಿ ಈ ಮಾತು ಅನ್ವಯಿಸುತ್ತದೆ.

ಕಥಾಸರಿತ್ಸಾಗರದ ಪಾತ್ರಗಳ ಕೋರಿಕೆಯಂತೆ ತಿಳಿಯಬರುವ ಕಥೆಯ ಸ್ವರೂಪ ಹೀಗಿದೆ – ಕಥೆ ನೂತನ, ರಮ್ಯ, ಮನೋಹರ, ವಿಚಿತ್ರ, ವಿನೋದ, ಅಪೂರ್ವ, ಅನುರಾಗ ರಮ್ಯ, ಅನುಪಮವಾಗಿರಬೇಕು. ಅಲ್ಲಿ ದೇವತೆಗಳು, ಮನುಷ್ಯರು, ವಿದ್ಯಾಧರರು, ಪಿಶಾಚರು, ಯಕ್ಷರು, ಧೂರ್ತರು, ರಾಜಪುತ್ರ, ವರ್ತಕಪುತ್ರ, ಪ್ರಾಜ್ಞ, ದಡ್ಡರ ಕಥೆಗಳು ಬರುತ್ತವೆ. ಕಥೆಯನ್ನು ಹೇಳುವುದು–ಕೇಳುವುದು ಹೊತ್ತು ಹೋಗಲು, ವಿನೋದಕ್ಕಾಗಿ, ರಾತ್ರಿ ನಿದ್ರೆ ಬಾರದಿರಲು, ದಾರಿ ಕಳೆಯುವುದಕ್ಕಾಗಿ. ಕಥೆಯನ್ನು ಕೇಳಿದವನಿಗೆ ಉಂಟಾಗುವುದು ಸಂತೋಷ. ಹೇಳಿದವನಿಗೆ ದೊರಕುವುದು ಶ್ಲಾಘನೆ.

ರುದ್ರಭಟ್ಟನ ಜಗನ್ನಾಥ ವಿಜಯದ ಒಂದು ಪ್ರಸಂಗ ಹೀಗಿದೆ. ಕೃಷ್ಣ ಅಳುತ್ತಿದ್ದಾನೆ, ಗೋಪಿ ಸಮಾಧಾನ ಮಾಡುತ್ತಿದ್ದಾಳೆ–

> ಒಂದಲ್ಲದೊಂದನೆನುತವು
> ದೊಂದು ದಿನಂ ಕೃಷ್ಣನಾಟಂ ಗುಟ್ಟಿದೊಡದನೇ
> ನೆಂದುಂ ಮಾಣಿಸಲರಿಯದ
> ದೊಂದು ಕಥಾಂತರದೆ ಗೋಪಿ ಮಾಣಿಸುಗೆಯ್ಯಂ" ಜಗವಿ. ೩–೬೦
> "ಕತೆಯಂ ಕೇಳಲೆ ಕಂದ–ಹುಂ" ಜಗವಿ ೩–೬೧

---

[1] ಕಥಾಮೃತ LXVII [2] ಅದೇ LXVI

ಇದರಿಂದ ಕಥೆಗಳನ್ನು ಮಕ್ಕಳಾದಿಯಾಗಿ ಎಲ್ಲರೂ ಪ್ರೀತಿಸುತ್ತಾರೆ ಎಂಬುದು ತಿಳಿದು ಬರುತ್ತದೆ.

ಕಥೆಗಳು ಪರಂಪರೆಯಿಂದ ಬರುವ ಸಲುವಾಗಿ ಜನರಲ್ಲಿ "ಕಲಿತ ಕಥೆಯನ್ನು ಮನಸ್ಸಿನಲ್ಲಿಟ್ಟುಕೊಂಡರೆ ಅಪಮಾನ ಬರುತ್ತದೆ" ಎನ್ನುವ ಮನೋಭಾವವನ್ನು ಸೃಷ್ಟಿಸಿದ್ದರು. ಒಂದು ಕಥೆಯನ್ನು ಪೂರ್ತಿ ಹೇಳದೆ ಇದ್ದರೆ, ಅರೆಗತೆ ಮಾಡಿದರೆ ಕತೆಯನ್ನು ಕೇಳಲು ಬಂದ ದೇವತೆಗಳು ಕುತೂಹಲ ಭಂಗದಿಂದ ಶಾಪ ಹಾಕುತ್ತಾರೆ ಎನ್ನುವ ಪ್ರತೀತಿಯಿದ್ದಿತು. ಕಥಾಸರಿತ್ಸಾಗರದ "ಈ ಪಾಪಿಯು ಪೂರ್ತಿ ಕಥೆ ಹೇಳದೆಯೇ ನಿದ್ರೆಹೋಗಿಬಿಟ್ಟ; ಆದ್ದರಿಂದ ಅವನು ಬೆಳಗ್ಗೆ ಈ ಹಾರವನ್ನು ಕಂಡು ಕತ್ತಿಗೆ ಹಾಕಿಕೊಂಡರೆ ಸಾಯಲಿ!' ಎಂದು ವಾಣಿಯಾಯಿತು. 'ಅದನ್ನು ಕಳೆದುಳಿದರೆ ಮಾವಿನ ಮರದಿಂದ ಹಣ್ಣು ಕಿತ್ತು ಸಾಯಲಿ!' ಎಂದು ಇನ್ನೊಂದು ವಾಣಿಯಾಯಿತು. 'ಅದನ್ನು ಕಳೆದುಳಿದರೆ ಮದುವೆಯ ಮನೆಯು ಮೇಲೆ ಬಿದ್ದು ಸಾಯಲಿ!' ಎಂದು ಇನ್ನೊಂದು ವಾಣಿಯಾಯಿತು. 'ಅದನ್ನೂ ಕಳೆದುಳಿದರೆ ರಾತ್ರಿ ಮಲಗುವ ವೇಳೆಯಲ್ಲಿ ನೂರು ಸಾರಿ ಶೀನು ಬರುತ್ತದೆ ಬಂದಾಗಲೆಲ್ಲಾ 'ಶತಾಯುಸ್ಸು' ಎಂದು ಯಾರಾದರೂ ಹೇಳದಿದ್ದರೆ ಸಾಯಲಿ; ಇದನ್ನು ಕೇಳಿದವನು ಅವನಿಗೆ ಇದನ್ನು ತಿಳಿಸಿದರೆ ಅವನೂ ಸಾಯಲಿ!' ಎಂದು ಇನ್ನೊಂದು ವಾಣಿಯಾಯಿತು.[1]" ಎನ್ನುವ ನಂಬಿಕೆ ಇಂದಿಗೂ ಜನಪದ ಕಥೆಗಳ ಸ್ವರೂಪದಲ್ಲಿ ಉಳಿದುಕೊಂಡು ಬಂದಿದೆ.[2]

ಎನ್. ಬ್ರೌನ್ ಎನ್ನುವ ಅಮೆರಿಕದ ಮಾನವ ಶಾಸ್ತ್ರಜ್ಞ ಭಾರತ ಮತ್ತು ಅದರ ಸುತ್ತಮುತ್ತಲ ಸಿಲೋನ್, ಟಿಬೆಟ್, ಬರ್ಮ ಮತ್ತು ಮಲಯುಪರ್ಯಾಯ ದ್ವೀಪಗಳಲ್ಲಿ ಅಚ್ಚಿನ ರೂಪದಲ್ಲಿ ದೊರೆಯುವ 3000 ಕಥೆಗಳನ್ನು ಅಂದಾಜು ಮಾಡಿದ್ದಾನೆ. ಬೃಹತ್ಕಥಾ ಸರಿತ್ಸಾಗರ, ಬೃಹತ್ಕಥಾ ಮಂಜರಿ, ಬೃಹತ್ಕಥಾ ಶ್ಲೋಕ ಸಂಗ್ರಹ, ವೇತಾಲಪಂಚವಿಂಶತಿ, ಪಂಚತಂತ್ರ, ವಿಕ್ರಮ ಚರಿತ, ಶುಕಸಪ್ತತಿ ಮುಂತಾದ ಕಥಾಸಂಗ್ರಹಗಳು ದೊರೆಯುತ್ತವೆ. ಬೌದ್ಧರು ಜಾತಕ ಕಥೆಗಳನ್ನು, ಜೈನರು ತಮ್ಮ ಧಾರ್ಮಿಕ ಕಥೆಗಳನ್ನೂ ಬರೆದಿದ್ದಾರೆ. ಫಂಗ್ ಮತ್ತು ವಾಗ್ನಾಲ್ಸ್‌ರವರು ಹೇಳುವಂತೆ "India may be largely illiterate but it is definitely aritculate. love stories, fairy stories, animal stories, parables and tales of the Gods are used as media for expressing new feelings and thoughts which must be assimilated to the old traditions and ways of life.Hero tales may followed ancient pattern while they tell the trials of real men in shifting political and economic seen'

---

[1] ಕಥಾಮೃತ ಪುಟ. 104. [2] ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು ಸಂ. ಎ. ಓಬಯ್ಯ. ಉತ್ತರ ಕರ್ನಾಟಕದ ಜನಪದ ಕಥೆಗಳು—ಸಂ. ಸಿಂಪಿ ಲಿಂಗಣ್ಣ. ಪುಟ 29–30

Standard Dictionory of Folklore Mythology and Legend Vol, I.

ಅಲ್ಲದೆ ಭಾರತೀಯ ಜನತೆ ಋಷಿಸಮುದಾಯದ ಜೊತೆಯಲ್ಲಿ ಕಲೆತು ಕಥೆಗಳನ್ನು ಕೇಳುತ್ತಿದ್ದರು. ಜನಪದದಲ್ಲಿ ಬಳಕೆಯಲ್ಲಿದ್ದ ಕಥೆಗಳನ್ನು ಋಷಿಸಮುದಾಯ ಧಾರ್ಮಿಕವಾಗಿ ಬಳಸಿತು. ಇವರ ಪರಿಣಾಮವೇ ಜಾತಕಕಥೆಗಳು, ಬೃಹತ್ಕಥಾಕೋಶ ಮುಂತಾದವು. ಡಾ. ಎ. ಆರ್ ಕೃಷ್ಣಶಾಸ್ತ್ರಿಗಳು ಹೇಳುವ "ವನವಾಸಿ ಕಥೆಗಳು" ಎನ್ನುವ ಗುಂಪಿಗೆ ಮೇಲಿನವನ್ನು ಸೇರಿಸಬಹುದು. ಸಮರಾಇಚ್ಚ ಕಹಾವನ್ನು ಅನುಸರಿಸಿದ ಕುವಲಯ ಮಾಲಾದಲ್ಲಿ ಧರ್ಮಕಥೆ, ಅರ್ಥಕಥೆ, ಕಾಮಕಥೆ, ವ್ಯಾಮಿಶ್ರಿತ ಎನ್ನುವ ನಾಲ್ಕು ವಿಭಾಗಗಳು ರೂಪುಗೊಂಡುವು. ಇದನ್ನೇ ಕನ್ನಡದ ಚಾಮುಂಡರಾಯ ಪುರಾಣದಲ್ಲಿಯೂ ಕಾಣಬಹುದು. ಆ ವಿವರಗಳು ಹೀಗಿವೆ–

ಉದ್ಯೋತನಸೂರಿ ಕುವಲಯ ಮಾಲಾದಲ್ಲಿ ವಿವೇಚಿಸಿರುವಂತೆ ಕಥೆಗಳಲ್ಲಿ ಐದು ಇಲ್ಲವೆ ಮೂರು ಇಲ್ಲವೆ ನಾಲ್ಕು ಪ್ರಕಾರಗಳುಂಟು.

ಮೊದಲನೆಯದಾಗಿ–

ಸಕಲಕಥಾ, ಖಂಡಕಥಾ, ಉಲ್ಲಾಪಕಥಾ, ಪರಿಹಾಸಕಥಾ, ಸಂಕೀರ್ಣಕಥಾ.

ಎರಡನೆಯದಾಗಿ–

ಧರ್ಮಕಥಾ, ಅರ್ಥಕಥಾ, ಕಾಮಕಥಾ, ಸಂಕೀರ್ಣಕಥಾ.

ಮೂರನೆಯದಾಗಿ–

ಆಕ್ಷೇಪಣೀ, ವಿಕ್ಷೇಪಣೀ, ಸಂವೇಗಜನನೀ, ನಿರ್ವೇಗ ಜನನೀ.

ಆಕ್ಷೇಪಣಿಯು ಮನಸ್ಸಿಗೆ ಅನುಕೂಲವಾಗಿರುತ್ತದೆ.
ವಿಕ್ಷೇಪಣಿಯು ಮನಸ್ಸಿಗೆ ಪ್ರತಿಕೂಲವಾಗಿರುತ್ತದೆ.
ಸಂವೇಗಜನನಿಯು ಜ್ಞಾನ ಉತ್ಪತ್ತಿಗೆ ಕಾರಣವಾಗುತ್ತದೆ.
ನಿರ್ವೇಗಜನನಿಯು ವೈರಾಗ್ಯವನ್ನುಂಟುಮಾಡುತ್ತದೆ.

ಈ ನಾಲ್ಕು ಬಗೆಯ ಕಥೆಯನ್ನು ಕೇಳುವ ವ್ಯಕ್ತಿಗಳು ಕೊನೆಗೆ ಸಂಸಾರಕ್ಕೆ ಬೇಸತ್ತು ನಿರ್ವಿಣ್ಣರಾಗಿ ಅದನ್ನು ತ್ಯಜಿಸುತ್ತಾರೆ. ಧರ್ಮಕಥೆಯ ಮುಂದೆ ಯಾವ ಕಥೆಯೂ ಸರಿಸಮನಾಗಲಾರದು. ಇವುಗಳಲ್ಲಿ ಆಕ್ಷೇಪಣೀ ಕಥೆಯು ಧರ್ಮಪ್ರವೃತ್ತಿಗೆ ಕಾರಣವಾಗುವುದರಿಂದ ಅದು ಎಲ್ಲರಿಗೂ ಪ್ರಿಯವಾದುದು.

ಚಾವುಂಡರಾಯನು ಚಾವುಂಡರಾಯ ಪುರಾಣದಲ್ಲಿ ವರ್ಧಮಾನ ಚರಿತೆಯನ್ನು ಹೇಳುವಾಗ ಧರ್ಮಕಥೆ, ಧರ್ಮಕಥಾಪ್ರಯೋಜನ, ಶ್ರೋತೃ ಮತ್ತು ವಕ್ತೃವನ್ನು ಕುರಿತು ಹೀಗೆ ಹೇಳಿದ್ದಾನೆ–

"ಅರ್ಹನ್ಮತ ಶಾಸನದೊಳ್ ಚರಣ ಕರಣ ದ್ರವ್ಯ ಪ್ರಥಮ ಭೇದದಿಂ ನಾಲ್ಕು ನಿಯೋಗಮಕ್ಕುಂ × × × ಪ್ರಥಮಾನುಯೋಗಮೆಂಬುದು ತೀರ್ಥಕರ ಚಕ್ರವರ್ತಿ ಬಲದೇವಾದಿಗಳ ಭವ ಸಂತತಿಯುಮವರನುಭವಿಸಿದ ಭೋಗಂಗಳುಮಂ ಪರಿಗ್ರಹ

ತ್ಯಾಗಂಗಳುಮಂ ಪೇೞ್ವುದು ಇವರೊಳ್ ಪ್ರಥಮಾನುಯೋಗ ಮಹಾರ್ಣವದೊಳ್ ಧರ್ಮಕಥೋಪದೇಶನಂಗೆಯ್ವುದು ಆ ಧರ್ಮಕಥೆಗೆ ಭಾವ (ಸ) ಮುಯ್ದುಕ್ಕುಮಾವಾವು ವೆಂದಡೆ–

ಧರ್ಮಕಥೆಯುಂ, ಧರ್ಮಕಥಾ ಪ್ರಯೋಜನಮುಂ, ಧರ್ಮ ಕಥಾಶ್ರೋತೃವುಂ, ಧರ್ಮಕಥಾವಸ್ತುವುಂ, ಧರ್ಮಕಥಾ ನಿರ್ವಾಹ ಮೆಂದಯ್ದಱೊಳ್ ಧರ್ಮಕಥೆಯೆಂಬುದಾಚಾರ ಪ್ರಜ್ಞಪ್ತಿ ದೃಷ್ಟಿವಾದ (ದಶ) ಕುಶಲ ಮತಿಯುಂ ಗಣಿತ ಶಬ್ದಶಾಸ್ತ್ರ ನಿಮಿತ್ತ ಪುರಾಣ ಹೇತು ತರ್ಕ ವಿಶಾರದನುಂ ಲೋಕ ವೇದಿ ಪಾಷಂಡಿಸಮಯ ನಿಪುಣನುಮಾಕ್ಷೇಪ ಪರಿಹಾರ ಸಮರ್ಥನುಂ ಸ್ಥಿರಾಸನನು ಮಪ್ರತಿಹತ ಶರೀರ ಪಂಚೇಂದ್ರಿಯನುಂ ಪ್ರಿಯಹಿತ ಮಧುರಾಭಿಧಾನಿ(ಯಿಂ)ಯುಂ ಪರಪರಿವಾದಾಲಸ್ಯ, ಭ್ರೂಭಂಗ ಕಟಾಕ್ಷ ನಿಕ್ಷೇಪಣಾದಿ ವಿಕಾರರಹಿತನುಮಪ್ಪಂ.

ಧರ್ಮಕಥಾ ಪ್ರಯೋಜನಮೆಂಬುದು ಪರಮದರ್ಶನವ್ಯಾಕುಳಿತರುಂ ಪರಿಚ್ಛಿನ್ನಾ ಪವರ್ಗಮಾರ್ಗರುಮಪ್ಪ ಭವ್ಯಜೀವಂಗಳ್ಗೆ ದರ್ಶನಮಂ ದೃಢಂ ಮಾಡ್ಪುದು ದೃಢದರ್ಶ ನಾದಪರ್ಗೆ (ನಾರಾಧನ) ಜ್ಞಾನ ಚಾರಿತ್ರ ಪ್ರಕಾಶನಂಗೆಯ್ವುದಕ್ಕುಮಲ್ಲದಂದು ಹಿತ ಪ್ರಾಪ್ತಿಯುಮಹಿತ ಪರಿಹಾರೋಪಾಯದರ್ಶನಮುಂ ಗೆಯ್ವುದಲ್ಲಿ ಹಿತಮೆಂಬುದುಂ ನಿಶ್ರೇಯಸಂ ಅಹಿತಮೆಂಬುದು ಜಾತಿ ಜರಾಮರಣ ದುಃಖ ಸಂಪಾತಮಲ್ಲಿ ಹಿತಮ ನೆಯ್ದು ಉಪಾಯಂಗಳುಮಂ ತೋಱಿ ಮಿಥ್ಯಾದರ್ಶನಾ ವಿರತಿ ಪ್ರಮಾದಾದಿಗಳಂ ನಿರಾ ಕರಿಸಿ ತ(ನ್ನವಿದ್ಯತ್ವಾ) ನ್ನಿಪ್ಪತ್ಯುಪಾಯದೊಳ್ ಸಮ್ಯಗ್ದರ್ಶನ ಜ್ಞಾನ ಚರಿತ್ರಂಗಳ ನಂತುಪಾಲಿಸುವುದು. **ಧರ್ಮಕಥಾಶ್ರೋತೃಗಳೆಂಬರ್** ರಕ್ತ ದುಷ್ಟಮೂಢ ಮಧ್ಯಸ್ಥ ಭೇಧದಿಂ ಚತುರ್ವಿಧಮಪ್ಪಲ್ಲಿ ರಕ್ತನೆಂಬೊಂ ದೋಷಯುಕ್ತಮಪ್ಪ ವಚನಮುಂ ನುಡಿಪೊಡಮದಂ ಗುಣದೊಳ್ (ದೋಷ) ಪ್ರತಿಷ್ಠಿ(ಸ್ಥಾಪಿ)ಸುವೊಂ; ದುಷ್ಟ ನೆಂಬೊಂ–ಸದ್ಧರ್ಮ (ಶುದ್ಧ) ನಿರಪೇಕ್ಷನುಂ, ದರ್ಶನಾಂತರಾ (ವಿಪಿಷ್ಟ ಬೋಧಿಯು ಮಾಗಿ)ಭಿತದಿಷ್ಟಬುದ್ಧಿಯುಮಾಗಿ ಗುಣಸಹಸ್ರಮುಂ ಪತ್ತುವಿಟ್ಟು ಪ್ರಮಾದಮುಂ ಪಾಮತ್ತಿರ್ದಲ್ಪದೋಷ (ದೊಳಂ)ದಿಂ ಕಥಾಭಂಗ ಮಾಟಿಪ್ಪೊಂ ಮೂಢನೆಂಬೊಂ (ತಿ) ಗುಣದೋಷಗ್ರಹಣದೊಳ್ ದೂರೀಕೃತಮತಿಯಾಗಿ ವಿವಿಧ ವಿಶದ ಚಾಟುಕಾರಂ ವಚನ ವಿನ್ಯಾಸದಿಂ ಸೊಗ(ಸುಗ)ಸುತ್ತೊಳ್ಳಿತೊಳ್ಳಿತೆಂದು ನುಡಿವೊಂ ಮಧ್ಯಸ್ಥ ನೆಂಬೊಂ ಗುಣದೋಷ ವಿಚಾರ ಸಮರ್ಥನಾ ಗುಣಭಾವ (ಭಾಗ) ದೊಳ್ ಗುಣಮುಂ ದೋಷಭಾವದೊಳ್ ದೋಷಮುಂ ನಿಯೋಜಿಸುವೊಂ; **ಧರ್ಮಕಥಾವಸ್ತು**ವೆಂಬು ದರ್ಥ ಕಥೆಯೆಂದುಂ ಕಾಮಕಥೆಯೆಂದುಂ ಧರ್ಮಕಥೆಯೆಂದುಂ ವ್ಯಾಮಿಶ್ರಕಥೆಯೆಂದುಂ ಚತುರ್ವಿಧಮಕ್ಕುಮವಱೊಳ್–

ಧರ್ಮಕಥೆಯೆಂಬುದು ದೇಶಕಾಲಾಪೇಕ್ಷಣಮುಂ ಸಾಮ(ಮಾ)ದ್ಯುಪಾಯ ಸಮುದ್ಭೂತಮುಂ ಅಲಬ್ಧಲಾಭಾಧಿರಾಜ ವೃತ್ತ ಚತುಷ್ಟಯ ಲಕ್ಷಣಮುಮಪ್ಪುದು ಕಾಮಕಥೆಯೆಂಬುದು ಸ್ತ್ರೀ ಪುರುಷ ಸ್ನಿಗ್ಧಸಮಸ ದೂತ ಸಂಪ್ರೇಷಣ ಲಲಿತ

ಹಸಿತ ಮನೋಹರ ಸಂಭಾಷಣ ಪರಸ್ಪರ ಭಾವ ಪರೀಕ್ಷಣ ವಿಜೃಂಭಣಾಲಿಂಗನ ವಿಮರ್ದ-
ನಾದಿಗೋಚರಮಪ್ಪುದು ಧರ್ಮಕಥೆಯೆಂಬುದು ಆಕ್ಷೇಪಣಿಯುಂ ವಿಕ್ಷೇಪಣಿಯುಂ
ಸಂವೇದನಿಯುಂ ನಿರ್ವೇದನಿಯುಮೆಂದು ಚತುರ್ವಿಧಮಕ್ಕುಮವಱೊಳ್ ಅವ್ವ
ದೊಂದಱೊಳ್ ಜೀವಾದಿಪದಾರ್ಥಂಗಳನವಱ ಭಾ(ಗಂ)ಗಳಂ ಯಥಾಕ್ರಮ ಪ್ರಮಾ-
ಣಾಗೆಪ್ಪುದು ಆಕ್ಷೇಪಣಿಯೆಂಬುದು ನಿಜಮತ ನಿರೂಪಣದೊಳ್ ಪರಮತ ದೂಷ-
ಣಂಗೆಯ್ವುದು ಪೂರ್ವಪರಮತ ಕಥನದೊಳ್ ನಿಜಮತಪ್ರಕಾಶನಂಗೆಯ್ವುದು ವಿಕ್ಷೇ-
ಪಣಿಯೆಂಬುದು ಜಿನಧರ್ಮಫಲ ವಿಭೂತಿಯಂ ಪೇೞ್ವುದು ಇಂತಿವಱೊಳ್ ವಿಕ್ಷೇಪಣಿ
ಯೆಂಬ ಕಥೆಯಂ ಜಿನಶಾಸನ ಷಡ್ಭೇದಮಱಿಯದಾತಂಗೆ ಪೇೞಲಾಗದೆಂತೆಂದೊಡೆ–
ಗೃಹೀತ ತತ್ತ್ವನಪ್ಪವಱಿಂ ಪರಸಮಯ ವ್ಯಾಕುಳೀಕೃತಚಿತ್ತನಕ್ಕುಮದಱಿಂ ಪರಮತ
ದೂಷಣ ಪರಾಙ್ಮುಖನಾಗದೆ ತತ್ತ್ವಮಂ ಕೈಕೊಳ್ವನಲ್ಲನದಱಿಂ ತತ್ತ್ವಮನಱಿಯ-
ದನ್ನೆಗಂ ಮಿಥ್ಯಾದರ್ಶನಮಂ ಪತ್ತುವಿಡನದಱಿನಾಕ್ಷೇಪಣಿಯುಂ ಸಂವೇದನಿಯುಂ
ನಿರ್ವೇದನಿಯುಮೆಂಬ ಮೂಱುಂ ಕಥೆಯುಮಂ ಮುನ್ನಮಱಿಪಿ ಬೞಿಯಂ ಗೃಹೀತ
ಸಮ್ಯಗ್ದರ್ಶನನಪ್ಪಂಗೆ ವಿಕ್ಷೇಪಣಿಯುಮನಱಿಪುವುದುಂ ಧರ್ಮಕಥಾ ನಿರ್ವಾಣವೆಂಬುದು
ಮಂಗಳಾದಿ ನಿರೂಪಣ ಪೂರ್ವಕಂ ಪುರಾಣಂಗಳಂ ಪೇೞ್ವುದುಂ ಅವಱೊಳ್ ಶ್ರೀ ವರ್ಧ-
ಮಾನ ಭಟ್ಟಾರಕರ ಚರಿತಮನಭಿವರ್ಣಿಸುವೆನದೆಂತೆಂದೊಡೆ[1]

ಪದಾರ್ಥಸಾರದಲ್ಲಿ ಪಂಚದಶಪ್ರಮಾದಗಳನ್ನು ಹೇಳುವಾಗ "ಸ್ತ್ರೀ ಭಕ್ತ ರಾಷ್ಟ್ರಾವನಿಪಾಲ ಕಥೆ"ಯೆಂದು ನಾಲ್ಕು ವಿಕಥೆಗಳನ್ನು ಹೇಳುತ್ತಾನೆ. ವಿಕಥೆಗಳು ಇಪ್ಪತ್ತೈದು ರೀತಿ ಎನ್ನುವ ವಿವರಗಳು ಅದರಲ್ಲಿ ಹೀಗಿವೆ–"ಮತ್ತಂ ವಿಶೇಷದಿಂ ಪ್ರಮಾದಂಗಳಂತೆ ಸ್ತ್ರೀಕಥೆ, ಅರ್ಥಕಥೆ, ಭಕ್ತಕಥೆ, ಚೋರಕಥೆ, ರಾಜಕಥೆ, ವೈರಕಥೆ, ಪರಪಾಷಂಡಿ ಕಥೆ, ದೇಶಕಥೆ, ಭಾಷಾಕಥೆ, ಗುಣಹೀನದ ಕಥೆ, ವಿಕಥೆ, ನಿಷ್ಠುರಕಥೆ, ಸ್ನೇಹಶೂನ್ಯಕಥೆ, ಕಂದರ್ಪಕಥೆ, ದೇಶಕಾಲಾನುಚಿತಕಥೆ, ಭಂಡಕಥೆ, ಮೂರ್ಖಕಥೆ, ಆತ್ಮಪ್ರಶಂಸಾಕಥೆ, ಪರಪರಿವಾದಕಥೆ, ಪರಜುಗುಪ್ಸಾಕಥೆ, ಪರಪೀಡಾಕಥೆ, ಕಲಹಕಥೆ, ಪರಿಗ್ರಹಕಥೆ, ಕೃಷ್ಯಾದಿವ್ಯಾಪಾರಕಥೆ, ಸಂಗೀತವಾದಕಥೆ ಎಂದು ಇಪ್ಪತ್ತೈದು ವಿಕಥೆಗಳು"

ಈ ಬಗೆಯ ಕಥಾವಿಚಾರಗಳಿಂದ, ವಿಶ್ಲೇಷಣೆಗಳಿಂದ ಕೂಡಿದ ಭಾರತೀಯ ಕಥಾ ಸಾಹಿತ್ಯ ಹಲವು ಹನ್ನೊಂದು ಮುಖಗಳಲ್ಲಿ ಬೆಳವಣಿಗೆ ಹೊಂದಿರುವುದನ್ನು ಕಾಣಬಹುದು.

ನನ್ನಯ್ಯ ಕಾವ್ಯವೂ ಕೂಡ ಇಂತಹ ನೂರಾರು ಕಥೆಗಳನ್ನು ಒಳಗೊಂಡಿದೆ. ಮೊದಲ ನೋಟಕ್ಕೇ ನನ್ನಯ್ಯನ ಕಥೆಯು ಅಂಗುಲಿಮಾಲ ಮತ್ತು ಬುದ್ಧರ ಕಥೆಯನ್ನು ನೆನಪಿಗೆ ತರುತ್ತದೆ. ಅದರ ಜೊತೆಜೊತೆಗೆ ಒಂದು ಸಾಂಕೇತಿಕ ಅರ್ಥವನ್ನು ಇಟ್ಟುಕೊಂಡಿದೆ.

ನನ್ನಯ್ಯನ ಕಥಾ ಬೆಳವಣಿಗೆಯಲ್ಲಿ ಎರಡು ಘಟ್ಟಗಳನ್ನು ಗುರುತಿಸಬಹುದು.

---

1 ತ್ರಿಷಷ್ಟಿಶಲಾಕಾಪುರುಷಪುರಾಣಂ ಪುಟ 379-81 ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 1975.

೧. ಸಂಸಾರ ನಿರಸನ

೨. ವೈರಾಗ್ಯ ಸ್ಥಿರೀಕರಣ ಮತ್ತು ಸಂಪ್ರದಾಯ.

ಸಂಸಾರನಿರಸನಕ್ಕೆ ಹೆಂಗಸರು ಹಾದರದಲ್ಲಿ ತೊಡಗಿದ ಅನೇಕ ಕಥೆಗಳನ್ನು ಇಲ್ಲಿ ಹೇಳಿದೆ. ದ್ವೇಷಾಸೂಯೆ, ವೈರಾಗ್ಯಗಳು ಹಾದರದ ಪರಿಣಾಮ. ಮಾತಂಗತಮನ ಹೆಂಡತಿ ಇನ್ನೊಬ್ಬನೊಡನೆ ಓಡಿಹೋದಳು ಎಂದಾಗ ಆತನಲ್ಲಿ ಭುಗಿಲೆದ್ದ ಕೋಪತಾಪಗಳು, ಅಲ್ಲಿನ ಸುಜ್ಞಾನಿಗಳ ಬೋಧೆಯಿಂದ ಆತನ ಕೋಪ ಇಳಿದು ವೈರಾಗ್ಯದಲ್ಲಿ ನೆಲೆಗೊಂಡುದು ಇದಕ್ಕೆ ನಿದರ್ಶನ. ಎರಡನೆಯ ವೈರಾಗ್ಯ ಸ್ಥಿರೀಕರಣ ಮತ್ತು ಸಂಪ್ರದಾಯ ಪಾಲನೆಗೆ ಪೋಷಕವಾಗಿ ವಿಭೂತಿ, ರುದ್ರಾಕ್ಷಿ, ಅನ್ನದಾನದಕಥೆ, ದೀಪವ ಬೆಳಗಿದಕಥೆ, ಗೃಧ್ರ ರಜವನುಡುಗಿದ ಕಥೆ ಮುಂತಾದುವು ಬರುತ್ತವೆ. ಈ ಬಗೆಯ ಕಥೆಗಳು ಇತರ ಧಾರ್ಮಿಕ ಕಥೆಗಳಲ್ಲಿಯೂ ಕಂಡುಬರುತ್ತವೆ. ಮನುಷ್ಯನ ಮಾನಸಿಕ ನಿಲುವನ್ನು ದೃಢಗೊಳಿಸುವತ್ತ ಈ ಬಗೆಯ ಕಥೆಗಳು ಸಾಗಿವೆ. ಕಥಾಸರಿತ್ಸಾಗರದಂಥ ಮನರಂಜನೆಯ ಸಂಪುಟದಲ್ಲಿ ಕೂಡ ದಾನ ಪಾರಮಿತಾ, ಶೀಲ ಪಾರಮಿತಾ, ಕ್ಷಮಾಪಾರಮಿತಾ, ಧೈರ್ಯಪಾರಮಿತಾ, ಧ್ಯಾನಪಾರಮಿತಾ, ಪ್ರಜ್ಞಾಪಾರಮಿತಾ ಎನ್ನುವ ಕಥೆಗಳು ಕಂಡುಬರುತ್ತವೆ. ಈ ಕಾರಣದಿಂದ ಸಮಾಜದ ಮೇಲೆ ಸಂಪ್ರದಾಯದ ಹಿಡಿತ ಎಷ್ಟರ ಮಟ್ಟಿಗಿದೆ ಎನ್ನುವುದು ತಿಳಿದುಬರುತ್ತದೆ.

ತೌಲನಿಕ ವಿಮರ್ಶೆ

ಕನ್ನಡದಲ್ಲಿ ನನ್ನಯ್ಯನನ್ನು ಕುರಿತು ೧೬–೧೭ನೆಯ ಶತಮಾನದಲ್ಲಿ ನಾಲ್ಕು ಕೃತಿಗಳು ರಚಿತವಾಗಿರುವುದನ್ನು ಈಗಾಗಲೆ ಗಮನಿಸಿದೆ. ಅವುಗಳಲ್ಲಿ ಪರ್ವತದೇವ, ಮಾದಣ್ಣ, ಉದ್ದಂಡರು ಅನುಕ್ರಮವಾಗಿ ಕೃತಿಗಳನ್ನು ರಚಿಸಿದರೆಂದು ಭಾವಿಸಲಾಗಿದೆ. ಈ ಮೂರು ಕೃತಿಗಳ ಪರಿಶೀಲನೆಯಿಂದ ಇವು ಅಲ್ಲಲ್ಲಿ ಭಿನ್ನಹಾದಿಯಲ್ಲಿ ಸಾಗಿದ್ದರೂ ಬಹುಮಟ್ಟಿಗೆ ಸಮಾನಾಂತರವಾಗಿ ಸಾಗಿರುವುದನ್ನು ಕಾಣಬಹುದು. ಮಾದಣ್ಣ ತನ್ನ ಕೃತಿಯ ಬಗ್ಗೆ—

> ಆಗಮ ಪುರಾಣ ಸಾಕ್ಷಿಗ
> ಳಾಗಿ ಸುವಾಕ್ಯಗಳ ಕೇಳಿ ಸೇರಿಸಿ ಮನಕಿಂ
> ಬಾಗಿ ಬೋಧಿಸಿದ ಕೃತಿಯಿದ
> ರಾಗದಿ ಕೇಳೂದು ಪ್ರಾಪ್ತರೂಪ ಸಮೂಹಂ ‖ ೧–೪

ಎಂದಿದ್ದಾನೆ. "ಇಷ್ಟಫಲಗಳಂ ಮನೋರಾಗದೊಳೀಶನಿಂ ಪಡೆದ ಭಕ್ತರ ಕೀರ್ತಿಯ ಪೇಳ್ವೆನರ್ತಿಯಿಂ" ಎಂಬುದು ಆತನ ಕಾವ್ಯೋದ್ದೇಶ. ಆ ದಿಸೆಯಲ್ಲಿ ತೊಡಗಿದಾಗ—

> ಅವರಿವರು ಪೇಳ್ದ ಕೃತಿಯೊಂ
> ದವನಿಯ ಜನ ನುಡಿಯಬೇಡ ಪೂರ್ವದ ದಿನದೊಳ್

ಶಿವನ ನೊಲಿಸಿರ್ದ ಶರಣರ
ನಿವಹಂ ಪೊಸತಲ್ಲ ನೋಡಿ ತಿಳಿವುದು ಕೃತಿಯಂ || ೧–೨೫

ಎನ್ನುವುದು ಆತನ ಕೋರಿಕೆ.

ಒಂದೆರಡು ಉದಾಹರಣೆಗಳ ಮೂಲಕ ಕನ್ನಡದಲ್ಲಿ ಬಂದಿರುವ ನನ್ನಯ್ಯಚಾರಿತ್ರಗಳು ಒಂದಕ್ಕೊಂದು ಹೇಗೆ ಪೂರಕವಾಗಿವೆಯೆಂಬುದನ್ನು ಇಲ್ಲಿ ಗುರುತಿಸಲಾಗಿದೆ.

೧. ಪರ್ವತದೇವನ ಕಾವ್ಯಧೋರಣೆ–

ಕೃತಿ ಪೊಸತಾದಡಿನಕೆ ಕುಂದೆ ಭಾವ ಪ | ದ್ಧತಿ ರಚನೋಕ್ತಿ ಪದ್ಧತಿಯುಂ
ಅತಿಕೋಮಲವಾಕ್ಯ ಚಿತ್ರಾರ್ಥ ಕಥೆಗಳು | ನ್ನತಿ ತಪ್ಪದಿರ್ದಡೆ ಸಾಲದೆ

ರಸಭಾವ ಮಿಗಿಲರ್ಥಯಸಗಿದ ಪದಬಂಧ | ಪೊಸಬಗೆ ಚೆಲುವ ನೀತಿಯಲಿ
ಪೊಸಮಾತು ಲಕ್ಷಣಾಲಂಕಾರ ತಪ್ಪಿರೆ | ರಸಿಕರು ತಿದ್ದುವದೊಲಿದು
|| ಪರ್ವತದೇವ ೧–೨೮, ೨೯

ಮಾದಣ್ಣನೂ ಇದನ್ನೇ ಹೇಳುತ್ತಾನೆ. ಪರ್ವತದೇವ ಮತ್ತು ಮಾದಣ್ಣರ ಕಾವ್ಯಭಾಗಗಳಲ್ಲಿ ಬರುವ ಒಂದೇ ರೀತಿಯ ಪದಪುಂಜ ಒಂದಕ್ಕೊಂದು ಎಷ್ಟರ ಮಟ್ಟಿಗೆ ಋಣಿ ಎನ್ನುವುದಕ್ಕೆ ಈ ಕೆಳಗಿನ ಪದ್ಯಗಳು ಸಾಕ್ಷಿ. ಚೌಪದಿಯಲ್ಲಿ ಪರ್ವತದೇವ ಬರೆದುದನ್ನು ಮಾದಣ್ಣ ವೃತ್ತಗಳಲ್ಲಿ ಬರೆದಿದ್ದಾನೆ.

ಕೃತಿಪೊಸತಾದಡೇನದಕೆ ಕುಂದೆ ಮಹಾರಸಮರ್ಥ ಭಾವ ಪ
ದ್ಧತಿ ರಚನೋಕ್ತಿ ಪ್ರಾಸಪದ ಕೋಮಲವಾಕ್ಯ ಸುಮಾರ್ಗ ಭಕ್ತಿಯು
ನ್ನತಿಯಿಂತಪ್ಪ ತಪ್ಪದೊಪ್ಪಿರಲು ಸಾಲದೆಯಂತದ ನೋಡಿ ಸತ್ಕವಿ
ಪ್ರತತಿಗಳ್ಕಿದೆ ಮೆಚ್ಚುವುದು ಸಾಯಸಮಂ ನೆಱೆ ಬಲ್ಲ ಸಜ್ಜನಂಗಳ್

ರಸಭಾವಂ ಮಿಗುವರ್ಥ ಚಿತ್ರಪದ ಸತ್ಪ್ರಾಸ ಕ್ರಮಂ ಲಕ್ಷಣಂ
ಪೊಸತಪ್ಪ ಬಗೆ ಜಾಣ್ ಸುವಾಕ್ಯ ಮೊದಲಾಗೇನುಳ್ಳ ವಾಗ್ಜಾಲದಿಂ
[illegible]ಧಾಚಕ್ರದಿ ಪೇಳ್ದರಾದಿ ಕವಿಗಳ್ ಕಬ್ಬಂಗಳಂತಿನ್ನು ನಿ
ಟ್ಟಿಸಲೇನುಂ[illegible]ಪೂರ್ವ ಕಾವ್ಯಕೃತಿಯಂ ಪೇಳ್ಲಿಕ್ಕೆಳಾ ಚಕ್ರದೋಳ್
|| ಮಾದಣ್ಣ ೧–೨೬, ೨೭

೨. ಸರ್ವಜ್ಞಪುರದ ಕೆರೆಯಲ್ಲಿ ಪ್ರಯಾಣದ ಶ್ರಮವನ್ನು ಕಳೆಯುತ್ತಿದ್ದ ಯುವಕನು ಕೃಷ್ಣ ಭಟ್ಟರ ಮಗಳು ದೇವಕಿಯನ್ನು ಕಂಡು ಆಡಿದ ಮಾತು–

ಹಲ್ಲು[illegible] ಮೇಲೆ ಬಿದ್ದ ಮುದುಕಿಯು ನೀ | ವಿಲ್ಲ [illegible]
[illegible] ಬಯ್ಯುತ್ತ [illegible] ಮೊರೆಯುದೆ ನಾನು | [illegible]
|| ಪರ್ವತದೇವ ೨–೬೦

> ಬಿದ್ದವೊಲೆಯನಳೆ ಹೊಱಹಾ
> ಯಿರ್ದುದಿರ್ದ ಹಲ್ಲವಳೆ ಕುರುಡಿ ಗಂಡಹತವಾ
> ಗಿರ್ದ ಮುದಿಮುಂಡೆ ನಿನಗಂ
> ಬಿಟ್ಟಿನರಾಯುಟು ವಿಶ್ವಮೂರ್ತಿಯ ಪುರದೊಳ್ || ಮಾದಣ್ಣ ೨-೧೨೪

ಇಷ್ಟು ರೂಪನು ಕಂಡು ನಿರ್ಧರದಿ ಕೇಳದೆ। ಬಿದ್ದ ಸ್ತನದ ಹೊರಹಲ್ಲ ಕುರುಡಿ
ಹೊಂದಿದ ಗಂಡನ ನೀಗಿದ ಮುದಿ ಕೈನೆ। ಛಿದ್ರಿಸಿತೇಕೆ ಪ್ಮೈರೇಖೆ
|| ಉದ್ದಂಡ ೧-೧೬೩

೩. (ಅ) ಪ್ರೀತಿಸಿದ ಗಂಡನನ್ನು ಬಿಟ್ಟು ಅಮೃತಮತಿ ಕುಷ್ಠಗೋವನನ್ನು ಕೂಡಿದಳು. ಆಗ ಬರುವ ಸ್ತ್ರೀಗರ್ಹಣೆ—

ತಿಂಬಹುಲಿಯು ಸೀಳ ಮದ ಕರಿಯನು ತನ್ನ। ಬೆಂಬಳಿವಿಡಿದನ್ನು ತ್ಯುನನು
ನಂಬಬಹುದು ಸತಿಯಳು ತನ್ನವಳೆಂದು। ನಂಬಿದವಗೆ ಕೇಡಕ್ಕು
|| ಪರ್ವತದೇವ ೩-೯೧

> ತಿಂಬ ಹುಲಿ ಸೀಳ್ವಗಜವಂ
> ಬೆಂಬಳಿವಿಡಿದಿರ್ಪ ಮೃತ್ಯುವಹಿಸನುದಯಮಂ
> ನಂಬುವುದು ಸತಿಯರಂ ನೆಱೆ
> ನಂಬಿವವರ್ ಕೆಡುವರೆಂಬುದಿದು ಸಿದ್ಧಾಂತಂ || ಮಾದಣ್ಣ ೨-೨೦೯

ಆ) ಸರಸಿಯ ಸರೋಜ ಷಂಡವು
> ನಿರದಾಹಾರಮನೆ ಕೊಂಬ ಸತ್ಕಳ ಹಂಸಂ
> ಪರಿತಪ್ಪ ಬಚ್ಚಲುದಕದೊ
> ಳಿರುತಿರ್ಪ ಪುಳುಗೆಳಸಿದಂತೆಜನನೋಡನಿರ್ದಳ್ ||ಮಾದಣ್ಣ ೨-೨೦೮

ಕ್ಷೀರಾಬ್ಧಿಯನುಂಬಾಹಂಸೆ ತಿಪ್ಪೆಯ ಕೊಳೆ। ನೀರಸೇವಿಸಿ ನೊಂದಂತೆ
ಮಾರನಟ್ಟುಳಿಯಿಂದಾ ಅರಮನೆಗೆ ಹಗೆಯಾಯಿತು। ವಾದುವಸಾಲೆ
ಪ್ರಾಪ್ತಿಯಾಯಿತು || ಉದ್ದಂಡ ೨-೮

೪. (ಅ) ಧನಸೇನಸೆಟ್ಟಿ ದಾರಿಯಲ್ಲಿ ಗತಪ್ರಾಣನಾಗಿ ಬಿದ್ದಿದ್ದ ಮೋಟನನ್ನು ಕರೆತಂದು ಮನೆಬಾಗಿಲಿನಲ್ಲಿ ಕಾವಲಿಗಿಟ್ಟನು. ಆಗ—

ಸೆಟ್ಟಿಯ ಬಾಗಿಲೊಳಿರಳು ಹಗಲು ಮೋಟ। ಕಟ್ಟಿದ ಹುಲಿಯಂದದಲಿ
ಕಟ್ಟುಗಂಡಿರುತಿರೆ ಜಾರ ಚೋರರು ಬಂದು। ದಿಟ್ಟಿಸಿ ನೋಡಲಂಜುವರು
|| ಪರ್ವತದೇವ ೩-೭೩

> ಸೆಟ್ಟಿಯ ಪೊಱಬಾಗಿಲೊಳಂ
> ಕಟ್ಟಿದ ಪುಲಿಯಂತೆ ಹಗಲುಮಿರುಳೆನ್ನದೆ ತೋ

ಡಿಟ್ಟಿ ಸರ್ವೇತದೊಳಿರುತಿರೆ
ಕಟ್ಟಿದಿರೊಳ್ ಸುಳಿಪರಿಲ್ಲ ಜಾರರ್ ಚೋರರ್ ॥ ಮೂದಣ್ಣ ೩–೮

ಶೆಟ್ಟಿಯ ಬಾಗಿಲೊಳ್ಕಟ್ಟಿದ ಹುಲಿಯಂತೆ। ಮುಟ್ಟಲಮ್ಮರು ಜಾರ ಜನರು
ಪಟ್ಟದ ಭಾಸಕಿದಾಸಿಯರು ಮುಂತಾಗಿ। ಕಟ್ಟಣೆ ಮೀರಲಂಜುವರು
॥ ಉದ್ದಂಡ ೨–೩೯

(ಆ) ಧನಸೇನಸೆಟ್ಟಿ ವ್ಯಾಪಾರಕ್ಕೆ ಹೋದ. ಆತನ ಹೆಂಡತಿ ಬಾಗಿಲಲ್ಲಿದ್ದ ಮೋಟನನ್ನು ಕಂಡು ಕಾಮಿಸಿದಳು. ಆತನನ್ನು ಕಟ್ಟೊಬಿಟ್ಟಿಯಿಂದ ಕೂಡಿದಳು. ಆ ಸಂದರ್ಭ—

ಕೂಡದಂಒಡಿ ನೂಕುವರೆ ಎಡಗೈಯೊಂದೆ। ಓಡುವರ್ಬಲಗಾಲೊಂದು
ಜೋಡನೆಂದರೆ ಕೇಳದೆ ತನ್ನ ಬಯಕೆಯ। ನೀಡೇರಿಸಿಕೊಂಡಳವಳು
॥ ಪರ್ವತ ೩–೮೭

ಓಡುವಡೆ ಪಾದವಿಲ್ಲೊಡ
ಗೂಡದೆ ನೂಂಕುವಡೆ ಹಸ್ತವೊಂದದಱಿಂದಂ
ಜೋಡೆ ಬಲ್ಪಿಂದ ಪಿಡಿದೊಡ
ಗೂಡಿದಳಂದಾರ್ತವಡಗುವಿನಮುಂದವನೊಳ್ ॥ ಮೂದಣ್ಣ ೩–೨೧

ಓಡುವರೆ ಕಾಲಿಲ್ಲ ನೂಕುವರೆ ಕೈಯಿಲ್ಲ। ಆಡಿ ಹೇಳುವರೊಬ್ಬರಿಲ್ಲ
ಗಾಢಿಕಾತಿಯು ಕಡುತವಕದಿ ಬಲುಹಿಂದ। ಕೂಡಿದಳವನನಾಕ್ಷಣದಿ
॥ ಉದ್ದಂಡ ೨-೪೦

೫. ರತ್ನದತ್ತನ ಹೆಂಡತಿ ಪುಷ್ಕಳೆ ತನ್ನ ಗಂಡನಿಗೆ ತಿಳಿಯದಂತೆ ಶೌಂಡಕನೊಡನೆ ಕೂಡಿದಳು. ಅಲ್ಲದೆ ತನ್ನ ಮನೆಯ ಒಡವೆ ವಸ್ತುಗಳನ್ನು ತೆಗೆದುಕೊಂಡು ಆತನೊಡನೆ ಓಡಿ ಹೋದಳು. ದಾರಿಯಲ್ಲಿ ನದಿ ಅಡ್ಡ ಬಂದಿತು. ಆಗ ಶೌಂಡಕ ಅವಳ ಸೀರೆಯಲ್ಲಿ ಒಡವೆಗಳನ್ನು ಕಟ್ಟಿಕೊಂಡು ಬೆತ್ತಲೆಯಾಗಿದ್ದ ಅವಳನ್ನು ನದಿಯ ಮಧ್ಯದಲ್ಲಿ ಕೂಡಿಸಿ ಓಡಿಹೋದ. ಆ ಪ್ರಸಂಗ—

ಉಟ್ಟ ಸೀರೆಯ ಕೈಯಲ್ಲಿದ್ದೊಡವೆಯನೆಲ್ಲ। ಮೊಟ್ಟೆಯ ಕಟ್ಟಿಕೊಂಡವನು
ನೆಟ್ಟನೆ ನಿರ್ಗಂತೆ (ನಿರ್ಗಂಥೆ) ಕೊಟ್ಟು ಕುಳ್ಳಿರಿಸಿ ತಾ। ಬಿಟ್ಟು ತಡಿಗೆ ಪೋಗಿ
ನಿಂದಾ ॥ ಪರ್ವತ ೪–೭೩

ಪುಷ್ಕಳೆಯುಟ್ಟಿರ್ದ ಮುತ್ತಿನಸೆಜಗಿನ ಪಟ್ಟೆಯದೇಜಿಕದ [illegible] ಸೀರೆಯೊಳ್ ಪೊಱೆಯುಮಂ ಕಟ್ಟಿ ನಿರ್ಗಂಥೆಯಾಗಿರ್ದವಳಂ ಸೀರೊಳ್ [illegible] ತಾನಾ ನದಿಯುಂ ಕ್ಷೆಪಿಸಿಸಿನಂ ಬಂದು ತಡಿಗೆಯ್ದು ನಿಂದ ॥ ಮೂದಣ್ಣ ೩–೧೧೩ ವ

ಗಂಡನ ಬಿಟ್ಟು ಕವುಂಡನೊಡನೆ ಬರೆ। ಕೊಂಡು ಬಂದರ್ಥ ವಸ್ತ್ರವನು
ಮಾಡಿಸಿ ಕೊಂಡೊಯ್ದು ನಿರಕಂತೆ (ನಿರ್ಗಂಥೆ) ಯ ಮಾಡೆ।
ಪಂಡಿತರೊಡನೆ ಪೇಳಿದಳು ॥ ಉದ್ದಂಡ ೨–೧೪೩

ಹೀಗೆ ಕಾವ್ಯಭಾಗಗಳನ್ನು ಅಲ್ಲಲ್ಲಿ ಪರಿಶೀಲಿಸಿ ನೋಡಿದಾಗ ಮೂರು ಕೃತಿಗೂ ಇರುವ ನಿಕಟ ಸಂಬಂಧ ಎದ್ದು ಕಾಣುತ್ತದೆ. ಮಾದಣ್ಣನ ಕೃತಿಯೊಡನೆ ಸಮಾನವಾಗಿರುವ ಕಥೆಗಳನ್ನು ಬಿಟ್ಟು ಪರ್ವತದೇವ ಮತ್ತು ಉದ್ದಂಡರ ಕೃತಿಗಳಲ್ಲಿ ಬರುವ ಕಥೆಗಳನ್ನು ಹೀಗೆ ಪಟ್ಟಿ ಮಾಡಬಹುದು. ಪರ್ವತ ದೇವನಲ್ಲಿ ಮಾತ್ರ ಇರುವ ಕಥೆಗಳು—

೧) ಕುಂಬಿಯಣ್ಣನ ಕಥೆ ೨) ಶೂದ್ರಕನ ಕಥೆ ೩) ಭರ್ತೃಹರಿಯ ಕಥೆ ೪) ಕಾರ್ತಾರ್ಜುನನ ಕಥೆ ೫) ಪರಶುರಾಮನ ಕಥೆ ೬) ನಳನ ಕಥೆ ೭) ಸಗರ ಕಾರ್ತಿಕರ ಕಥೆ ೮) ಮಹೇಂಧಾರನ ಕಥೆ ೯) ಪುರಪಕ್ಷನ ಕಥೆ ೧೦) ಚಾಮುಯ್ಯನ ಕಥೆ ೧೧) ಚೋಳನ ಕಥೆ ೧೨) ಬಲಿಚಕ್ರವರ್ತಿಯ ಕಥೆ ೧೩) ಗುರು ಭಕ್ತ ಭಂಡಾರಿ ಕಥೆ ೧೪) ಗುರುಭಕ್ತನ ಕಥೆ ೧೫) ಇಂದ್ರನ ಕಥೆ ೧೬) ದಧೀಚಿಯ ಕಥೆ ೧೭) ಅಗಸ್ತ್ಯನ ಕಥೆ ೧೮) ಭೃಗುಮುನಿಯ ಕಥೆ ೧೯) ಭಸ್ಮಾಸುರನ ಕಥೆ ೨೦) ಬಾಣಾಸುರನ ಕಥೆ ೨೧) ಗಜಾಸುರನ ಕೊಂದ ಕಥೆ ೨೨) ಅಂಧಕಾಸುರನ ಕಥೆ ೨೩) ವಿಷ್ವಕ್ಸೇನನ ಕೊಂದ ಕಥೆ ೨೪) ಜಲಂಧರನ ಕಥೆ ೨೫) ಬ್ರಹ್ಮನ ಶಿರ ಹರಿದ ಕಥೆ ೨೬) ವ್ಯಾಘ್ರಾಸುರನ ಕಥೆ ೨೭) ಮಾರ್ಕಂಡೇಯನ ಕಥೆ ೨೮) ಬಳ್ಳಿ ಲಿಂಗವಾದ ಕಥೆ ೨೯) ಕರಿಯ ಸೆಲದಿಯ ಕಥೆ ೩೦) ಮೊಸಳೆಯ ಕಥೆ

ಉದ್ದಂಡನಲ್ಲಿ ಮಾತ್ರ ಬರುವ ಕಥೆಗಳು

೧) ಭಾಸ್ಕರನ ಕಥೆ ೨) ಮಹಾಕಾಲನ ಕಥೆ ೩) ಜೀವನರಾಯನ ಕಥೆ ೪) ಬಂಜೆ ಕೊಂದ ಮುಂಗುಸಿಯ ಕಥೆ ೫) ಗಿಳಿಯನ್ನು ಕೊಂದ ಮುನಿಯ ಕಥೆ ೬) ಮಗನನ್ನು ಕಡಿದ ಹಾರುವನ ಕಥೆ ೭) ಭಿಲ್ಲಮರಾಯನ ಕಥೆ ೮) ಹಾವು ಕಚ್ಚಿದ ಬೇಡನ ಕಥೆ ೯) ಮಾರಗೌಂಡನ ಕಥೆ.

ಆಕರ

ನನ್ನಯ್ಯ ಚಾರಿತ್ರದ ಆಕರವನ್ನು ಹೇಳುವುದು ಒಂದು ರೀತಿಯಲ್ಲಿ ಸಾಹಸದ ಮಾತಾಗುತ್ತದೆ. ಪರ್ವತ ದೇವ, ಮಾದಣ್ಣ, ಉದ್ದಂಡರು ಕಾಲ ಕ್ರಮವಾಗಿ ಬದುಕಿದರು ಎಂದು ಕವಿ ಚರಿತ್ರೆಕಾರರು ಊಹಿಸುತ್ತಾರೆ. ಆದರೆ ಈ ಮಾತನ್ನು ಖಚಿತವಾಗಿ ಹೇಳಲು ಆಗುವುದಿಲ್ಲ. ಆದುದರಿಂದ ಮೇಲಿನ ಮೂವರಲ್ಲಿ ಯಾರಿಂದ ಯಾರು ತೆಗೆದು ಕೊಂಡರು ಎನ್ನುವುದು ಸಮಸ್ಯೆಯಾಗಿಯೇ ಉಳಿಯುತ್ತದೆ. ಆ ನಿಟ್ಟಿನಲ್ಲಿ ಯೋಚಿಸಿದಾಗ ಮೂರು ಸಾಧ್ಯತೆಗಳು ಕಂಡು ಬರುತ್ತವೆ.

—೧—

ಪರ್ವತ → ಮಾದಣ್ಣ → ಉದ್ದಂಡ.

—೨—

ಪರ್ವತದೇವ

ಮಾದಣ್ಣ ಉದ್ದಂಡ

—೩—

*

ಪರ್ವತದೇವ ಮಾದಣ್ಣ ಉದ್ದಂಡ

ಇದರಲ್ಲಿ ಮೂರನೆಯ ಸಾಧ್ಯತೆಯೇ ನಿಜವಾಗುವ ಸಂಭವ ಹೆಚ್ಚಾಗಿದೆ ಏಕೆಂದರೆ ಪರ್ವತದೇವ—

ಪ್ರೊಸತ್ತಾಗಿ ಶಾಸ್ತ್ರ ಪರಿಸಗಿದುದಿಲ್ಲ ನಾ। ಶಶಿಮೌಳಿಯು ಕವೀಶ್ವರನು
ಎಸಗಿದ ಕಾವ್ಯದ ಸಾರವ ತೆಗೆದು ನಾ। ಸುಸುರುವೆ ಚವುಪದಿಯಿಂದ ॥ ೧-೨೭

ಮಾದಣ್ಣ—

ಆಗಮ ಪುರಾಣ ಸಾಕ್ಷಿಗ
ಳಾಗಿ ಸುವಾಕ್ಯಗಳ ಕೇಳಿ ಸೇರಿಸಿ ಮನಕಿಂ
ಬಾಗಿ ಬೋಧಿಸಿದ ಕೃತಿಯಿದ
ರಾಗದಿ ಕೇಳೂದು ಪ್ರಾಪ್ತರೂಪ ಸಮೂಹಂ ॥ ೧-೪

ಎಂದು ಹೇಳಿದ್ದಾನೆ. ಭೀಮಕವಿಯು ಬಸವ ಪುರಾಣದ ಕರ್ತೃಗಳಾಗಲಿ ಸುಜ್ಞಾನಿಗಳು ನನ್ನಯ್ಯನಿಗೆ ಕಥೆಗಳನ್ನು ಹೇಳಿ ಬೋಧಿಸಿದರು ಎನ್ನುವ ಮಾತು ದೊರೆಯುತ್ತದೆ. ಅಂದರೆ ಆ ಕಾಲದಲ್ಲಿದ್ದ ನನ್ನಯ್ಯನನ್ನು ಕುರಿತ ಮೂಲಗ್ರಂಥವೊಂದು ನಾಶವಾಗಿರುವ ಸಾಧ್ಯತೆಯಿದೆ. ಆ ಮೂಲ ಗ್ರಂಥ ಸು. ೧೬೦೦ರ ವರೆವಿಗೂ ಉಳಿದುಕೊಂಡಿದ್ದು ಪರ್ವತದೇವಾದಿಗಳು ಬಳಸಿಕೊಂಡಿರುವ ಸಾಧ್ಯತೆಯಿದೆ. ಈ ಮಾತಿಗೆ ಉಪಸ್ತಂಭಕವಾಗಿ ಪರ್ವತದೇವ, ಮಾದಣ್ಣ ಮತ್ತು ಉದ್ದಂಡರ ಕೃತಿಗಳ ತುಲನಾತ್ಮಕ ಅಧ್ಯಯನ ನಿಲ್ಲುತ್ತದೆ.

ನನ್ನಯ್ಯ ಚಾರಿತ್ರದ ಕಥೆಗಳಿಗೆ ಆಕರವಾಗಲು ಕಥಾಸರಿತ್ಸಾಗರದಿಂದ ಹಿಡಿದು ಇಂದಿನ ಜನಪದ ಕಥೆಗಳವರೆಗೆ ಹರಡಿದೆ. ಅದೇ ಕಥೆಯಲ್ಲದಿದ್ದರೂ ಆ ಕಥೆಗಳ ಅಂಶ (Motif) ಗಳನ್ನು ಒಳಗೊಂಡ ಅನೇಕ ಕಥೆಗಳು ಇಲ್ಲಿ ದೊರೆಯುತ್ತವೆ. ರಾಮಾಯಣ, ಭಾರತ, ಶಿವಶರಣರ ಕಥೆಗಳನ್ನು ಬಿಟ್ಟು ಇತರ ಕೆಲವು ಕಥೆಗಳ ವಿವರ ಹೀಗಿದೆ—

ಮೊದಲನೆಯದಾಗಿ ನನ್ನಯ್ಯನ ಕಥೆಯ ಅಂಗುಲಿಮಾಲನ ಕಥೆಯನ್ನು ಹೋಲುತ್ತದೆ ಎಂಬುದನ್ನು ಈಗಾಗಲೇ ನೋಡಿದ್ದಾಗಿದೆ. ಪರೋಪಕಾರ ಬುದ್ಧಿಯಿಂದ

ಮಾಡುವುದು ಬಿಲ್ಹಣನಿಂದ ಹಿಡಿದು ಚಂಬಲ್ ಕಣಿವೆಯ ಪ್ರಸಂಗದವರೆಗೂ ನಡೆದು ಕೊಂಡು ಬಂದಿದೆ. ಇದ್ದುದನ್ನಾಡಿ ಗುದ್ದಿಸಿಕೊಂಡವನ ಕಥೆ ಬಹುಶಃ "ಇದ್ದುದನ್ನು ಇದ್ದಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದ" ಎನ್ನುವ ಗಾದೆಯ ಮೇಲೆ ರೂಪ ಗೊಂಡಂತೆ ಕಾಣುತ್ತದೆ. ನನ್ನಯ್ಯ ಚಾರಿತ್ರವನ್ನು ಹೇಳುವ ಮೂರು ಕೃತಿಗಳಲ್ಲಿ ಬಿಟ್ಟರೆ ಬೇರೆ ಕಡೆ ಈ ಕಥೆ ಕಾಣಿಸುವುದಿಲ್ಲ. ಇದನ್ನು ಬುದ್ಧಿಮಂತಿಕೆಯ, ಉದ್ದೇಶ ಪೂರ್ವಕ ಕಥೆಗಳ ಗುಂಪಿಗೆ ಸೇರಿಸಬಹುದು. ಈ ಕಥೆಯನ್ನು ಬಳಸಿಕೊಂಡಿರುವ ಸಂದರ್ಭ ಅತ್ಯಂತ ಉಚಿತವಾಗಿದೆ.

ಯಶೋಧರರಾಯನ ಕಥೆ ಭಾರತೀಯ ಕಥಾಸಾಹಿತ್ಯದಲ್ಲಿ ಅತ್ಯಂತ ಪ್ರಸಿದ್ಧ ವಾದುದು. ಹರಿಭದ್ರನ ಸಮರಾಇಚ್ಚ ಕಹಾದಿಂದ ದೊರೆಯುವ ಈ ಕಥೆ ಮುಂದೆ ಸಂಸ್ಕೃತ, ಪ್ರಾಕೃತ, ಅಪಭ್ರಂಶ, ತಮಿಳು ಗುಜರಾತಿ, ಹಿಂದಿ ಭಾಷೆಗಳಲ್ಲಿ ದೊರೆಯು ತ್ತದೆ. ಕನ್ನಡದಲ್ಲಿ ಜನ್ನ, ಪದ್ಮನಾಭ, ಚಂದನವರ್ಣಿ, ಮತ್ತೊಂದು ಕವಿ ಗೊತ್ತಿಲ್ಲದ ಯಶೋಧರ ಸಾಂಗತ್ಯ ಮತ್ತು ಜೀವದಯಾಷ್ಟಮಿನೋಂಪಿಗಳಲ್ಲಿ ಒದಗಿಬಂದಿದೆ. ಈ ಕಥೆ ಒಬ್ಬೊಬ್ಬರ ಬಾಳಿನಲ್ಲಿಯೂ ಬರುವ ಪ್ರಾಚೀನ ಕರ್ಮ ಅದರ ಫಲವಾಗಿ ಉಂಟಾ ಗುವ ಭವಾವಳಿಗಳ ತೊಳಲಾಟ ಮತ್ತು ಜೀವಹಿಂಸೆಯ ಫಲವನ್ನು ತಿಳಿಸುತ್ತದೆ. ಯಶೋ ಧರ ಮತ್ತು ಅಮೃತಮತಿಯರ ಪ್ರಣಯದುರಂತ ಅತ್ಯಂತ ಮರ್ಮ ಭೇದಕವಾದುದು. ನನ್ನಯ್ಯಚಾರಿತ್ರಕಾರರು ಈ ಕಥೆಯನ್ನು ತಮ್ಮ ಸೀಮಿತ ಉದ್ದೇಶಕ್ಕೆ ಮಾತ್ರ ಬಳಸಿ ಕೊಳ್ಳುತ್ತಾರೆ. ಸ್ತ್ರೀಗರ್ಹಣೆ ಅವರ ಉದ್ದೇಶ. ಹಾಗಾಗಿ ಅವರು ಅಮೃತಮತಿ ಮತ್ತು ಅಷ್ಟವಂಕನ ಪ್ರಸಂಗವನ್ನು ಮಾತ್ರ ಬಳಸಿಕೊಳ್ಳುತ್ತಾರೆ. ಭವಾವಳಿ ಮತ್ತು ಮುಂದಿನ ಪ್ರಸಂಗ ಅವರಿಗೆ ಅಪ್ರಸ್ತುತ. ಇದೇ ಆಶಯದ ಕಥೆ ಹಲವು ಜನಪದ ಕಥೆಗಳಲ್ಲಿಯೂ ದೊರೆಯುತ್ತದೆ. ಈ ಭಾಗಕ್ಕೆ ನೂರಣ್ಣನು ಜನ್ನನ ಯಶೋಧರ ಚರಿತೆಗೆ ಋಣಿ ಯಾಗಿದ್ದಾನೆ.

ಧನಸೇನಸೆಟ್ಟಿಯ ಕಥೆಯ ಇತಿಹಾಸ ಸಾಕಷ್ಟು ಹಳೆಯದು. ಸಂಸ್ಕೃತ ಕಥಾ ಸರಿತ್ಸಾಗರದಲ್ಲಿ (ಮೂಢಪ್ರೇಮ ಜಾರೆ ಕಥೆ–ಕಥಾಮೃತ ಪುಟ–೨೬೬) ದಂಡಿಯ ದಶ ಕುಮಾರ ಚರಿತೆಯಲ್ಲಿ (ಧೂಮಿನಿ ಕಥೆ–ಕಥಾಮೃತ ಪುಟ. ೪೬೦) ಕಾಣಬರುತ್ತದೆ. ಚಾವುಂಡರಾಯ (ಸು. ೧೩೦೦)ನು ದಂಡಿಯ ದಶಕುಮಾರಚರಿತೆಯನ್ನು ಅನುವಾದಿಸುವಾಗ ಮೊದಲಬಾರಿಗೆ ಈ ಕಥೆ ಕನ್ನಡಕ್ಕೆ ಬಂದಿದೆ. ಅಲ್ಲಿಂದ ನನ್ನಯ್ಯ ಚಾರಿತ್ರಕಾರರು ಇದನ್ನು ಬಳಸಿಕೊಂಡಿರುವ ಸಾಧ್ಯತೆಯಿದೆ. ಧನಸೇನ ಸೆಟ್ಟಿಯ ಕಥೆಯ ಆದಿಭಾಗ ಅಂದರೆ ಬೋಟನ ಪ್ರಸಂಗದಲ್ಲಿ ರಸಿಕಥೆಯ ವಿಕ್ರಮಾದಿತ್ಯನ ಪ್ರಸಂಗದ ಛಾಯೆ ಸ್ವಲ್ಪಮಟ್ಟಿಗಿದೆ. ಮರುಳಿಯ ಕಥೆಗೂ ಸಂಸ್ಕೃತ ಮೂಲವಿದೆ.

ಮಿತ್ರದತ್ತನ ಕಥೆ ಮತ್ತು ರೂಪವತಿಯ ಕಥೆಗಳಿಗೆ ಆಕರಗಳು ದೊರೆತಿಲ್ಲ. ಆದರೆ ಮನೆಯೊಡೆಯನು ವ್ಯಾಪಾರಕ್ಕೆ, ಯುದ್ಧಕ್ಕೆ ಮತ್ತಿತರ ಕಾರಣಗಳಿಗೆಂದು ಮನೆಬಿಟ್ಟು ಹೊರಟಾಗ ಸ್ತ್ರೀಯರು ಚಂಚಲರಾಗುವ ಆಶಯದ ಹಲವು ಜನಪದ ಕಥೆಗಳಲ್ಲಿ ಕಾಣ

ಬರುತ್ತದೆ. [illegible] ಕಥೆಯಲ್ಲಿ ನೀರಿನಲ್ಲಿರುವ ಮೀನಿನ ಆಸೆಗೋಸ್ಕರ ಮಾಂಸವನ್ನು ಕಳೆದುಕೊಂಡ ನರಿಯ ಪ್ರಸಂಗ ಬರುತ್ತದೆ (ಜಂಬುಕನೊಪದಿ). ಈ ಕಥೆ ಸಂಸ್ಕೃತ ಪಂಚತಂತ್ರದಲ್ಲಿ ಮತ್ತು ಕನ್ನಡದ ಚಾವುಂಡರಾಯ ಪುರಾಣದಲ್ಲಿ ದೊರೆಯುತ್ತದೆ.

ಮದನವಿಜಯರಾಯನ ಕಥೆಯಲ್ಲಿ ಬಾಣನ ಕಾದಂಬರಿಯ ಅನೇಕ ಲಕ್ಷಣಗಳು ಕಂಡುಬರುತ್ತವೆ. ಆದರೆ ಕಥೆ ಮುಂದುವರೆದು ಹೆಂಡತಿಯ ಹಟದಿಂದ, ಗಿಳಿದಂಪತಿಗಳ ಮಾತಿನಿಂದ ಬೇರೆಯ ತಿರುವನ್ನು ಪಡೆಯುತ್ತದೆ. ಈ ಕಥೆ ಭೂಲೋಕ ಖೇಚರಲೋಕಗಳನ್ನು ಒಳಗೊಂಡಿದೆ. ಇದೇ ಆಶಯ ಜನಪದಕಥೆಗಳಲ್ಲಿಯೂ ದೊರೆಯುತ್ತದೆ.

[illegible]ರಸನ ಕಥೆಯ ಮೂಲ ಕಥಾಸರಿತ್ಸಾಗರ (ಫಲಭೂತಿಯ ಕಥೆ-ಕಥಾಮೃತ ೬೩)ದಲ್ಲಿ ದೊರೆಯುತ್ತದೆ. ಅಲ್ಲಿನ ನಿರ್ದಿಷ್ಟ ಮನುಷ್ಯನ ಕಯ್ಯಲ್ಲಿ [illegible] ಹಣ್ಣನ್ನು ಸಂಕೇತವಾಗಿ ಕೊಟ್ಟು ಕಳಿಸುವ ಪ್ರಸಂಗ, ಅದನ್ನು ರಾಜನ ಮಗ ತಿಳಿಯದೆ ತಾನೇ ಒಯ್ದು ಸಾಯುವ ಪ್ರಸಂಗಗಳು ಚಂದ್ರಹಾಸನ ಕಥೆಯನ್ನು ಹೋಲುತ್ತವೆ.

[illegible]ನ ಕಥೆ ಭಾಗವತದಲ್ಲಿ ಬರುವ ಅಜಮಿಳನ ಕಥೆಗೆ ಸಂವಾದಿಯಾಗಿದೆ. ಈ ಬಗೆಯ ಕಥೆ ಜನಪದ ಕಥೆಗಳಲ್ಲಿಯೂ ದೊರೆಯುತ್ತದೆ. ಹರಗಣನಾಮ ಸ್ಮರಣೆ, ವಿಭೂತಿ ಮಹಾತ್ಮ್ಯೆ, ರುದ್ರಾಕ್ಷಿ ಮಹಾತ್ಮ್ಯೆ, ಸಾಸಂದ ದೇವರ ಕಥೆ, ಶ್ವೇತನ ಕಥೆ, ಶಿವರಾತ್ರಿಯಲ್ಲಿ ಮೋಹನಿರ್ದ ಕಿರಾತನ ಕಥೆ, ಚಂಡೇಶನ ಕಥೆ, ಗೃಧ್ರರಾಜ [illegible] ಕಥೆ, [illegible] ಕಥೆ, ಪಾತಕ [illegible] ಕಥೆ, ದಕ್ಷನ ಕಥೆ, ಸಿರಿಯಾಳನ ಕಥೆಗಳಿಗೆ ಶಿವಪುರಾಣಗಳಲ್ಲಿ ಆಕರವಿದೆ. ಧರ್ಮಬೋಧೆಗಾಗಿ ಇವನ್ನು ಉದ್ದಿಶ್ಯ ಪೂರ್ವಕವಾಗಿ ಬಳಸಿದಂತೆ ಕಾಣುತ್ತದೆ. ಶಿವರಾತ್ರಿಯಲ್ಲಿ ಮೋಹನಿರ್ದ ಕಿರಾತನ ಕಥೆ ಬೇಡರ ಕಣ್ಣಪ್ಪನ ಕಥೆಯನ್ನು ಹೋಲುತ್ತದೆ. ಸತ್ಯವನುಡಿಯಲು ಪಾಪವಾದ ಕಥೆ. [illegible] ಧರ್ಮವಾದ ಕಥೆಗಳು ಲೌಕಿಕ ಜ್ಞಾನದ ಮೇಲೆ ರೂಪುಗೊಂಡಿವೆ.

[illegible] ಉಪಕಥೆಯಾಗಿ ಬರುವ ಕಪೋತ ಪಕ್ಷಿಯ ಕಥೆ ಜಾಗತಿಕ ಕಥೆಗಳ ಗುಂಪಿಗೆ ಸೇರುತ್ತದೆ. ಫೀನಿಕ್ಸ್ ಪಕ್ಷಿಯ ಕಥೆಗೂ ಈ ಕಥೆಗೂ ಅನೇಕ ಸಾಮ್ಯಗಳಿವೆ. [illegible] ಕಥೆಯ ಆಶಯವನ್ನು ಹೊಂದಿದ ಕಥೆ ಕಥಾಸರಿತ್ಸಾಗರದಲ್ಲಿ ([illegible] ಶಬರನ ಕಥೆ–ಕಥಾಮೃತ. ೪೨೬) ದೊರೆಯುತ್ತದೆ. ನನ್ನಯ ಚಾರಿತ್ರದ ಪ್ರಧಾನ ಕಥೆಯಲ್ಲಿ ಬರುವ ಕತ್ತು ಕತ್ತರಿಸುವ ಪ್ರಸಂಗ ಮತ್ತು ಅದಕ್ಕೆ ಪ್ರಾಣ ಬರಿಸುವ ಪ್ರಸಂಗ ಪೌರಾಣಿಕವಾಗಿ ಗಣೇಶನ ಕತ್ತನ್ನು ಶಿವನು ಕತ್ತರಿಸಿ ಅನಂತರ ಆನೆಯ ಕತ್ತನ್ನು ಕೂಡಿಸಿ ಪ್ರಾಣ ಬರಿಸುವುದರೊಡನೆಯೂ ಏಕಾಂತ ರಾಮಯ್ಯನ ಕತ್ತನ್ನು ಕತ್ತರಿಸಿ ಒಂದು ವಾರ ನೆರವಣಿಗೆ ಮಾಡಿ ಮತ್ತೆ ಸೇರಿಸಿ ಪ್ರಾಣ ಬರಿಸುವುದರೊಡನೆಯೂ ತಾಳೆ ಹೊಂದುತ್ತದೆ. ಅನೇಕ ಜನಪದ ಕಥೆಗಳಲ್ಲಿ ಈ ಆಶಯ ಕಂಡುಬರುತ್ತದೆ.

ಜಾಗತಿಕ ಆಶಯಗಳು ನನ್ನಯ್ಯ ಚಾರಿತ್ರದಲ್ಲಿ ಬಳಕೆಯಾಗಿವೆ. [illegible] Standard Dictionary of Folklore Mythology and Legend ಸಂಪುಟ I ರಲ್ಲಿ ಪ್ರಾಣಿಗಳ ಭಾಷೆ (animal language)ಯ ಶೀರ್ಷಿಕೆ ಹೀಗಿದೆ.

"In combination with a tabu motif (C 425), the animal languages story as it appears in one of the best languages by a Snake is forbidden to tell any one of his gift. when he over hears two animals talking, he laughs. His wife will not desist in her attempts to learn why he was laughed, although he tells her he must not divulge his secret, he is about to tell her and die, when he hears a barnyard conversation about a man keeping order in his own house. He does not tell his wife. several plants also are believed to give one the gift of understanding animal languages. An Irish belief is that a Person wearing a four leafed Sham rock can understand barging dogs"– Page 460

ಮೇಲಿನ ಈ ಉಲ್ಲೇಖನ್ನು ನೋಡಿದಾಗ ನಂದನವಿಜಯರಾಯನ ಕಥೆಯಲ್ಲಿ ಬರುವ ಪ್ರಸಂಗ–ಅಂಬಿಕೆಯಿಂದ ಪಕ್ಷಿಗಳ ಭಾಷೆಯನ್ನು ಅರಿಯುವ ಸಾಮರ್ಥ್ಯವನ್ನು ಪಡೆದ ರಾಜ ಅದನ್ನು ಹೆಂಡತಿಗೆ ಹೇಳಲಿಲ್ಲ. ಆಕೆ ಸಾಯುತ್ತೇನೆ ಎಂದು ಹೆದರಿಸಿದಾಗ ಆಕೆಗೆ ಹೇಳಲು ರಾಜ ಒಪ್ಪಿದ ಆತ ಜಲಕೇಳಿಗೆ ಹೋಗಿದ್ದಾಗ ಗಿಳಿಗಳ ಮಾತನ್ನು ಕೇಳಿ ಆ ಪ್ರಸಂಗವನ್ನು ನಿಭಾಯಿಸಿದನು.

ನನ್ನಯ್ಯ ಚಾರಿತ್ರದಲ್ಲಿ ಬರುವ ದಕ್ಷನ ಕಥೆಯನ್ನು ಜಾನಪದ ವಿದ್ವಾಂಸರು ಹೇಳುವ ನಿವರಣಾತ್ಮಕ ಕಥೆಗಳು (Etiologicol tales) ಗುಂಪಿಗೆ ಸೇರಿಸಬಹುದು. ಆ ಸಂದರ್ಭ ನನ್ನಯ್ಯ ಚಾರಿತ್ರದಲ್ಲಿ ಹೀಗಿದೆ—"ಭೂತಗಣಂಗಳನಾ ದಕ್ಷನ ಶಿರಮಂ ಕಡಿದು ಹೋಮ ಕುಂಡದೊಳಂ ಹಾಯ್ಕಲದು ದಹನವಾಯಿತ್ತು. ಆ ಶಿರಸ್ಸಿನ ಪ್ರತಿಗೆ ಪಶು ಬಂಧಕ್ಕೆ ತಂದ ಹೋತಿನ ತಲೆಯನಾ ದಕ್ಷನ ಮುಂಡದ ಮೇಲಿರಿಸಿ ಪ್ರಾಣಮಂ ವೀರೇಶ್ವರಂ ಕೊಟ್ಟನಿದೆಲ್ಲವು ಪಾರ್ವತೀದೇವಿಯರ ಕಡೆಯಿಂದಾದುದಾಗಿ ಈಗವೂ ಅಜಂಗಳ್ದನಿಗೆಯ್ವಾಗಲುಮೆವ್ವಮೆಯೆಂದು ದೇವಿಯರ ನೆನವುತ್ತಿಹವು"

ಇದಕ್ಕೆ ಸಂವಾದಿಯಾಗಿ ಕೋಗಿಲೆ ಏಕೆ "ಚಿಕವೂ ಚಿಕವೂ" ಎನ್ನುತ್ತದೆ. ಮೊದಲು ಮನುಷ್ಯರಂತೆ ಮಾತನಾಡುತ್ತಿದ್ದ ಹಸು ಏಕೆ "ಅಂಬಾ ಅಂಬಾ" ಎನ್ನುತ್ತದೆ ಎನ್ನುವ ಕಥೆಗಳನ್ನು ನೋಡಬಹುದು. ಈ ಬಗೆಯ ಕಥೆಗಳು ಪಾಶ್ಚಾತ್ಯ ಸಾಹಿತ್ಯದಲ್ಲಿಯೂ ದೊರೆಯುತ್ತವೆ. Other etiological tales like the one telling how the bear lost his tail, have become attached to one or another of the beast epics.

ಹೀಗೆಯೇ ಮಾತನಾಡುವ ಕುದುರೆ (Speaking horse B.211.1.3) ಸಹಾಯ ಮಾಡುವ ಕುದುರೆ (Helpful horse) ಮಾತನಾಡುವ ಹುಲಿ (Speaking tiger

Standard Dictionery of Folklore and Mythology and Legends vol I. page 61.

***

B 211. 2. 2. 1) ಮಾತನಾಡುವ ಹಕ್ಕಿ (Speaking birds 211.3) ಆಶಯಗಳನ್ನು ಮದನವಿಜಯರಾಯನ ಕಥೆಯಲ್ಲಿ ಕಾಣಬಹುದು. ಸಹಾಯಮಾಡುವ ನಾಯಿ (Helpfuldog. B421) ವಿಭೂತಿಯ ಮಹಾತ್ಮೆ ಕಥೆಯಲ್ಲಿ ಕಾಣಬರುತ್ತದೆ. ಹಾದರಗಿತ್ತಿ ಪತಿವ್ರತೆಯಂತೆ ಸೋಗುಹಾಕುವ ಸಂಗತಿ (Prostitute poses as noble woman· K1315.5-1) ಧನಸೇನ ಸೆಟ್ಟಿಯ ಕಥೆಯಲ್ಲಿ ಕಂಡು ಬರುತ್ತದೆ. ನೋಡದೆ ಇರುವ ಮನುಷ್ಯನಲ್ಲಿ ಪ್ರೇಮಾನುರಾಗ (falling in love with person never seen.T. 11) ಸುಂದರ ಸಂಗೀತಕ್ಕೆ ಮನಸೋಲುವುದು (falling love with beautiful voiceT.11.8) ಯಶೋಧರ ಚರಿತೆಯಲ್ಲಿದೆ. ಪ್ರೇಮದಿಂದ ಹುಚ್ಚು Madness from love T.24.3) ಎನ್ನುವ ಆಶಯ ರತ್ನದತ್ತನ ಕಥೆಯಲ್ಲಿದೆ. ಸಾಹುಕಾರ ಮತ್ತು ಬಡವನ ಪ್ರೇಮ (Rich and poor in love T.91.5) ದೇವಶರ್ಮನ ಕಥೆಯಲ್ಲಿ ದೊರೆಯುತ್ತದೆ. ಹೀಗೆ ಜಗತ್ತಿನ ಕಥೆಗಳಲ್ಲಿ ಕಂಡುಬರುವ ಅನೇಕ ಅಂಶಗಳು, ಆಶಯಗಳು ನನ್ನಯ್ಯ ಚಾರಿತ್ರ ಕಥೆಗಳಲ್ಲಿ ಕಂಡುಬರುತ್ತವೆ.

ವಿಮರ್ಶೆ

ಕವಿಯ ಸ್ವಭಾವ ಆತನ ಕೃತಿಗಳಲ್ಲಿ ಅಭಿವ್ಯಕ್ತಿಗೊಂಡಿರುತ್ತದೆ. ಆದುದರಿಂದ ನನ್ನಯ್ಯ ಚಾರಿತ್ರವನ್ನು ಕುರಿತು ನಾಲ್ಕು ಮಾತು ಹೇಳುವ ಮೊದಲು ಕವಿಯ ನಿಲುವನ್ನು ಗುಣ ಸ್ವಭಾವವನ್ನು ತಿಳಿಯುವುದು ಸೂಕ್ತ—

ಕವಿಸಾದಣ್ಣ ಸ್ವಭಾವತಃ ಭಕ್ತ. ಮಹಾಕವಿ ಹರಿಹರನ ಮಾರ್ಗದರ್ಶನದಲ್ಲಿ ಜೀವನ ನಡೆಸಿದವನು, ಕವಿಯ ಪ್ರಕಾರ ನನ್ನಯ್ಯ ಚಾರಿತ್ರ "ಶಿವನೊಲುಮೆಯ ಶರಣರ ಸದಮಲ ಚಾರಿತ್ರ" ಇದನ್ನು ಮನದಲ್ಲಿ ಮುದದಿಂದ. ಸಂತೋಷದಿಂದ ಕೇಳುವುದು ಎಂದಿದ್ದಾನೆ. ಹರಿಹರನಂತೆಯೇ ಸಾದಣ್ಣನೂ ಕೂಡ—

ಅಷ್ಟಮಹದೈಶ್ವರ್ಯವನೀ
ಸೃಷ್ಟಿಯೊಳೆಲ್ಲರಿಗೆ ಕೊಡುವ ಶಿವನಿರ್ದಂತೀ
ಭ್ರಷ್ಟ ಮಾನವರ ಬೇಡುವ
ಕಷ್ಟವನುಳಿ ಮನವೆ ಬೇಡಿಕೊಂಬೆಂ ನಿನ್ನಂ || ೧–೪೭

ಸುರಪತಿಗಂ ಸುರದ್ರುಮಕ್ಕೆಯಾ ಸುರಧೇನುಗೆ ದೇವರತ್ನಕಂ
ಮರಿಸುವದಿಗ್ಗಂ ವೃಷಭನೊಳ್ಪಿಗೆಯೊಪ್ಪುವ ದುಗ್ಧವಾರ್ಧಿಗಂ
ಸುರಗಿರಿಯೊಂದುದಾರತೆಗವಿಲ್ಲವ ಗುಣಕ್ಕೆ ಜಸಕ್ಕೆ ಮತ್ತವು
ನರರ ಪೊಗಳ್ದು ದುರ್ಗತಿಯನೈದದಿರೋ [illegible] || ೧–೪೮

ಮಾನವರ ಸೇವೆಯನ್ನು ನಿರಾಕರಿಸಿದ್ದಾನೆ. [illegible] ನಿರ್ಮಲದಲ್ಲಿರುವ ಸೌಂದರ್ಯ[illegible] ಆತ್ಮ[illegible] ಈಶ್ವರನನ್ನು ಬಿಟ್ಟು ಇತರ [illegible] ಬೇಡಿಕೊಳ್ಳುತ್ತಾನೆ.

ಸಾದಣ್ಣನಿಗೆ ತನ್ನ ಕಾವ್ಯ ರಚನೆ 'ಶಿವಕೀರ್ತನೆ' ತನ್ನ ಕೃತಿಯನ್ನು—

ನಿಲ್ಲದೆ ಕೃತಿಜಡನಾಗದೆ
ಸಲ್ಲಲಿತರು ಕೇಳಿ ಕೃತಿಯನಹುದೆಂಬಂತಿರೆ
ಬೆಲ್ಲವತ್ತ್ರದೊಳು ನೆಲಸಿದ
ವಲ್ಲಭ ಬಸವಣ್ಣ ನಡೆಸುವನು ಮತ್ಕೃತಿಯಂ || ೧-೧೫

ಎನ್ನುವ ನಂಬಿಕೆಯುಂಟು. ಪೂರ್ವಕಾವ್ಯ ಪರಿಚಯವಿದ್ದ ಸಾದಣ್ಣನಿಗೆ—

ರಸಭಾವಂ ವಿಗುರ್ವರ್ಥ ಚಿತ್ರಪದ ಸತ್ಪ್ರಾಸಂ ಕ್ರಮಂ ಲಕ್ಷಣಂ
ಪೊಸತಪ್ಪಾ ಬಗೆ ಜಾಣ್ ಸುವಾಕ್ಯ ಸಲೆ ಲಾಗೇನುಳ್ಳ ವಾಗ್ಜಾಲದಿಂ
ವಸುಧಾಚಕ್ರದಿ ಪೇಳ್ದರಾದಿ ಕವಿಗಳ್ ಕಾವ್ಯಂಗಳಂತಿನ್ನು ಸಿ
ಟ್ಟಿಸಲೇನುಂಟುಮಪೂರ್ವ ಕಾವ್ಯ ಕೃತಿಯಂ ಪೇಳಲ್ಕಿಳಾ ಚಕ್ರದೊಳ್ || ೧–೨೨

ಎನ್ನುವ ಅರಿವೂ ಇದೆ. ನಾನು ಕವಿತಾಶಕ್ತಿಗೋಸ್ಕರ ಈ ಕೃತಿಯನ್ನು ಹೇಳಲಿಲ್ಲವೆಂದು ಅವನೇ ಹೇಳಿದ್ದಾನೆ. "ಕೇಳಿ ನಿಮ್ಮ ಶಿಶುವೆನ್ನ ಕೊರಲ್ನುಡಿಯಂ" ಎಂದು ವಿನಯ ಪೂರ್ವಕವಾಗಿ ಕೇಳಿಕೊಂಡರೂ ಆತನಿಗೆ ಕುಕವಿಗಳ ಭಯವಿದೆ–

ಎಱಗುವೆ ದುರ್ಜನರಿಗೊ
ಲ್ದೆಱಗೆನು ಸುಜನಾಳಿಗಳ್ಗದೆಂತೆನೆ ಪಥದೊಳ್
ಬರುತಿರೆ ಚೋರರ್ಗಂಜುವ
ತೆಱದಿಂ ಪಿರಿಯರು ಬರಲ್ಕದೇನಂಜುವರೇ || ೧–೩೩

ಇದು ಕುಕವೀ ಮಾರ್ಗವಲ್ಲ. ಈಶ ಶರಣರ ದಾಸೋಹಕ್ಕೆ ಭಕ್ತಿಗೆ ಪರಮೇಶನು ಮೆಚ್ಚಿ ಮೆರೆದ ಚಾರಿತ್ರ ಎಂದು ತನ್ನ ಕಾವ್ಯದ ಬಗ್ಗೆ ಹೇಳಿದ್ದಾನೆ. ಅಷ್ಟಾದಶ ವರ್ಣನೆಗಳಲ್ಲಿ, ಆತ್ಮೋಕ್ತಿಯಲ್ಲಿ ಆತನಿಗೆ ಆಸಕ್ತಿಯಿಲ್ಲ ಎನ್ನುವುದು—

ಪುರಮುಂ ವನಮುಂ ಲತೆಯುಂ
ತರುಣಿಯರಂ ಗಿರಿಯ ಕರಿಯ ಶರಧಿಯ ಪೊಗಳು
ತ್ತಿರದೆ ಶಿವಶರಣರೆಲ್ಲರ
ಚರಣವ ನೆನೆ ಮನವೆ ಬೇಡಿಕೊಂಬೆನು ನಿನ್ನಂ || ೧–೪೦

ಕೊಳನಂ ಹಂಸೆಯ ನೈದಿಲ
ನಳಿನವ ಶುಕ ಪಿಕ ಮಯೂರ ತತಿಯಂ ಮಂದಾ
ನಿಲನಂ ವರ್ಣಿಸಿ ಪೇಳುವ
ಗಲಭೆಯು ಕೃತಿಯಲ್ಲಮೀಶ ಶರಣ ಚರಿತ್ರಂ || ೧–೩೬

ರದನವು ವಜ್ರವೆಂದು ನಯನಂಗಳ ನೈದಿಲೆಗಳೆಂದು ತ
ದ್ವದನವನಾ ಸರೋಜಶಶಿಯೆಂದುಜಿತಿ ಪೋಲಿಸಿವೊಪ್ಪವೆತ್ತು ತೋ

ಪಾಥರಮುಂ ಬಿಂಬಮುಂ ಪ್ರವಳಮೆಂದನುಸಾರಿಯು ಪೇಳ್ವುದಲ್ಲಮಿಾ
ಸವನುಲವಿಾಶ ಭಕ್ತರ ಚರಿತ್ರವನುಳ್ಳುದ ಪೇಳ್ವೆನಲ್ತೆಯುಂ ॥ ೧-೩೬

ಮೇಲಿನ ಪದ್ಯಗಳಿಂದ ತಿಳಿದು ಬರುತ್ತದೆ. "ಉಳ್ಳುದ ಪೇಳ್ವೆನಲ್ತೆಯುಂ" ಎನ್ನುವ ಸೀಮಿತ ಪರಿಧಿಯಲ್ಲಿ ಹೊರಟ ಕಾರಣ ಮಾದಣ್ಣನ ಕೃತಿ ಅತ್ಯಂತ ಯಶಸ್ವಿಯಾಗಿದೆ.

ನನ್ನಯ್ಯ ಚಾರಿತ್ರದಲ್ಲಿ ಮಾತಂಗತನು–ನನ್ನಯ್ಯನಾಗುವವರೆಗಿನ ಕಥೆ ತುಂಬ ರೋಮಾಂಚಕವಾಗಿದೆ. ಇಲ್ಲಿ ನಾವು ಕಾಣುವುದು ಸಾಂಕೇತಿಕತೆ. ಕವಿಯೇ ಹೇಳು ವಂತೆ ಇದು ಭಕ್ತಿ–ಜ್ಞಾನ–ವೈರಾಗ್ಯಗಳನ್ನು ಪ್ರತಿಪಾದಿಸುವ ಗ್ರಂಥ. ಕಥಾಗರ್ಭ ಪ್ರಕರಣ ಇದನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ ಇದನ್ನು ಅತ್ಯಂತ ವಾಸ್ತವದ ನೆಲಗಟ್ಟಿನಲ್ಲಿ ಮಾದಣ್ಣ ನಿರ್ವಹಿಸಿಕೊಂಡು ಹೋಗಿರುವ ಅಂಶ ಮೆಚ್ಚತಕ್ಕದ್ದಾಗಿದೆ.

ನನ್ನಯ್ಯ ಚಾರಿತ್ರದ ಕಥೆಯ ಆರಂಭವೇ ಅತ್ಯಂತ ಕುತೂಹಲಕರವಾಗಿದೆ—

ಸುಜ್ಞಾನಿಗಳು ಬಸವಾದಿ ಶರಣರನ್ನು ಕಾಣಲು ಹೊರಟರು ಹೋಗುತ್ತಿರುವಾಗ ಅರಣ್ಯ ಅಡ್ಡ ಬಂದಿತು. ಅದನ್ನು ಪ್ರವೇಶಿಸುವಷ್ಟರಲ್ಲಿ ಕೆಲವು ಪ್ರಯಾಣಿಕರು ಎದುರಿಗೆ ಬಂದರು. ಅವರ ಪರಿಸ್ಥಿತಿಯನ್ನು ಕಂಡು ಆ ಕಾಡಿನಲ್ಲಿ ನಡೆದುದನ್ನು ಕೇಳಿದ ಸುಜ್ಞಾನಿ ಗಳ ಜೊತೆಗಾರರು ಮುಂದೆ ಅಡಿಯಿಡದೆ ಅಲ್ಲಿಯೇ ಹೊತ್ತ ಹೊರೆಯನ್ನು ಮಡಗಿದರು. "ನೀಗಾಡದಿರೆನ್ನುಸುವ ಶಿಶುಗಳಿಗೆ ದಿಕ್ಕಿಲ್ಲಂ" ಎನ್ನುವ ಮಾತು ಆ ಸಂದರ್ಭದ ಭಯಂಕರತೆ ಯನ್ನು ಎತ್ತಿ ತೋರುತ್ತದೆ. ಆ ಸನ್ನಿವೇಶವನ್ನು ದಿಟ್ಟವಾಗಿ ಎದುರಿಸಿದ ಜೀವ ಸುಜ್ಞಾನಿ. ಆತ ಅವರನ್ನು ಹಿಂದಕ್ಕೆ ಕಳುಹಿಸುತ್ತಾನೆ, ಕಾಡಿನಲ್ಲಿ ಮುಂದುವರಿದಾಗ ಎದುರುಗೊಳ್ಳುವ ರೂಪ—

ಕಾರಿರುಳೆದ್ದು ಬಂದು ತನುವೆತ್ತು ಶರೀರದವೊಪ್ಪದೇಳ್ಗೆಯಿಂ
ಮಾರಿಯುವಕ್ತ್ರದಂತೆ ಮುಖ ಕೆಂಜುರಿಗಣ್ಣು ಮರಳ್ದ ಮಿಾಸೆಯುಂ
ಬೀಜುವ ಭೀತಿಯಿಂ ಪಿಡಿದ ಬಿಲ್ಲು ಸರಳ್ಗಳು ಕಟ್ಟುನಾಯ್ಗಳಿಂ
ದಾರಿಯೊಳಡ್ಡನಿಂದ ಯಮದೂತರ ರೀತಿಯೊಳೊಬ್ಬ ಲುಬ್ಧಕಂ ॥ ೧-೯೬

ಯಾವುದನ್ನು ಸುಜ್ಞಾನಿ ಕೇಳಿ ಬಲ್ಲನೋ ಅದು ಎದುರಿಗೇ ನಿಂತಿದೆ. ನಿಶ್ಚಿತವೇ ಆದರೂ ಆ ಪ್ರಸಂಗ ಮುಖಾಮುಖಿಯಾಗಿದೆ. ಜ್ಞಾನ-ಅಜ್ಞಾನಗಳು ಒಂದನ್ನೊಂದು ಎದುರಿಸಿ ನಿಂತಿವೆ. ಕತ್ತಲು ತುಂಬಿದ ಮನೆಗೆ ಒಂದು ದೀಪವೇ ಸಾಕಾಗುವಂತೆ ಮಾತಂಗನೆಂಬನ ಅಜ್ಞಾನವನ್ನು ಸುಜ್ಞಾನಿ ಹೋಗಲಾಡಿಸುತ್ತಾನೆ. ಇಲ್ಲಿ ಕಾಡು ಬರುವ ಸುಜ್ಞಾನಿಯ ಮಾನಸಿಕ ಸ್ಥೈರ್ಯ ಮೆಚ್ಚುವಂತಹುದು. ಇದುವರೆಗೆ ಬತ್ತ ಪಾಶದಿಂದ ಕೊಲುವ ಯಮನ ನೆರಳು ಇದೇ ಈಗ ಅನುಭವವಾಗಿದೆ. ಅವನ ತೀರ ವ್ಯಾವಹಾರಿಕವಾಗಿ ಸುಜ್ಞಾನಿಯೊಡನೆ ನಡೆಯುವ ಸಂವಾದ 'ಬಾಣದಿಂದ ಬಿಡಾವ ದಂತೆ', 'ಅವನ ಬಳಿ ಕಾಲಿಗೆ ತೊಡಕಿ ಕೊಂಡಂತೆ' ಆಗಿದೆ. ಸುಜ್ಞಾನಿಗಳು ದರೋ ಆತನ ಅಜ್ಞಾನ ನಿವಾರಣೆಗಾಗಿ ಆತನಿಗೆ ತೀಕ್ಷ್ಣ ಕುಠಾರಗಳನ್ನು ಕೆಳಗಿಡ ಬೀಗ

ಗಳನ್ನೇ ಬಳಸಿಕೊಳ್ಳುತ್ತಾರೆ. ಅವರಿಗೂ ಗೊತ್ತು ಮಾತಂಗತಮನ ಮಾನಸಿಕ ಸ್ಥಿತಿ. ಆದ್ದರಿಂದಲೇ ಲಿಂಗಪೂಜೆಯಿಂದ ಒದಗುವ ಫಲವನ್ನು ಹೇಳುವಾಗ ಅತ್ಯಂತ ಐಹಿಕ ಸಂಗತಿಗಳನ್ನು ನಿರೂಪಿಸುತ್ತಾರೆ. ಹಾಗಾಗಿ ಲಿಂಗಪೂಜೆಯಿಂದ ದೊರೆಯುವುದು ಹೆಣ್ಣು–ಹೊನ್ನು ಮತ್ತು ರಾಜ್ಯ ಎಂದು ನಿರೂಪಿಸುತ್ತಾರೆ. (ಈ ಮಾತಿನ ಅಣಕ (Irony) ಮಾತಂಗತಮನ ಹೆಂಡತಿ ಮಾಲೆಯು ಮುತ್ತುಗನೊಡನೆ ಓಡಿಹೋಗುವುದರಲ್ಲಿ ವ್ಯಕ್ತವಾಗುತ್ತದೆ.) ಯಾರಿಗೆ ತಾನೇ ಮೇಲಿನ ಮೂರೂ ದೊರೆಯುತ್ತದೆ ಎಂದರೆ ಬಯಕೆಯಾಗದು? ಆದುದರಿಂದ ಆ ಲಿಂಗಕ್ಕೆ ತಮನು ಆಸೆ ಪಟ್ಟುದು ಸಹಜವೇ! ಆತನ ಕುತೂಹಲದ ಪ್ರಯೋಜನವನ್ನು ಸುಜ್ಞಾನಿಗಳು ಸಮರ್ಥವಾಗಿ ಬಳಸಿಕೊಳ್ಳುತ್ತಾರೆ. ಮಾತಂಗತಮನಿಗೆ ಐಹಿಕ ಭೋಗಗಳ ಮೇಲಿರುವ ಆಸಕ್ತಿಯನ್ನು ಹೋಗಲಾಡಿಸಲು ಆತನಿಗೆ ಮಾನಸಿಕ ಆಘಾತವನ್ನುಂಟುಮಾಡುತ್ತಾರೆ—

ಅಂತೆಯೇ ಕನ್ನುಗನಿಂದ ಆತನ ಹೆಂಡತಿ–ಮಕ್ಕಳು ಒಂದು ಸುಳ್ಳು ಮಾತಿಗಾಗಿ ನಡೆದುಕೊಂಡ ರೀತಿಯನ್ನು ಹೇಳಿಸುತ್ತಾರೆ. ಮೊದಲೇ ರುದ್ರ ಭಯಂಕರನಾದ ಮಾತಂಗತನು ಹುಚ್ಚೇಳುತ್ತಾನೆ. ಉಕ್ಕಿ ಹರಿಯುವ ನದಿಯ ಎರಡು ಪಡವಾಗಿ ಸುಜ್ಞಾನಿಗಳು ನಿಲ್ಲುತ್ತಾರೆ. ಅದಕ್ಕಾಗಿ ಆತನಿಗೆ ನಂಬಿದ ಗಂಡನಿಗೆ ಮೋಸ ಮಾಡಿದ ಹಲವು ಹೆಂಗಸರ ಕಥೆಗಳನ್ನು ಹೇಳುತ್ತಾರೆ. ಆ ಮೂಲಕ ಆತನಿಗೆ ಹೆಂಗಸರ ವಿಚಾರದಲ್ಲಿ ತಿರಸ್ಕಾರವುಂಟು ಮಾಡುತ್ತಾರೆ. ಧರ್ಮಶ್ರದ್ಧೆಯನ್ನುಂಟು ಮಾಡಿ ಆತನಿಗೆ ದೀಕ್ಷೆ–ಕೊಡುತ್ತಾರೆ.

ದೀಪದಿಂದ ದೀಪ ಹತ್ತಿತ್ತು. ಕೀಟ ಭ್ರಮರ ನ್ಯಾಯದಂತೆ ಸುಜ್ಞಾನಿಗಳ ಸಂಪರ್ಕದಿಂದ ಮಾತಂಗತಮನು ನನ್ನಯ್ಯನಾದ. ಇಲ್ಲಿಂದ ನನ್ನಯ್ಯನ ವ್ಯಕ್ತಿತ್ವ ಅತ್ಯಂತ ಸ್ಫುಟವಾಗಿ ಸಾಗುತ್ತದೆ. ಯಾವಾತ ತಲೆಯನ್ನು ತೆಗೆಯುತ್ತಿದ್ದಾನೋ ಅವನೇ ತನ್ನ ತಲೆಯನ್ನು ಕೊಡಲೂ ಸಿದ್ಧವಾಗಿದ್ದಾನೆ. ಇಂತಹ ಮಾನಸಿಕ ಪರಿವರ್ತನೆಯ ಹಿಂದಿರುವ ದೃಢ ನಿರ್ಧಾರ, ಆಂತರಿಕ ಅಂತಸ್ಸತ್ವ ಅತ್ಯಂತ ಮನೋಹರವಾಗಿದೆ.

ಇಲ್ಲಿಂದ ಮುಂದೆ ಬಿಲ್ವದಳದಂತೆ ಭಕ್ತಿ–ಜ್ಞಾನ ವೈರಾಗ್ಯಗಳು ಒಂದು ಎರಡಾಗಿ ಎರಡು ಮೂರಾಗುವುದನ್ನು ಕಾಣುತ್ತೇವೆ. ಇವು ಮುಪ್ಪುರಿಗೊಂಡುದರ ಸಂಕೇತವಾಗಿ ಸುಜ್ಞಾನಿ–ಜ್ಞಾನಾನಂದ–ನನ್ನಯ್ಯರು ಬಸವಾದಿ ಪ್ರಮಥರಿಂದ ಸನ್ಮಾನಿತರಾಗುತ್ತಾರೆ. ಶಿವನ ಕೈಲಾಸವನ್ನು ಸೇರುತ್ತಾರೆ.

ಈ ಕಥಾ ಹಂದರಕ್ಕೆ ಪೋಷಕವಾಗಿ ನೂರಾರು ಕಥೆಗಳನ್ನು ನನ್ನಯ್ಯ ಚಾರಿತ್ರಕಾರರು ಬಳಸಿಕೊಳ್ಳುತ್ತಾರೆ. ಈ ಸಂಪ್ರದಾಯ ಜೈಮಿನಿಭಾರತದಲ್ಲಿಯೇ ರೂಪುಗೊಂಡಿದೆ. ಮುಂದೆ ಕನ್ನಡದ ಜೈನಕಥೆಗಳಲ್ಲಿ ಈ ಸಂಪ್ರದಾಯ ಮುಂದುವರಿದಿದೆ. ವಡ್ಡಾರಾಧನೆಕಾರ, ನಯಸೇನ, ವೃತ್ತವಿಲಾಸ, ನಾಗರಾಜರು ತಮ್ಮ ಕೃತಿಗಳಲ್ಲಿ ಈ ಬಗೆಯ ಕಥೆಗಳನ್ನು ಬಳಸಿಕೊಂಡಿದ್ದಾರೆ. ವೀರಶೈವರಲ್ಲಿ ಭೈರವೇಶ್ವರ ಕಾವ್ಯ, ಗುರು ಭಕ್ತ ಚಾರಿತ್ರ ಮುಂತಾದ ಕೃತಿಗಳಿವೆ. ನಯಸೇನ ಮತ್ತು ವೃತ್ತವಿಲಾಸರಲ್ಲಿ ಸ್ವಧರ್ಮ

ಸಮರ್ಥನೆ, ಅನ್ಯಧರ್ಮ ವಿಡಂಬನೆ ಮತ್ತು ಧಾರ್ಮಿಕ ಘರ್ಷಣೆ ನಿಚ್ಚಳವಾಗಿ ಕಾಣುತ್ತವೆ. ಸಂತೋಷದ ಸಂಗತಿಯೆಂದರೆ ಮಾದಣ್ಣನ ಕೃತಿಯಲ್ಲಿ ಸ್ವಧರ್ಮ ಸಮರ್ಥನೆ ಕಂಡು ಬರುತ್ತದೆಯೇ ವಿನಃ ಅನ್ಯಧರ್ಮ ವಿಡಂಬನೆ ಕಂಡು ಬರುವುದಿಲ್ಲ. ಆತನ ಪ್ರಕಾರ ಹರ, ಮುರಹರ, ಬೌದ್ಧ, ಅರ್ಹತ, ಪರಬೊಮ್ಮ ಎಂದರೆ ಹರನೊಬ್ಬನೆ. ಹರ ಏಕಮೇವ ಅದ್ವಿತೀಯನಾತ್ಮ. ಮಾದಣ್ಣ ತನ್ನ ಈ ನಿಲುವಿಗೆ ಕೊಡುವ ಎರಡು ಉಪಮೆಗಳು ಅತ್ಯಂತ ಸೊಗಸಾಗಿವೆ, ಅಷ್ಟೇ ಅಲ್ಲ ಆತನ ಹೃದಯ ವೈಶಾಲ್ಯವನ್ನು ತೋರುತ್ತವೆ—

> ಮನೆ ಯಜಮಾನ ದಾಸಿಗೆ ಸುತಂಗೆ ಪಿತಂಗೆನೆವಗ್ರಜಂಗೆ ಕೂ
> ರ್ಪನುಜನ ತನ್ನ ವಲ್ಲಭಗೆಯಿಂತಿವರ್ಗಂದವರಾರ ಪುತ್ರ ನೋ
> ಡನುಜನ ಪೂರ್ವಜ ಪತಿಯೆನಿಸಿಪ್ಪವು ನಾಮಂಗಳಾಗಲಾತ ಬೇ
> ಱಾಗಿಸಿದನಾಳ್ಕೆಯಿಂ ಶಿವನೆ ಕರ್ತನು ಷಟ್ಸಮಯಂಗಳೆಲ್ಲಕಂ
>
> ಎಸೆವ ಪುರಕ್ಕೆ ಗೋಪುರಗಳಾಱುಂ ಲಂತವಱಲ್ಲಿ ಬರ್ಪವರ್
> ಪಸಿನದಿ ಬಂದು ಪೊಕ್ಕವರಿಗೆಲ್ಲರಿಗಂ ಪುರವೊಂದೆನಿಪ್ಪವೊಲ್
> ವಸುಧೆಯೊಳಿಲ್ಲ ಪರ್ತಿಸುವ ಷಟ್ಸಮಯಂಗಳಿಗಂ ವಿಚಾರಿಸಲ್
> ಶಶಿಧರನೊಬ್ಬನೆಂಬುದಿದು ವೇದಮತಂ ಶಬರಾಧಿನಾಯಕಾ ॥ ೫–೬೬, ೬೭

ಹೀಗೆ ತನ್ನ ಕಾವ್ಯ ಧೋರಣೆಯನ್ನು ಮುನ್ನಡೆಸುವಲ್ಲಿ ಮಾದಣ್ಣ ಆಗಮ, ಪುರಾಣ ಸಾಕ್ಷಿಗಳನ್ನು ಸೇರಿಸಿದ್ದಾನೆ. ವಿಪುಲವೂ, ವೈವಿಧ್ಯಮಯವೂ ಆದ ಈ ಸಂಸ್ಕೃತ ಉಲ್ಲೇಖಗಳು, ಅದರ ಕನ್ನಡದ ರೂಪಾಂತರಗಳು ಮಾದಣ್ಣನ ಪಾಂಡಿತ್ಯಕ್ಕೆ ಕುರುಹಾಗಿ ನಿಲ್ಲುತ್ತವೆ.

"ಕವಿತಾ ಬಳಿಗನೇಕ ಕಾವ್ಯದೊಳುಪಿಂದುತ್ಪ್ರೇಕ್ಷೆಯುತ್ಪತ್ತ್ಯದಿಂ ತವೆ ಪೇಳ್ದ ಕೃತಿಯಲ್ಲ" ಎಂದು ಮಾದಣ್ಣ ಹೇಳಿದ್ದರೂ ಆತನ ಕಾವ್ಯದಲ್ಲಿ ಅನೇಕ ಕಾವ್ಯ ಚಮತ್ಕಾರಗಳು ದೊರೆಯುತ್ತವೆ. ಶ್ಲೇಷೆ, ಉಪಮೆ, ರೂಪಕ ಹೀಗೆ ನಾನಾ ಬಗೆಯ ಅಲಂಕಾರಗಳನ್ನು ನಾವು ಆತನ ಕೃತಿಯಲ್ಲಿ ಕಾಣುತ್ತೇವೆ. ಮಾದಣ್ಣ ತನ್ನ ಕಾವ್ಯದಲ್ಲಿ ಲೋಕೋಕ್ತಿಗಳನ್ನು, ಗಾದೆಗಳನ್ನು ವಿಪುಲವಾಗಿ ಬಳಸಿಕೊಂಡಿದ್ದಾನೆ. ನನ್ನಯ್ಯ ಚಾರಿತ್ರವನ್ನು ಓದುತ್ತಿದ್ದರೆ ಓದುಗನಿಗೆ ನಯಸೇನನ ಧರ್ಮಾಮೃತದ ನೆನಪು ಬರುತ್ತದೆ. ನಯಸೇನನ ಹಾಗೆ ತನ್ನ ಸಮಕಾಲೀನ ಜೀವನದ ಚಿತ್ರಣವನ್ನು ಕೊಡುತ್ತಾನೆಯೋ ಹಾಗೆಯೇ ಮಾದಣ್ಣ ಕೂಡ ತನ್ನ ಸಮಕಾಲೀನ ಜೀವನಕ್ಕೆ ಕನ್ನಡಿ ಹಿಡಿಯುತ್ತಾನೆ. ಮಾದಣ್ಣನ ಕಾವ್ಯ ಚಮತ್ಕಾರಕ್ಕೆ ಒಂದೆರಡು ಉದಾಹರಣೆಗಳು—

ಶ್ಲೇಷೆಗೆ—

> ಕ) ಅರಿ ಸಿಸಮಿಲ್ಲೆಂಬರಸಿಂ
> ಗರಿಸಿನಮುಂಟೆನಿಸಿ ಕೊಟ್ಟು ವಣಿಜಂ ಮತ್ತಾ

ಗರಸಿನ ಕೃಪೆಯುಂ ಪಡೆದವ
ರರಿಸಿನ ಗುಣಪೂರ್ವದಿರ್ಪ ಸಿರಿಯಿಂದಿರ್ಪರು ॥ ೨-೨೧

೨) ಹಾಲಿಂಬುದು ವಸಥದೊಳಂ
ಮಾಲಿಂಬುದು ಕಯ್ಗಳಲ್ಲಿ ನಿಷ್ಠುರ ವಚನಂ
ಬೇಲಲ್ಲವೇನ ಪೊಗಳ್ವೆಂ
ಧಾರುಣಿಯೊಳಗಂ ವಸಂತಕಾಪುರವೆಸೆಗುಂ ॥ ೪-೫

೩) ಅಂತಾ ಸುಜ್ಞಾನಿಗಳುಂ ಕಾಮಧ್ವಂಸನಾಗಿಯುಂ ಗಿರಿಜಾರ್ಧದೇಹನಲ್ತು ಪುರುಷೋತ್ತಮನಾಗಿಯುಂ ಮತ್ಸ್ಯಾವತಾರನಲ್ತು ಸಕಲವೇದ ಶಾಸ್ತ್ರ ಚತುರ್ಮುಖ ನಾಗಿಯುಂ ವಿಧಿಯಲ್ತು ದಂಡಧರನಾಗಿಯುಂ ಯಮನಲ್ತು ಪ್ರಭಾಕರನಾಗಿಯುಂ ಚಂಡಕರ ಕಿರಣನಲ್ತು ಶಾಂತಿ ಕಲಾ ವಿಶೇಷಜ್ಞನಾಗಿಯುಂ ಶೈತ್ಯಕರ ಕಿರಣನಲ್ತು ೩-೯೫ ವ.

ಉಪಮೆಗೆ

ಧನಸೇನನ ಹೆಂಡತಿಯ ಮನಃ ಸ್ಥಿತಿ—

ಇಂತೆಂದು ಚಿಂತಿಸಿಯುಕಟಕಟ ನಾಂ ಮಹಾಪಾತಕಿತ್ತಿ ನಾಂ ಕನ್ನಡಿಯಿರ್ದಂತೆ ಕಾನಲಿಯೊಳ್ ಹೊನ್ನಿರ್ದಂತೆಯಭ್ರಕದೊಳ್ ಸಿರಿಯಿರ್ದಂತೆ ದರಿದ್ರದೊಳ್ 'ಸುಧೆ ಯಿರ್ದಂತೆ ಸುರೆಯೊಳ್ ಪುಣ್ಯಮಿರ್ದಂತೆ ಪಾಪದೊಳ್ ಬೆಳಗಿರ್ದಂತೆ ಕತ್ತಲೆಯೊಳ್ ಬಿಳಿದಿರ್ದಂತೆ ಮೈಲಗೆಯೊಳ್ ಸುಖಮಿರ್ದಂತೆ ದುಃಖದೊಳ್ ಪಟ್ಟೆಯಿರ್ದಂತೆ ಕಂಬಳಿ ಯೊಳ್ ಮತ್ತಮಾತಂಗವಿರ್ದಂತೆ ಕತ್ತೆಯೊಳ್ ಸುಗಂಧಮಿರ್ದಂತೆ ದುರ್ಗಂಧದೊಳ್ ಕಾಮಧೇನುವಿರ್ದಂತೆ ಗೊಡ್ಡಿನೊಳ್ ಚಂದ್ರಾಯುಧಮಿರ್ದಂತೆ ಸುಗ್ಗಿಯದಡಿಯೊಳ್ ಮಾಣಿಕ್ಯವಿರ್ದಂತೆ ಗಾಜಿನೊಳ್ ಕಂಚಿರ್ದಂತೆ ಹಂಚಿಗೆಳಸಿದಂತಾಂ ಸುಭಗನಂ ಸುಖಿ ಯುಂ ಸುಲಭನಂ ಸಜ್ಜನನಂ ಸೌಖ್ಯನಂ ಸೌಮ್ಯನಂ ಸ್ವರೂಪನಂ ಸತ್ಕುಲಜನಂ ಸಗುಣಿ ಯಂ ಸಮರ್ಥನಂ ಧನವಂತನಂ ಸದ್ಧರ್ಮಿಯುಂ ಸದಾಚಾರಿಯುಪ್ಪೆನ್ನ ಪ್ರಾಣೇಶ್ವರನಂ ಬಿಟ್ಟು ದುರ್ಬುದ್ಧಿಯಿಂದ ಅಂಗಹೀನಂಗೆ ಅವಿವೇಕಿಗೆ ಅಧರ್ಮಿಗೆ ಅಕ್ಕುಲಂಗೆ ಅನಾ ಚಾರಿಗೆ ಅಪಲಕ್ಷಣಂಗೆ ಅನೃತ ವಚನಂಗೆ ಧನಚೋರಕಂಗೆ ಪಿಶಿತವಿಹಾರಂಗೆ ಚರಣವಿನಾಶ ಯುಗ್ಮಂಗೆ ಪಾಪ ಸ್ವರೂಪಂಗೆ ಕುರೂಪಿನ ಸಂಪತ್ತಂಗೆ ಇಂತೀ ಪಾಪಸ್ವರೂಪಂಗೆಳಸಿ ಕೆಟ್ಟೆನದೆಂತೆನೆ—

ಇಲ್ಲಿ ನಾವು ಕಾಣುವುದು ಶಬ್ದದ ದುಂದುಗಾರಿಕೆ. ಒಂದು ಮಾತಿನಲ್ಲಿ ಹೇಳುವು ದನ್ನು ಆತ ಹತ್ತು ಮಾತಿನಲ್ಲಿ ಹೇಳುತ್ತಾನೆ. ಕವಿಗೆ ತಾನು ಯಾರನ್ನು ಕುರಿತು ಹೇಳು ತ್ತಿದ್ದೇನೆ ಎನ್ನುವ ಅರಿವಿದೆ ಮಾದಣ್ಣ ಕೊಡುವ ಶಬ್ದಚಿತ್ರಣ ಎಷ್ಟು ಮನೋಹರ ವಾಗಿದೆ ? ಸೊಗಸಾಗಿದೆ ಎಂಬುದು ತಿಳಿದು ಬರುತ್ತದೆ. ಮಾದಣ್ಣನ ಸ್ವಭಾವ ಬಿಚ್ಚು ಮನಸ್ಸಿನ ಸ್ವಭಾವ. ಆತನಿಗೆ ಶಬ್ದ ದಾರಿದ್ರ್ಯವಿಲ್ಲ. ಆತನ ಶಬ್ದಭಂಡಾರ ದೊಡ್ಡ

ಪಾದರೂ ಅದು ಔಚಿತ್ಯಪೂರ್ವಕವಾಗಿ ಬಳಕೆಯಾಗಿರುವುದನ್ನು ನಾವು ಇಲ್ಲಿ ನೋಡ ಬಹುದು. ಮದನವಿಜಯರಾಯನ ಕಥೆಯಲ್ಲಿ ಬರುವ—

ನಾಮಗೋಷ್ಠ್ಯ

ಮನಜರ ದನುಜರನದ್ರಿಯ
ವಿನಯಯುತರಂ ಜಗದನಾಮ ಯತಿಗಳ ಪೆಸರಿಂ
ಬಿನಿತಾಱಿಱಾದಿ ವರ್ಣವ
ನನುಕರಿಸಿದ ಪೆಸರೊಳೆಸೆವನಾ ವಸುಧೀಶಂ || ೪–೯

ದಂತಹ ಚಮತ್ಕಾರಗಳು ಇದೊಂದನ್ನು ಬಿಟ್ಟರೆ ಬೇರೆ ಇಲ್ಲವೇ ಇಲ್ಲ.

ಮಾದಣ್ಣ ತನ್ನ ಸಮಕಾಲೀನ ಜೀವನ ಚಿತ್ರಣವನ್ನು ನನ್ನಯ್ಯ ಚಾರಿತ್ರದಲ್ಲಿ ಸೆರೆ ಹಿಡಿದಿದ್ದಾನೆ. ಅದರಲ್ಲಿ ಪೂರ್ವಕವಿಗಳ ಪ್ರಭಾವ ಇದೆಯೆನ್ನುವುದು ನಿಜವಾದರೂ ಆತನ ಸ್ವಂತಿಕೆ ಆ ವರ್ಣನೆಗಳಲ್ಲಿ ಎದ್ದು ಕಾಣುತ್ತದೆ. ಕಲ್ಯಾಣ ಪಟ್ಟಣದ ವರ್ಣನೆಯಲ್ಲಿ ಆತ ಕೊಡುವ ಜೂಜುಗಾರರ, ಚದುರಂಗದವರ, ವ್ಯಾಪಾರಿಗಳ, ವೇಶಿಯರ ಚಿತ್ರಣ ಇದಕ್ಕೆ ಒಳ್ಳೆಯ ಉದಾಹರಣೆಯಾಗುತ್ತದೆ.

ಶೌಂಡಕನೊಡನೆ ಓಡಿ ಬಂದ ಪುಷ್ಕಳೆ ಕಳೆದುಕೊಟ್ಟ ಆಭರಣಗಳ ಪಟ್ಟಿಯಲ್ಲಿ ಮಾದಣ್ಣನ ಕಾಲದ ಒಡವೆಗಳು ಎಷ್ಟೋ ಇರುವುದನ್ನು ಕಾಣಬಹುದು. ಉದಾಹರಣೆಗೆ—

ಪುಷ್ಕಳೆ ತಾಂ ತಂದ ಧನಮನಪೂರ್ವ ರತ್ನ ವಜ್ರ ವೈಢೂರ್ಯ ಪುಷ್ಯರಾಗ ಗೋಮೇಧಿಕ ಮೌಕ್ತಿಕ ಪ್ರವಾಳಂಗಳ್ ತೀವಿದ ಕಾಂಚೀದಾಮ ಕಟಿಸೂತ್ರ ಹೀರಾವಳಿ ಸುವರ್ಣವಳಿಯು ಪಟ್ರವರಳೋಲೆ ಪುಸ್ತಿ ಪಟ್ಟ ವೀರಮುಂಟಗೆ ಕೆಯ್ಯೂರ ಮುದ್ರಿಕೆ ಯುಂಗುರಂಗಳು ಚಂದ್ರಾಭರಣ ಭುಜಕೀರ್ತಿ ಕಡಗ ಕಂಠಮಾಲೆ ಒಂಟೆ ಸಿಂಬಳ ಚವ್ರಕಳೆ ಚಿನ್ನಸರ ಎಕಸರ ಪಂಚಸರ ತ್ರಿಸರ ಮುತ್ತಿನ ಉತ್ತರಿಗೆ ಮುಂಗೈಯ ಮುರಿ ಮುತ್ತಿನ ಹಕ್ಕಿಸರ ರನ್ನದುಂಗುರ ನವರತ್ನಂಗಳ್ ತೀವಿದ ಪೆಂಡೆಯಂ ಮೊದಲಾದ ಸಕಲಾ ಭರಣಂಗಳನಾ (೩–೧೧೧ ವ) ಹೀಗೆಯೇ ಮದನವಿಜಯರಾಯನ ಓಲಗದ ವರ್ಣನೆ ೪–೧೪ : ೮–೩೩೬ ; ಯಮಧರ್ಮನೊಡನೆ ಹೋದಟ ರೋಗದ ಪಟ್ಟಿಯನ್ನು ಕೊಡುವ ಗದ್ಯ ೫–೨೬ ವ; ೫-೧೧೮ರಲ್ಲಿ ಬರುವ ನರಕದ ವರ್ಣನೆಯನ್ನು ನೋಡಬಹುದು.

ನರಕದ ವರ್ಣನೆಯ ಸಂದರ್ಭವಂತೂ ಮಾದಣ್ಣನಿಗೆ ತನ್ನ ಕಾಲದ ಪಾಪಿಷ್ಠ ಗಳನ್ನು ಚಿತ್ರಿಸುವುದಕ್ಕೆ ಒಂದು ಉತ್ತಮ ಸಂದರ್ಭವಾಗಿದೆ. ಆತ ಕಟ್ಟಿ ಕೊಡುವ ಪಾಪಿಷ್ಠಗಳು ಹೀಗಿವೆ—

ಪಡುವಂ ತಿಱುವಂ ತುರಗಮು ವಸುಧಾಸುರರುಗಳ ಕೊಂದ ಪಾತಕರ್—
ಕಳವು ಸುಳಿ ಮಾಯಮ್ವಂ ಕೊಲೆಯುತಿಕಾಂಕ್ಷೆಗಳನೆಯ್ದೆ ಮಾಡಿದರ್—

ಹೆತ್ತರ ತನಗುಪದೇಶವನಿತ್ತರ ದುರ್ಭಿಕ್ಷದಲ್ಲಿ ಸಲಹಿದ ಪತಿಯುಂ ಮೃತ್ಯುವಿನ ಭಯವ
ಬಿಡಿಸಿದ ಕರ್ತರ ಮಱೆದನರ್—
ಸಾಲವಂ ಕೊಂಡು ತಿದ್ದದಿಹರ್—
ಕೋಡೆಯಂಗಳಂ ಪೇಳಿಯನರ್ಥದಿಂದೆ ಕೆಡಿಸಿದರ್—
ದೇಗುಲದೊತ್ತಿನಲ್ಲಿ ಸಲ್ಲೀಲೆಯಿಂ ತಂಬುಲಂಗಳನುಗುಳ್ದರ್—
ಕೇಶವ ಬಿಟ್ಟು ಕೂದಲಂ ಬೀಳಿಸುತಿರ್ಪಾಪಾತಕರ್—

ಧನಸೇನ ಸೆಟ್ಟಿ ತನಗೆ ಮೋಸ ಮಾಡಿದ ಹೆಂಡತಿಯನ್ನು, ಮೋಟನನ್ನು ರಾಜನ ಆಸ್ಥಾನದಲ್ಲಿ ತಿರಸ್ಕರಿಸಿದನಂತರ ಶೇಷಾಯುಷ್ಯವನ್ನು ಹೀಗೆ ಕಳೆದನು—

ಒಡೆಪ ತಟಾಕಮಂ ನುಜಿದ ದೇಗುಲಮಂ ಸಮುಗಟ್ಟಿ ಮತ್ತಮಂ
ಒಡಮರಿಗರ್ಥಮಂ ಕೊಡುತ್ತನೇಕ ಸುವರ್ಣ ಮಹಾನ್ನದಾನಮುಂ
ದೃಢಮನದಿಂಪ ಮಾಡುತಮನೀಸುರರಿಂಗೆ ವಿವಾಹಕರ್ಥಮಂ
ಕೊಡುತ ಸಮುಗ್ರಮುಪ್ಪಧನಮಂ ಸವೆದಂ ಧನಸೇನ ಮಾನನಂ || ೩–೯೦

ಮಾದಣ್ಣನ ವರ್ಣನೆಗಳಲ್ಲಿ ಸಹಜತೆ ಎದ್ದು ಕಾಣುತ್ತದೆ. ಆತನ ಸೂಕ್ಷ್ಮ ನಿರೀಕ್ಷಣಾ ಶಕ್ತಿ ಮತ್ತು ಸ್ವಭಾವೋಕ್ತಿ ಕಾವ್ಯದುದ್ದಕ್ಕೂ ಕಂಡು ಬರುತ್ತದೆ. ಐದನೆಯ ಸಂಧಿಯಲ್ಲಿ ಬರುವ ಬೇಟೆಯ ವರ್ಣನೆ ಮತ್ತು ಪಾತಕ ಸಾರ್ವನ ಕಥೆಯಲ್ಲಿ ಬರುವ ಕಳ್ಳನ ಚಿತ್ರಣಗಳು ಈ ಮಾತಿಗೆ ಉತ್ತಮ ನಿದರ್ಶನಗಳಾಗಿ ನಿಲ್ಲುತ್ತವೆ.

ಹುಲಿಯ ವರ್ಣನೆ—

ನೆಲದೊಳಡಗಿ ಕುಕ್ಕುಱಿಸಿ ಮುಂದಣ ಕಾಲ್ಗಳ ನೀಡಿ ಮೇಲೆ ತ
ತ್ತಲೆಯನಮ್ರಂಕಿ ಜೃಂಭಿಸುವ ಮುಕ್ಷಕಮುಂ ಚರಣಾಗ್ರದಿಂದವಂ
ತೋಗಿಸಿ ವಕ್ತ್ರಮುಂ ತಡಹುತಂ ಚರಿಸುತ್ತಿಹ ಬಾಲಮೊಪ್ಪಲಿ
ಕ್ಕೆಲಗಳ ನೋಡುತಂ ರಿಪು ವಿದಾರಣನಾ ಪುಲಿಯೊಪ್ಪೆ ರೌದ್ರದಿಂ || ೫–೨೯

ಹುಲಿಯನ್ನು ನಾಯಿಗಳು ಮುತ್ತಿದ ರೀತಿ—

ಬರುತ್ತಿರಲಿಂತು ಲುಬ್ಧಕರು ಗಾಳಿಯ ಬೆಂಬಳಿಯಿಂದಲೆಯ್ದಿ ಕು
ಕ್ಕುರಗಳು ವಾಸಿಸುತ್ತ ನೆಲನಂ ಬಿಲನಂ ದರಿಯುಂ ಪೊಗುತ್ತು ಮುಂ
ದಿರುತಿಹುದೊಂದು ಪೆರ್ಮೆಳೆಯ ಪೊಕ್ಕಿಹ ವ್ಯಾಘ್ರನ ಕಂಡವಲ್ಲಿ ಮು
ಕ್ಕಱಿಕಿದವಲ್ಲಿ ಘಳ್ಳಿಡುತ ಮುತ್ತಿದವಾ ಮೆಳೆಯುಂ ಮಹೋಗ್ರದೊಳ್ || ೫ ೩೯

ಬೇಟೆಯನ್ನು ಮುತ್ತಲು ನಾಯಿಗಳನ್ನು ಪ್ರಚೋದಿಸುವ ಶಬರ ಕುಲದ ಮಾತುಕತೆ—

ಹರಿದು ನಡೆ ಮೆಳೆಯೊಳಗೆ ಸೂ
ಕರವಜೆ ಬಿಡು ನಾಯನೊಳಗೆ ಹೊಕ್ಕಿಟಿಯೊಳಾಂ
ತಿಱಿಯೆಂಬ ಶಬರ ಕುಲದ
ಬ್ಬರವಂ ಕೇಳುತ್ತಲುಗ್ರನಾದುದು ವ್ಯಾಘ್ರಂ || ೫-೪೦

ಹುಲಿಯ ಆರ್ಭಟದಿಂದುಂಟಾದ ಬೇಡರ ಪರಿಸ್ಥಿತಿ—

ಘುಳುಘುಳಿಸುತ್ತ ಘೂರ್ಮಿಸುತ ಘರ್ಜಿಸುತೆಯ್ದೆ ಕಿರಾತವರ್ಗಮಂ
ತಲೆಯಂ ಕದುಂಕಿ ಕಾಲ್ಗಳನು ತೋಳ್ಗಳ ಮೆಟ್ಟಗಿಯುತ್ತಲಟ್ಟಲಾ
ಪುಲಿಯ ಮಹೋಗ್ರಕಂಜಿ ನಿಲಲಾಱದೆ ಬಿಲ್ಲು ಸರಳ್ಗಳಿಟ್ಟಿಯುಂ
ನೆಲಕೆ ಬಿಸಾಡುತೋಲಾಡಿದುದು ಎಣ್ದೆಸೆಗಾಗಿ ಕಿರಾತ ಸಂಕುಲಂ || ೫-೪೧

ಕಡುಗತ್ತಲೆಯಲ್ಲಿ ಕಳ್ಳತನಕ್ಕೆ ಹೊರಟ ಪಾತಕಪಾರ್ವನ ಮನೋಧರ್ಮ ಮತ್ತು ವೇಷ—

ನಡೆವಡೆ ದಾರಿಯನಾ ಮುಂ
ದಡಿಯಿಡೆ ಗುಳಿ ತೆವರನಿದಿರ ಕಾಣದೆ ತನ್ನಂ
ಬಿಡೆಸೋಂಕಿದವರನಱಿಯದೆ
ಕಡುಗತ್ತಲೆಯಲ್ಲಿ ಕಳುವುದಕೆ ಪೊಱಮಟ್ಟಂ || ೫-೪೨

ಎಡಬಲನ ನೋಡಿ ಮೆಲ್ಲನೆ
ನಡೆವುತ್ತಂ ಹಿಂದಮುಂದನಾರೈವುತ್ತಂ
ನಿಡುಸರ ಸುಳುಹಾಗಲ್ಕಂ
ದಡಗುತ್ತಂ ಪೋದಬೇಡನಾದಾಪಾರ್ವಂ || ೫-೪೩

ಹಿಡಿದಡೆ ಮುಷ್ಟಿಗೆಯ್ದುಸದ ಕೂದಲಿನಿಂ ಬಱಿನುಂಡೆ ಕೂಡೆ ಕೈ
ದುಡುಕೆ ಜಗುಳ್ದು ಬೇಗ ಬರುತಿಪ್ಪಡೆಗೋಣದಂಡೆವಾರ ಬ
ಲ್ಪಿಡಿದಡೆ ಕೊಂದು ಪೋಪ ಹಿಡಿಯುಂಬು ಸಮೇತದಿ ಬಂದನಂತನಂ
ನಡುವಿರುಳೂರ ಶೋಧಿಸಲು ಪಾತಕನಾ ಕುಲಗೇಡಿ ಘಾತಕಂ || ೫-೪೪

ವಚನ : ಮತ್ತಂ—

ಉಳಿ ಬಳೆ ಘಾಳಿಗಪ್ಪಡಮುದಾತೊಳನೋಡುವ ಕೋಲು ಪೊಯ್ವರಂ
ಮಳಲಿನಸುಗ್ರ ಮಂತ್ರದ ವಿಭೂತಿಯು ಮದ್ದಿನ ದೀಪವರ್ತಿಯುಂ
ತಳೆದು ಬರುತ್ತಲೂರ ಪೊಱದಾರಿಯೊಳೆಯ್ದುರಲೀಶದಿಕ್ಕಿನೊಳ್
ಗಳಿಭೆಯು ಕೇಳುತಂಜಿ ಪೋಗಲಮ್ಮದೆ ನಿಂದನು ಕಾಲ ಭೂಪತಿ || ೫-೪೫

ಇಲ್ಲಿ 'ಕಂಡಂತೆ ಘಟನೆಗಳನ್ನು ಒಂದೊಂದಾಗಿ ಕ್ರಮಕ್ರಮವಾಗಿ ಬೆಳೆಸಿಕೊಂಡು ಹೋಗುವ ಮಾದಣ್ಣನ ಶಕ್ತಿ ಮೆಚ್ಚುವಂಥದು. ಆತ ಪ್ರೇಮ ಪ್ರಸಂಗವನ್ನೇ ಆಗಲಿ, ಭಕ್ತಿಯುತ್ಕಟತೆಯನ್ನೇ ಆಗಲಿ, ಯಾವುದೇ ಸಂದರ್ಭವನ್ನೂ ಕೂಡ ಸಮರ್ಥವಾಗಿ ನಿಭಾಯಿಸುತ್ತಾನೆ. ಪರಿಸರ ಸೃಷ್ಟಿಯಲ್ಲಿ ಮಾದಣ್ಣನದು ಎತ್ತಿದ ಕೈ.

ಮಾದಣ್ಣನ ಕಾವ್ಯದಲ್ಲಿ ನಾಟಕೀಯತೆ ಪ್ರಧಾನವಾಗಿದೆ. ನಿರೂಪಣೆಯನ್ನು ಓದಿದ ಓದುಗನಿಗೆ ಇಂತಹ ಭಾಗಗಳು ಏಕತಾನತೆಯನ್ನು ಕಳೆದು ರಸಸ್ಯಂದಿಯಾಗಿವೆ. ಮದನವಿಜಯರಾಯನ ಕಥೆಯಲ್ಲಿ ಬರುವ ಹಕ್ಕಿಗಳ ಭಾಷೆಯನ್ನು ಕಲಿಸುವಂತೆ ಕೋರುವ ರಾಣಿ ಮತ್ತು ಅದನ್ನು ತಿರಸ್ಕರಿಸುವ ರಾಜನ ಸಂಭಾಷಣೆ ಹೀಗಿದೆ—

ಕಲಿಸೆಯ ವಿದ್ಯೆಯಂ ?
ಕಲಿಸೆನ್
ಏತಕೆ ?
ಸತ್ತಪೆ
ನೀನು ಸತ್ತಡಾನುಳಿವೆನು.
ಕೊಡೆ ನೀನುಳಿವಡೆನ್ನ ಸುಮಾಗಲದೆದ್ದು ಬಾಳ್ವುದೇ ?
ಕಲಿಸದೊಡಾನು ನಿನ್ನ ಮೊಗನೋಡದೆ ಮಾಣೆನು
ನೋಡದೆ ಮಾಣ್ !! ೪–೩೩

ಈ ಭಾಗವನ್ನು ಮಾದಣ್ಣ ಒಂದು ಚಂಪಕಮಾಲಾ ವೃತ್ತದಲ್ಲಿ ನಿರೂಪಿಸಿದ್ದಾನೆ. ಇಲ್ಲಿ ಬರುವ ಒಂದೊಂದು ಪದವೇ ಒಂದೊಂದು ವಾಕ್ಯದ ಕಾರ್ಯವನ್ನು ನಿರ್ವಹಿಸುವುದನ್ನು, ಕ್ರಿಯೆ ದ್ರುತಗತಿಯಲ್ಲಿ ನಡೆಯುವುದನ್ನು ಸೂಚಿಸುತ್ತದೆ.

ಮಗನ ತಿಂದ ಮಹಾರಾಜನ ಕಥೆಯಲ್ಲಿ ಒಂದು ಪ್ರಸಂಗ ಹೀಗಿದೆ. ಒಬ್ಬ ದಾಸೀ ಪುತ್ರನನ್ನು ಮಹಾರಾಜ ಸಂಕೇತಪೂರ್ವಕವಾಗಿ ನಿಂಬೆಯ ಹಣ್ಣನ್ನು ಕೊಟ್ಟು ಅಡಿಗೆ ಮನೆಗೆ ಕಳಿಸುತ್ತಾನೆ. ಅದನ್ನು ತಿಳಿಯದೆ ರಾಜಕುಮಾರ ಆ ನಿಂಬೆಯ ಹಣ್ಣನ್ನು ತೆಗೆದು ಕೊಂಡುಹೋಗಿ ಸಾವಿಗೀಡಾಗುತ್ತಾನೆ. ರಾಜಪುತ್ರ ಮತ್ತು ದಾಸೀ ಪುತ್ರರ ಸಂಭಾಷಣೆ—

ರಾಜಪುತ್ರ—" ಬಾರೆಲೊ ನಾವೀಗ ವೈಹಾಳಿಯ ಹೋಗಬೇಕು, ನೀನೊಳಗನ ಹಲ್ಲಣಿಸಿ ತಾ ಬೇಗ ಹೋಗು "

ದಾಸೀಪುತ್ರ—"ಈ ನಿಂಬೆಯಹಣ್ಣಂ ಸುವಾರದನ ಕೈಯಲಿ ಕೊಡವೇಳ್ದಟ್ಟಿದರ್ ಒಡೆಯರ್"

ರಾಜಪುತ್ರ—" ನಾಂ ಕೊಂಡು ಪೋದಪೆ ನೀ ಪೋಗು " ಎಂದು ರಾಜಪುತ್ರನು ಆತನ ಕಯ್ಯಲ್ಲಿದ್ದ ನಿಂಬೆಯ ಹಣ್ಣನ್ನು ಈಸಿಕೊಂಡನು.

ಇದೇ ರೀತಿ ಕಾವ್ಯದುದ್ದಕ್ಕೂ ಹಲವಾರು ಪ್ರಸಂಗಗಳು ಕಂಡುಬರುತ್ತವೆ. "ಇದ್ದುದನ್ನು ಹೇಳಿ ಗುದ್ದಿಸಿಕೊಂಡ ಹಾರುವನ ಕಥೆ" ಅತ್ಯಂತ ನಾಟಕೀಯವಾಗಿ ಸಾಗುತ್ತವೆ. ಓದುಗನ ಮನ ಸೆಳೆಯುತ್ತದೆ.

ಮಾದಣ್ಣನ ಕಾವ್ಯದ ಮತ್ತೊಂದು ಪ್ರಧಾನ ಲಕ್ಷಣ ದೇಸಿ. ನನ್ನಯ್ಯಚಾರಿತ್ರವಿಡೀ ಓದುಗನಿಗೆ ಅಪರಿಚಿತವಾಗಿ ಸಾಗುವುದೇ ಇಲ್ಲ. ಮಾದಣ್ಣ ಬಳಸುವ ಭಾಷೆ, ಹೇಳುವ ಭಾವ ಎಲ್ಲವೂ ಓದುಗನ ಮನಃಪಟಲದಲ್ಲಿ ತೀವ್ರ ಪರಿಣಾಮವನ್ನು ಬೀರುತ್ತವೆ. ಕವಿ ಎಂತಹ ಗಂಭೀರವಾದ ಸಂಗತಿಯನ್ನೂ ಕೂಡ ಸ್ಪಷ್ಟವಾಗಿ ನಿರೂಪಿಸುತ್ತಾನೆ. ಆ ದಿಸೆಯಲ್ಲಿ ಕಾವ್ಯದುದ್ದಕ್ಕೂ ಸಂಸ್ಕೃತದ ಕನ್ನಡದ ಲೋಕೋಕ್ತಿಗಳನ್ನು, ಗಾದೆಯ ಮಾತುಗಳನ್ನು ಬಳಸಿಕೊಂಡಿದ್ದಾನೆ. ಹಾಗೆ ನೋಡಿದಾಗ ಮಾದಣ್ಣನ ಜೀವನಾನುಭವ ಎಷ್ಟು ದೊಡ್ಡದು ಎಂಬುದು ತಿಳಿದುಬರುತ್ತದೆ. ಉದಾಹರಣೆಗೆ—

ಪಥಸೊಳ್ ಬರುತಿರೆ ಚೋರರ್ಗಂಜುವ ತೆಱದಿಂ ಪಿರಿಯರುಬರಲ್ಕದೇನಂಜುವರೇ|| ೧-೩೩
ಕೆಱೆಂದರಿಗಂ ಕೊಲೆಯುದು ಮುಳಿಸಿಂದಿಱಿವರಿಗೇಱು ತಪ್ಪದೆಂಬೀ ನಾಣ್ನುಡಿ || ೫-೩೭
ತಾ ಮಾಡಿತ್ತು ತನಗೆಂಬೀ ಮಾತಿನ ಫಲಮಂ ಕಂಡೆಂ || ೫-೩೪
ಬಿಟ್ಟವನ್ನೇಱಿ ಹೊಱಗೆ ಹೋಹ ಮಾರಿಯುಂ ಮನೆಗೆ ಬಾಯೆಂದು ಅತ್ಯಂತ ಪ್ರೀತಿಯಿಂ ಕೈವಿಡಿದು ಕರತಪ್ಪಂತೆ-
ನಿಸ್ಪೃಹಸ್ಯ ತೃಣಂ ಜಗತ್-
ಕಾಕತಾಳ ನ್ಯಾಯದಂತೆ ಘೃಣಾಕ್ಷರಚ್ಛಾಯದಂತೆ-

ಸೀರಿನಲ್ಲಿದ್ದ ಪುಷ್ಕಳೆಯ ಮನಸ್ಥಿತಿಯನ್ನು ಚಿತ್ರಿಸುವ ಈ ಗದ್ಯ ಮಾದಣ್ಣನ ದೇಸಿಗೆ ಒಂದು ಉತ್ತಮ ನಿದರ್ಶನ-

" ಅಕಟಕಟಾ ನಾನು ಮಹಾಪಾತಕಿತ್ತಿ
ಮೇಱುವ ಮೂಗಂ ನಚ್ಚಿ ಕಿಚ್ಚಂ ಕಾಯಿದಂತೆ
ಮಣ್ಣ ಕುಂಡೆಯುಂ ನಚ್ಚಿ ಹೊಳೆಯನ್ನೀಸುವಂತೆ
ಗೋವಿನ ಬಾಲಮಂ ಬಿಟ್ಟು ನಾಯ ಬಾಲಮಂ ಪಿಡಿವಂತೆ
ಪುಣ್ಯಮುಂ ಬಿಟ್ಟು ಪಾಪಕ್ಕೆ ಪೋಪಂತೆ
ಸ್ವರೂಪಂ ಬಿಟ್ಟು ಕುರೂಪಂಗೆಳಸಿದಂತೆ
ಮುಳಿಯ ನೀರಂ ನಚ್ಚಿ ಡೊಣೆಯ ನೀರಂ ಚೆಲ್ಲಿದವನಂತೆ
ದಂಡಿನ ಸೂಳೆಯುಂ ನಚ್ಚಿ ಮನೆಯೊಳಿರ್ದ ಪುಣ್ಯವಧುವಂ ಕೊಂದವನಂತೆ
ಮೇಲು ನೋಡವನಚ್ಚಿ ಬಾವಿಯೊಳುಚ್ಚಿಷ್ಟಂ ಗೈದವನಂತೆ
ನಾನು ಇಪ ಮರ್ಗಣಾಚಾರಿಯನ್ನೆನ್ನ ಗಂಡನಂ ಬಿಟ್ಟು [illegible]
ಬಂದು ಕೆಟ್ಟೆನೆಂದು ಮತ್ತಮಿಂತೆಂದಳೂ || [illegible]

ಈ ಭಾಗ ಮಾದಣ್ಣನ ಶೈಲಿಯ ಸುಭಗತೆಯನ್ನೂ, ಆತನ ಮನೋಧರ್ಮವನ್ನೂ ನಿಚ್ಚಳವಾಗಿ ತೋರಿಸುತ್ತದೆ. ಈ ಬಗೆಯ ದೇಸಿ ಮಾದಣ್ಣನ ಅಭಿವ್ಯಕ್ತಿಗೆ ಪೂರಕವಾಗಿ ನಿಂತಿದೆ.

ಹೀಗೆ ನಾನಾ ದೃಷ್ಟಿಕೋನಗಳಿಂದ ನೋಡಿದಾಗ ಮಾದಣ್ಣನಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ಉತ್ತಮ ಸ್ಥಾನವಿದೆ. ಆತ ಹರಿಹರಾದಿ ಕವಿಗಳ ಮಾರ್ಗದಲ್ಲಿ ನಡೆದ ಪಾಂಡಿತ್ಯ—ಪ್ರತಿಭೆಗಳ ಸಾಕಾರ ಮೂರ್ತಿಯಾಗಿದ್ದಾನೆ. ಕವಿ ಭಾಷೆಯನ್ನು ಅತ್ಯಂತ ಸಮರ್ಥವಾಗಿ ದುಡಿಸಿಕೊಂಡಿರುವ ರೀತಿ ಓದುಗನಿಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಆತನ ಕಾವ್ಯ ಸುಲಲಿತವಾಗಿದೆ. ಮಾದಣ್ಣನ ನನ್ನಯ್ಯ ಚಾರಿತ್ರದಲ್ಲಿ ಬರುವ ಕಥೆಗಳ ಸೊಗಸು ಕಾವ್ಯದ ಸೊಗಸು ಸಾಹಿತ್ಯಾಭ್ಯಾಸಿಗೆ ದೊರೆತ ಎರಡು ಉತ್ತಮ ಉಡುಗೊರೆಗಳು. ಜೈನಕವಿಗಳಲ್ಲಿ ನಯಸೇನನಿಗೆ ದೊರೆಯುವ ಸ್ಥಾನಕ್ಕೆ ಸರಿಸಮನಾದ ಸ್ಥಾನ ಮಾದಣ್ಣನಿಗೆ ವೀರಶೈವ ಕವಿಗಳಲ್ಲಿ ಸಲ್ಲುತ್ತದೆ. ನಯಸೇನನಿಗಿಂತ ಉದಾತ್ತ ಭಾವನೆಯನ್ನು ಮೆರೆದಿರುವುದು ಮಾದಣ್ಣನ ದೊಡ್ಡಸ್ತಿಕೆ. ಒಟ್ಟಿನಲ್ಲಿ ಮಾದಣ್ಣನಿಗೆ ಕನ್ನಡ ಕವಿಗಳಲ್ಲಿಯೂ ಆತನ ನನ್ನಯ್ಯ ಚಾರಿತ್ರಕ್ಕೆ ಕನ್ನಡ ಕಾವ್ಯ ಸಂಪ್ರದಾಯದಲ್ಲಿಯೂ ಒಂದು ಮನ್ನಣೆಯ ಸ್ಥಾನವಿದೆ.

ಮಾದಣ್ಣ ತನ್ನ ಕೃತಿಯನ್ನು ಕುರಿತು ಹೇಳುವ—

ಕೃತಿಪೊಸತಾದಡೇನದಕೆ ಕುಂದೆ ಮಹಾರಸವರ್ಥ ಭಾವ ಪ
ದ್ಧತಿ ರಚನೋಕ್ತಿ ಪ್ರಾಸ ಪದ ಕೋಮಲವಾಕ್ಯ ಸುಮಾರ್ಗ ಭಕ್ತಿಯು
ನ್ನತಿಯಿವು ತಪ್ಪದೊಪ್ಪಿರಲು ಸಾಲದೆಯಂತದ ನೋಡಿ ಸತ್ಕವಿ
ಪ್ರತತಿಗಳೆಲ್ಲದೆ ಮೆಚ್ಚುವುದು ನ್ಯಾಯಸಮಂ ನೆಱೆ ಬಲ್ಲ ಸೂಜಿಗಳ್ ॥ ೧—೨೬

ಎನ್ನುವ ಮಾತಿಗೆ ಓದುಗ ಸಮ್ಮತಿಯ ತಲೆದೂಗುತ್ತಾನೆ.

ಹಸ್ತಪ್ರತಿಗಳ ವಿವರ

ನನ್ನಯ್ಯ ಚಾರಿತ್ರವನ್ನು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದೆ. ಆ ಪ್ರತಿಗಳ ವಿವರ ಈ ರೀತಿ ಇದೆ.

ಕ : ಓಲೆಯ ಪ್ರತಿ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಕ್ರಮಸಂಖ್ಯೆ ಕೆ. ೩೩೩. ೧—೧೮೫ ಪತ್ರಗಳಿವೆ. ಪ್ರತಿಯ ಉದ್ದ ೨೬—೫ ಸೆಂ. ಮೀ. ಅಗಲ ೪—೫ ಸೆಂ. ಮೀ. ಪ್ರತಿಪತ್ರದಲ್ಲಿ ಸರಾಸರಿ ೧೦ ಪಂಕ್ತಿಗಳಿವೆ. ಪ್ರತಿ ಪಂಕ್ತಿಯಲ್ಲಿ ಸರಾಸರಿ ೬೦ ಅಕ್ಷರಗಳಿವೆ. ಕಟ್ಟಿನ ಮೊದಲಿನಲ್ಲಿ ೭ ಗರಿಗಳಲ್ಲಿ ಕೋಲಾಟದ ಪದಗಳಿವೆ. ಕಟ್ಟಿನ ೧—೭ಳ ಗರಿಗಳಲ್ಲಿ ಭೈರವೇಶ್ವರನ ಕಾವ್ಯವಿದ್ದು ಕಡೆಯಲ್ಲಿ ಶ್ರೀ ವಿಕ್ರಮ ಸಂವತ್ಸರದ ಮಾಗ ಶು ೧ ಲ್ಲು ೨ಮೋಳಿಗಯ್ಯ ಬರದ ಭೈರವೇಶ್ವರನ ಕಾವ್ಯ ಸಮಾಪ್ತ ಮಂಗಳ

ಮಹಾ ಶ್ರೀ ಶ್ರೀ ಎಂದಿದೆ. ೭೫ನೆಯ ಗರಿಯಿಂದ ೧೮೫ನೆಯ ಗರಿಯವರೆಗೆ ಸನ್ಯಾಸಿಗಳ ಚಾರಿತ್ರವಿದೆ. ಕಡೆಯ ಗರಿ ಇಲ್ಲದಿದ್ದುದರಿಂದ ಅಸಮಗ್ರವಾಗಿದೆ. ಪ್ರತಿಯ ಸ್ಥಿತಿ ಚೆನ್ನಾಗಿದ್ದು ಸಾಕಷ್ಟು ಶುದ್ಧವಾಗಿದೆ. ಇದರಿಂದ ಮುದ್ರಣಪ್ರತಿಯನ್ನು ಸಿದ್ಧಗೊಳಿಸಿದೆ.

ಗ: ಓಲೆಯ ಪ್ರತಿ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಕ್ರಮಸಂಖ್ಯೆ ಕೆ. ೧೯೬. ೧-೧೪೦ ಪತ್ರಗಳಿವೆ. ಪ್ರತಿಯ ಉದ್ದ ೨೮ ಸೆಂ. ಮೀ. ಅಗಲ ೪ ಸೆಂ. ಮೀ. ಪ್ರತಿ ಪತ್ರದಲ್ಲಿ ಸರಾಸರಿ ೮ ಪಂಕ್ತಿಗಳಿವೆ. ಪ್ರತಿ ಪಂಕ್ತಿಯಲ್ಲಿ ಸರಾಸರಿ ೪೮ ಅಕ್ಷರಗಳಿವೆ. ೩, ೧೯, ೨೯, ೪೧, ೪೫ನೆಯ ಪತ್ರಗಳಿಲ್ಲ, ಈ ಪ್ರತಿಯೂ ಶುದ್ಧವಲ್ಲ. ಅಲ್ಲಲ್ಲಿ ಹುಳುಗಳು ಹೊಡೆದು ತ್ರುಟಿತವಾಗಿದೆ.

ಚ : ಕಾಗದದ ಪ್ರತಿ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಕ್ರಮಸಂಖ್ಯೆ ಕೆ. ಬಿ. ೧೫೩. ಪ್ರತಿಯ ಉದ್ದ ೧೮-೫ ಸೆಂ. ಮೀ. ಅಗಲ ೧೫-೫ ಸೆಂ. ಮೀ. ೧-೧೫೬ ಪತ್ರಗಳಿವೆ. ಪ್ರತಿ ಪತ್ರದಲ್ಲಿ ಸರಾಸರಿ ೧೨ ಪಂಕ್ತಿ. ಪ್ರತಿಪಂಕ್ತಿಯಲ್ಲಿ ಸರಾಸರಿ ೧೮ ಅಕ್ಷರಗಳಿವೆ. ಮದನವಿಜಯರಾಯನ ಕಥೆಯಿಂದ ಸಾನಂದ ಚರಿತೆಯ ಸ್ವಲ್ಪ ಭಾಗದವರೆಗೆ ಕಾವ್ಯಮಧ್ಯದಲ್ಲಿ ಲುಪ್ತವಾಗಿದೆ. ಕಡೆಯಲ್ಲಿ ಪಂಚಾಕ್ಷರಿಯ ಮಂತ್ರದ ಮಹಿಮೆಯವರೆಗಿದೆ.

ಡ : ಕಾಗದದ ಪ್ರತಿ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಕ್ರಮಸಂಖ್ಯೆ ಕೆ. ಎ. ೩೬೮. ಪ್ರತಿಯ ಉದ್ದ ೨೯ ಸೆಂ. ಮೀ ಅಗಲ ೨೩.೫ ಸೆಂ. ಮೀ ೧-೩೩೩ ಪುಟಗಳಿವೆ. ಪ್ರತಿ ಪುಟದಲ್ಲಿ ಸರಾಸರಿ ೨೦ ಪಂಕ್ತಿ. ಪ್ರತಿ ಪಂಕ್ತಿಯಲ್ಲಿ ಸರಾಸರಿ ೧೮ ಅಕ್ಷರಗಳಿವೆ.

ಈ ಪ್ರತಿಯಲ್ಲಿ ಗ್ರಂಥಲೋಪ ಬಹಳವಿದೆ. ಮದರಾಸು ಪ್ರಾಚ್ಯಭಾಂಡಾಗಾರದಿಂದ ಕನ್ನಡ ಅಧ್ಯಯನ ಸಂಸ್ಥೆಗೆ ಬಂದಿರುವ ಈ ಪ್ರತಿಯ ಕಡೆಯಲ್ಲಿ " Restored for this library from the original manuscript of No. 18-23-9" ಎನ್ನುವ ಬರಹವಿದೆ.

ಜಿ. ಜಿ. ಮಂಜುನಾಥನ್.

ಮಾದಣ್ಣಾಂಕನ ಗುರು

ಚೆನ್ನಮಲ್ಲಿಕಾರ್ಜುನನ ಸ್ತುತಿ

ನನ್ನಯ್ಯ. . . . .
. . . . .ದಿ ಮಾದಣ್ಣಾಂಕನೇನು ಕೃತಾರ್ಥ
. . . .
. . . . .ಕಾಮಿತಜನ ಸುರತರುವಾ || ೧

. . . .
. . . . .ವನೆ ನೋಡು
ಕಮನೀಯರೂಪನೊಂದಿರವಾ
ವಿಮಲಾಂಗನು ಚೆನ್ನಮಲ್ಲಿಕಾರ್ಜುನ ಸದ್ಗುರುವಾ || ೨

ಸಾಗರಗಂಭೀರ ಸುಗುಣನೆನಿಸಿ ರಾಜಿಪನಾ
ಶ್ರೀಗುರುಮೂರ್ತಿ. . . . .ನ ಪಾಪಕ್ಷಯನಾ
ರಾಗದೊಳರ್ಚಿಪ ಭಕ್ತರ ಭವಭಯಹರನಾ
ಯೋಗಮೋಕ್ಷಗಳೆಂಬಿಹ ಪರಸೌಖ್ಯ ಸಂಪದನಾ || ೩

ಮಂಗಳಮಯ. . . .ದ್ರಾಕ್ಷಾವಳಿಯ
ಹಿಂಗದೆ ಧರಿಸಿ ಮಂತ್ರದಮಾತೆ ಪಂಚಾಕ್ಷರಿಯಂ
ತುಂಗಸುಂತ್ರೋಚ್ಚಾರಣೆಯಿಂದ ಲಿಂಗಾರ್ಚನೆಯಾ
. . . . . .ತ್ರವನಿಯೊಳು ಮೆಱೆದಿದ ಶಿವಸುಖಿಯಾ || ೪

ಗುರುಮೂರ್ತಿ ಪುಷ್ಪಗಿರಿಯ ಚೆನ್ನಮಲ್ಲೇಶ್ವರನು
ಕರಕಮಲೋದಯನಾದನುಪಮ ಗುಣಯುತ
. . . .ಹಿತ ಸತ್ಪಾತ್ರದಾನಂಗಳೊಳತಿಹಿತನಾ
ನಿರುಪಮ ಚೆನ್ನಮಲ್ಲಿಕಾರ್ಜುನ ಗುರುಭೂಸುತನ || ೫

ನನ್ನಯ್ಯಗಳ ಚಾರಿತ್ರ

ಕಥಾಗರ್ಭಪ್ರಕರಣಂ

[1]ಶ್ರೀ ಸ್ವಾ[1]ಮ್ಯ[2]ಗಳ[2] ಚಾರಿತ್ರವೆಂಬುದು[3] ಪರಮಾರ್ಥವ[3]ಲ್ಲದೆ ಲೌಕಿಕ[4]ವಲ್ಲವು ದೆಂತೆನೆ[4]—

ಮುನ್ನ [5]ಪರಬ್ರಹ್ಮಸ್ವಾಮಿಯೆಂ[5]ಬ [illegible] ಪುರುಷನ [illegible][6]ಲ[6] ದೊಳುದ್ಭವಿಸಿದ ಕ[7]ರ್ಣಿಕೆ[7]ಯೆಂಬ ಪಟ್ಟಣಕ್ಕೆ ಮೂಲಾಧಾ[8]ರ[8]ಪ್ಪುದರಿಂ ಆಧಾರವೆಂಬ ಕೋಟೆಯಿಂ [9]ದೃಢ[9]ಪ್ಪುದರಿಂ ಸ್ವಾಧಿಷ್ಠಾನವೆಂಬ ಭೂಸ್ಥಳದಲ್ಲಿ ಮಾಡಿದ [10]ಪ್ರೊ[10]ಗೆಲಸದ ಮನೆಯಿಂ [11]ಕ್ಷತವಿಲ್ಲದುದರಿಂ ಅ[11]ನಾಹತವೆಂಬ ಪ್ರಧಾನನಿಂ ವಿಲಗವಿಲ್ಲದುದರಿಂ [12]ವಿ[12]ಶುದ್ಧಿಯೆಂಬ ಕರಣಿಕನಿಂ ಆಜ್ಞಾ[13]ಧಾರ[13]ಪ್ಪುದರಿಂ ಆಜ್ಞೆ[14]ಯೆಂ[14]ಬ ಪುರರಕ್ಷಕನಿಂ ರೇಚಕ[15]ವೆಂ[15]ಬ ದೇಶದಿಂ ಪೂರಕ[15]ವೆಂ[15]ಬ ಕೋಶದಿಂ ಕುಂಭಕ[15]ವೆಂ[15]ಬ ದುರ್ಗದಿಂ ನವದ್ವಾರವೆಂಬ ಬಾಗಿಲುವಾ[16]ಡದಿಂ[16] ಅಷ್ಟದಳವೆಂಬ ದಳವಾಡದಿಂ ಮನಸಂ ನೆಲೆಗೊಳಲೀಯದೆ ಎತ್ತಲಾನುಂ ಪರಿವ ಪ್ರಾಣ [17]ಅ[17]ಪಾನ ವ್ಯಾನ ಉದಾನ ಸಮಾನ ನಾಗ ಕೂರ್ಮ [18]ಕೃಕರ[18] ದೇವದತ್ತ ಧನಂಜಯ[19]ವೆಂಬ[19] ದಶವಾಯುಗ[20]ಳೆನಿಪ ದಳಪತಿಗಳಿಂ[20] ಮನಸಂ ನೆಲೆಗೊಳಲೀಯದೆ ಮನ ಬುದ್ಧಿ ಚಿತ್ತ ಅಹಂಕಾರ[21]ವೆಂಬ[21] ಅಂತಃಕರಣಚತುಷ್ಟಯವೆಂಬ ಸಂಧಿವಿಗ್ರ[22]ಹರಿಂ[22] ಯಮ ನಿಯ[23]ಮ ಆ[23]ಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾ[24]ಧಿಯೆಂಬ[24] ಅಷ್ಟಾಂಗಯೋ[25]ಗವ್ರ[25]ಳ್ಳುದರಿಂ ಯೋಗ[26]ವೆಂಬ ಕೂಟ[26]ಕ್ಕೆ ಹೆಸರಾದ ಕಾರಣ ಕರಹ ನೆರಹಕ್ಕೆ ಒದಗುವ ಮನ್ನೆಯ ರಾಜಪುತ್ರ[27]ರಿಂ[27] ಮತ್ತಂ ರಾಜಯೋಗ [illegible]ಯೋಗ ಲಕ್ಷ್ಯಯೋಗ ಹಠಯೋಗವೆಂಬ ಗಜ ಅಶ್ವ ರಥ ಪದಾತಿ ಮುಖ್ಯವಾದ

---

[1] [illegible] (ಗ ಚ) [2] [illegible] (ಗ)[3] [illegible]ರ್ಥವು (ಚ) [4] [illegible] (ಕ ಗ) [5] [illegible] (ಗ ಚ) [6] [illegible] (ಚ) [7] [illegible] (ಗ) [8] [illegible] (ಗ ಚ) [9] [illegible] (ಗ) [10] [illegible] (ಗ) [11] ಅ (ಗ) [12] [illegible] (ಗ) [13] [illegible] (ಗ) [14] [illegible] (ಗ ಚ) [illegible] [15] [illegible] (ಗ ಚ) [16] [illegible] (ಗ ಚ) [17] [illegible] [18] [illegible] [19] [illegible] (ಗ) [illegible] (ಚ) [20] [illegible] (ಗ ಚ) [illegible] (ಗ) [21] [illegible] (ಗ) [illegible] [22] [illegible] (ಚ) [23] [illegible] (ಗ ಚ) [24] [illegible] (ಕ ಚ) [25] [illegible] (ಗ ಚ) [26] [illegible] (ಗ) ಮೆಂಬುದು ಕೂಟಕ್ಕೆ (ಚ) [27] ರುಗಳಿಂ (ಗ ಡ)

ಚಾತುರ್ವರ್ಗಲ ಸಮಗ್ರ[1]ದಿಂ[1] ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಎಂಬ ಶಕ್ತಿತ್ರಯದಿಂ ಜ್ಞಾತೃ ಜ್ಞಾನ ಜ್ಞೇಯವೆಂಬ ಪಟ್ಟದರಸಿಯರಿಂ ಸತ್ತು ಚಿತ್ತು ಆನಂದ[2]ವೆಂಬ ಸಂಪೂರ್ಣ[2] ಪುತ್ರರುಗಳಿಂ ಇಂತು ಸ[3]ಕಲ[3] ರಾಜಲಕ್ಷಣ ಸಂಪೂರ್ಣದಿಂ ಪುಸಭಾವದ ನೆ[4]ವಸೆಂಯೆನಿಪ[4] ಪೃಥ್ವೀಮಂಡಲ ಮಧ್ಯದ ಕರ್ಣಿಕಾಪುರವೆಂ[5]ಬ ರಾಜಧಾನಿಗೆಯಧಿಪತಿಯಾಗಿ ಸುಜ್ಞಾನವೆಂಬ[5] ಚಕ್ರೇಶ್ವರಂ ನಿಷ್ಕಳಂಕ ನಿ[6]ರಾಶ್ರಯವೆಂ[6]ಬ ಸಮ್ಯಜ್ಞಾನ ಸಾಮ್ರಾಜ್ಯವನಾಳುತ್ತಮಿರಲಿತ್ತ ಕಲ್ಯಾಣವೆಂಬ ಕೈಲಾಸದಲ್ಲಿಹ ದ್ವಿತೀಯ ಶಂಭುನಾಮಧೇಯ[7]ನ[7]ಪ್ಪ ಬಸವರಾಜನೆಂಬ ಮಹೇಶ್ವರರು ಭಕ್ತ[8]ಮಹೇಶ್ವರರ[8] ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯರೆಂಬ ಪ್ರಮಥಗಣಂಗಳೆಂಬವರಂ ದರ್ಶನಂ ಮಾಡಿ [9]ಸುಪಥವ[9]ನೆಯ್ದುವೆನೆಂದು ಪೋಪ ಸುಜನ ಸುಮಾರ್ಗಿಗಳನಡೆಯಾಡಲೀಯದಡ್ಡಗಟ್ಟಿ ಪಿಡಿದು ಜಡಿದು ಸೆಳೆದು ಕಡಿದು ಬಿ[10]ಸುಡು[10]ತಿಪ್ಪವರ್ಗೆ ಆಶ್ರಯವಾಗಿಹ ಅಜ್ಞಾನ[11]ನೆ[11]ನಿಪ ಅರಸು ಆ ಘೋರಾರಣ್ಯ ಮಧ್ಯನೆಂಬ ದೇಶದಲ್ಲಿ ದುರ್ಗತಿಯೆಂಬ ಪಟ್ಟಣಕ್ಕೆ ಕಾಮವೆಂಬ ಕೋಂಟೆಯಿಂ ಕ್ರೋಧವೆಂಬ ಅಗಳಿನಿಂ ಲೋಭವೆಂಬ ಭೂಸ್ಥಲದಿಂ ಮೋಹವೆಂಬ ಅರಮನೆಯಿಂ ಮದವೆಂಬ ಪ್ರಧಾನನಿಂ ಮಚ್ಚರವೆಂಬ ಕರಣಿಕರಿಂ ಕುಲ ಛಲ ರೂಪು ಯವ್ವನ ವಿದ್ಯ ಧನ ರಾಜ್ಯ ತಪವೆನಿಪ ಅಷ್ಟಮದಾಂಗ[12]ಳೆನಿಪ[12] ಪುರಜನಂಗಳಿಂ ಆಣವ ಮಾಯೆ ಕಾರ್ಮಿಕವೆನಿಪ ಮಲತ್ರಯಂಗಳೆಂಬ ದೇಶ ಕೋಶ ದುರ್ಗಂಗಳಿಂ ಅ[13]ಸೆ[13] ಆಮಿಷ ತಾಮಸ ಹುಸಿ ವಿಷಯ ಹರುಷ ವಿಷಾದವೆಂಬ ದಳವಾಡದಿಂ ವಾಕು ಪಾಣಿ ಪಾದ ಪಾಯು ಗುಹ್ಯ[14]ವೆಂಬ[14] ಕರ್ಮೇಂದ್ರಿಯಂಗ[15]ಳೆನಿಪ[15] ದಳಪತಿಗಳಿಂ ದ್ಯೂತ ಮಾಂಸ ಸುರೆ ವೇಶ್ಯಾಗಮನ ಕಳವು ಪಾರದ್ವಾರ [16]ಹತ್ತ್ಯ ದೋಷವೆನಿಪ[16] ಸಪ್ತವ್ಯಸನಂಗ[17]ಳೆನಿಸಿದ[17] ಕೂಟದನಾಯಕರಿಂ ದುರ್ಗುಣ ದುರಾಚಾರ ದುಶ್ಚರಿತ್ರ ದುರ್ಬೋಧೆಯೆನಿಪ ಗಜ ಅಶ್ವ ರಥ ಪದಾತಿ ಸಮಂತದ ಚಾತುರ್ಬಲ ಸಮ[18]ಗ್ರ[18]ದಿಂ ಅಶ್ವೇತಿ ಬ್ರಹ್ಮೇತಿ ಗೋ[19]ವಧೆ[19] ಶಿಶು[19]ವಧೆ[19] ಸ್ತ್ರೀ[19]ವಧೆ[19] [20]ಎಂಬ[20] ಪಂಚಮಹಾಪಾತಕಂಗ[21]ಳೆ ತನಗೆ[21] ಮಿತ್ರವರ್ಗವಾಗಿ ಆಧಿಭೌತಿಕ ಆಧಿದೈವಿಕ ಆಧ್ಯಾತ್ಮಿಕವೆಂಬ ತಾಪತ್ರಯಂಗಳೆ ಸಂಧಿಕಾರರಾಗಿ ಬಹುಮಾಲೆಯೆಂಬ ಸತಿಯ [22]ಬೆಸಗೆ ಪ[22]ಟ್ಟದರಸಿಯಾಗಿ ಇಂತು ಸಕಲ ಪಾಪದ ಸಾಮ[23]ತ್ರಿ[23]ಗೆ ಅಧಿನಾಯಕನಾಗಿ ಪಾಪವೆ ಮೆಯ್ಗೊಂಡ ಮಾತಂಗತನವೆಂಬರಸಂ ಮಾಡುವ ಉದ್ದಂಡತನಮಂ ಸರ್ವಜೀವ ದಯಾಪರರಪ್ಪ ಸುಜ್ಞಾನಾಧೀಶ್ವರಂ[24] ಕರ್ಣಪಾರಂಪರೆಯಿಂ ಕೇಳ್ದು ಅತ್ಯಂತ ಕೋಪಾರೂಢನಾಗಿ ಸಕಲಬಲ ಸಮೇತಂ ಶುಭದಿನ ಸುಮುಹೂರ್ತ ಶುಭಲಗ್ನದೊಳು

---

[1] [illegible] (ಗ ಚ) [illegible] (ಕ) [2] [illegible] (ಗ ಚ) [3] [illegible] (ಕ) [4] [illegible] (ಗ) [illegible] (ಚ) [5] [illegible] (ಕ ಚ) [6] [illegible] (ಗ ಚ) [7] [illegible] (ಗ ಚ) [8] [illegible] (ಗ) [9] [illegible] (ಗ ಚ) [10] [illegible] (ಗ ಚ) [11] [illegible] (ಗ) [12] [illegible] (ಚ) [13] [illegible] (ಚ) [14] [illegible] (ಗ) [15] [illegible] (ಚ) [16] [illegible] (ಚ) [17] [illegible] (ಗ ಚ) [18] [illegible] (ಗ) [19] [illegible] (ಚ) [20] [illegible] (ಗ) [21] [illegible] (ಕ ಚ ಗ) [22] [illegible] (ಕ ಗ) [23] [illegible] (ಚ) [24] [illegible] (ಗ)

ಪ್ರಯಾಣೋದ್ಯುಕ್ತನಾಗಿ [1]ಹೊ[1]ಱಬೀಡಂ ಬಿಟ್ಟು ಕೀರ್ತಿಯೆಂಬ ಪ್ರಯಾಣ ಭೇರಿಯಂ [2]ಪೊಯಿ[2]ಸಿ ಪಯಣಗತಿಯಿಂ ನಡೆದು ಬಂ[3]ದು ಮಾ[3]ತಂಗತನುನಿರ್ದ ದುರ್ಗತಿಯೆಂಬ ದೇಶಮಂ ಸುಜ್ಞಾನನೆಂಬ ಪರಿವಾರಕ್ಕೆ ಸೂಱೆಯಂ[4]ಬಿ[4]ಟ್ಟು ದುರ್ಗ[5]ಮಂ[5] ನಿ[6]ಗ್ರಂ[6]ಗೊಂಡು ಅಗಳಂ ಬಗೆಯದೆ ಕೋಟೆಯಂ* ಪಾಱಿ[7]ಸದೆ[7] ಆ ಪುರ ಜ[8]ನಂ[8]ಗಳ ಹರಣಂಗೊಂಡು ಬಲಮಂ ಹೊಲಬುಗೆಡಿಸಿ ದಳಪತಿಗಳ ಬ[9]ಲಮಂ[9] ಮುಱಿದು ಮಂತ್ರಿಗಳನಂತಕನಗರಕ್ಕೆ ಕಳುಪಿ ಸರ್ವಬಲದುರ್ಬಮಂ ತಗ್ಗಿಸಿ ಸುಜ್ಞಾನಾಧೀಶ್ವರನ ಬಲದುರವಣೆ[10]ಗೆ[10] ತರಹರಿಸಿ ನಿಂದು ಮಾತಂಗ ತಮಂ ಹರಿಹಂಚಾದ ಬಲಮಂ [11]ಕಱೆ[11]ಗಟ್ಟಿಸಿ ಹರಿವ ಸೇನೆಯುಂ [12]ನೆರಹಿಕೊಂಡು ಇ[12]ನ್ನಿದಿರಾಗಿ ಕಾದಿ ಬಲಮಂ ನೋಯಿಸಬಾರದೆಂದು ಭೇದತಂತ್ರದಿಂ ಸುಜ್ಞಾನಿಗಳು ತಮ್ಮ ಬಲವನೆಲ್ಲಮಂ ಐಕ್ಯಮಂ ಮಾ[13]ಡಿ[13] ವಂಚನೆಯಿಂದೊಳಪೊಕ್ಕು ಮಾತಂಗತಮನ ಕೈವಶ[14]ಮಂ ಮಾಡಿಕೊಂಡು[14] ವೇದ ಪುರಾಣ ಶಾಸ್ತ್ರ ಶ್ರುತ ದೃಷ್ಟ ಅನುಮಾನ ಪುರಾತನಚಾರಿತ್ರವೆಂಬ ಸಂಧಿಕಾಱರಿಂದವನಂ ಬೋಧಿಸಿ ತಿಳಿಪಿ [15]ಆಱು[15]ವರ್ಗಮಂ ಹಾರಿಸಿ ಎಂಟುಮದದ ಗಂಟಲಂ ಕೊಱೆದು ವ್ಯಸನಂಗ[16]ಳೇ[16]ಳಂ ಹೊಸಮುಬಿಸುಟು ಬಹುಮಾಲೆಯೆಂಬ ಸತಿಯು ಉನ್ಮತ್ತನೆಂಬ ಮುತ್ತುಗಂಗೆ ಕೊಡಿಸಿ ಆ ಮಾತಂಗತಮನಂ ಪಿಡಿದು ಶೋಷಣವೆಂಬ ಆಯುಧದಿಂ ಹತಮಾಡಿ ದಹನನೆಂಬ ಅಗ್ನಿಯಿಂದ ದಹಿಸಿ [17]ಪ್ಲಾ[17]ವನವೆಂಬ ಸಂಜೀವನದಿಂಪೆತ್ತಿ ಶುದ್ಧಾತ್ಮನಂ ಮಾಡಿ ಅವನ ಮನದಲ್ಲಿ ಸುಜ್ಞಾನ [18]ದೃಢಮಂ[18] ನೆಲೆಗೊಳಿಸಿ ಉಪದೇಶಮಂ ಮಾಡಿ ಪರಶಿವನ ಮೂರ್ತಿಯಂ ಕರತಳದೊಳಿರಿಸಿ ತೋಱಿಸಿಕೊಟ್ಟು ಪೂರ್ವನಾಮವಳಿದು ನನ್ನಪ್ಪನೆಂಬ ಹೆಸರನ್ನಿಟ್ಟು ಆ ನನ್ನಪ್ಪನ ಮನದ [19]ದೃಢಮಂ[19] ಭಕ್ತಿಯ ದೃಢಮಂ ಅಱಿಯಬೇಕೆಂದು ಆ ನನ್ನಪ್ಪನ [20]ಪುಷ್ಪ ಜ[20]ಲ ಫಲಮಂ ತರನೇಳ್ದು ಕಾಂತಾರಕ್ಕೆ ಕಳುಪಿ ಆತನಂ ವಂಚಿಸಿ ಅನುರಾಗತಿಯ ಕೌಶಿಕನೆಂಬ ಇಂದ್ರನಾಧೀನನಾಗಿ ಸುಜ್ಞಾನಿಗಳು ತಸ್ಕರರ ನೆಪದಿಂ ತಮ್ಮ ಮಸ್ತಕನ ಮಱೆ ಮಾಡಿ[21]ದರು ಇ[21]ತ್ತಲಾ ನನ್ನಪ್ಪಂ ಫಲ ಜಲ [22]ಪುಷ್ಪಸ[22]ಹಿತಂ ಬಂದು ಶಿರತೊಲಗಿರ್ದ ಶರೀರಮಂ ಕಂಡು ಹಂದೆಯಂ ಪಾಪಡರ್ವಂತೆ ಪಡೆದ ಧನಮಂ ಕೆಡಿಸಿದವನಂತೆ[23]ಬೆಂದಹುಣ್ಣಿಂ ಕಂಬಿಯನ್ನಿಕ್ಕಿಸಿದವನಂತೆ ಮನಂ[23]ನೊಂದು ಹಮ್ಮೈದಂಬೋಗಿ ಹಲುಂಬಿ ಹಳಹಳಿಸಿ ಪರಮೇಶ್ವರಂಗೆ ನೊಱೆಯಿಟ್ಟು ಮುಸಿಮು ಮುಬ್ಬಿಸಿ ದೈನ್ಯವಚನದಿಂ ಬಿನ್ನಪಂಗೈದು ತನ್ನ ದೇಹದಭಿಲಾಷೆಯಂ ಬಿಟ್ಟು ಶಿರಸ್ಸನರಿದುಕೊಳಲುದ್ಯುಕ್ತನಾದ ನನ್ನ[24]ಪ್ಪನ[24] ಮನದ

[1] ಪೊ (ಗ) [2] ಹೊಸ (ಗ) [3] ದು ಆ (ಚ) [4] ಕೊ (ಗ) [5] ತಿಯಂ (ಕ ಚ ವ) [6] ಗ್ರಮಂ (ಚ) [7] ವಾಸದೆ (ಚ) [8] ನನಂ (ಕ) [9] ಉಪಮಂ (ಚ) [10] ಯುನಾಂತು (ಚ) [11] ಕೆಱಿ (ಚ) [12] ಅ (ಚ) [13] ರಿಸಿ (ಕ) [14] ಮಾಗಿ (ಚ) [15] ಅರಿಷಡ್ (ಚ) [16] ಳಂ (ಚ) [17] ಪ್ಲಾ (ಚ) [18] ಮಂ ದೃಢವಾಗಿ (ಚ) [19] ದೃಢಭಕ್ತಿಯುಪಸ (ಚ) [20] ಜ (ಚ) [21] ರಿ (ಚ) [22] ಸ (ಚ) [23] ಮನಂ (ಕ ವ) [24] ಪ್ಪನ (ಚ)

*ಅಲ್ಲಿಂದ (ಗ) ಪ್ರತಿಯಲ್ಲಿ ಒಂದುಗರಿಇಲ್ಲ.

ನಿರ್ಧಾರಿತಮಂ ಶಿವಪ್ರಸಾದನಭೇದ್ಯನಗಣಿತನನುಪಮನತರ್ಕ್ಯನಪ್ಪ ಮುದ್ರಾಪುರಾಧೀಶ್ವರಂ ಪ್ರಸನ್ನರಾಮೇಶ್ವರ[1]ಲಿಂಗನಿಜ[1]ದು ಮುಚ್ಚುವೊಚ್ಚತ[2]ವೋ[2]ಗಿ ಅಶರೀರವಾಕ್ಯದಿಂಯಾಶರೀರಕ್ಕೆ ಮೃತ್ತಿಕೆಯ ಶಿರಸ್ಸಂ [3]ಸೇ[3]ರಿಸಿ ಪ್ರಾಣಮಂಕೊಟ್ಟು ಆ ಶಿರಸ್ಸಿಂಗೆ [4]ಮೃತ್ತಿಕೆಯ ದೇಹಮುಂ[4] ಸೇರಿಸಿ ಜೀವಂ ಬಂದುಮಾತಿರಸ್ಸಿನ ದೇಹಮುಂ ಸುಜ್ಞಾನಿಗಳೆಂದು [5]ಶರೀರವೆ[5][illegible][6]ನ[6]ವರಂ ಜ್ಞಾನಾನಂದರೆಂದು ಪೆಸರಿಟ್ಟಮುಮಂ ಸುಜ್ಞಾನಿ ಗುರುನಾಥಂ ಕಂಡು ಭಕ್ತಿಸಂತುಷ್ಟ[7]ರಾ[7]ಗಿರಲ್[8]ತ್ತಲಾ ಪರಮೇಶ್ವರನೀ ನನ್ನಪ್ಪಂ ಮಾಡಿದ ಗುರುಭಕ್ತಿಯುಮುಮಂ [9]ಕಂಡು[9] ಜಗ[10]ವ ಜ[10]ನರುಂ ಸಕಲ ಭಕ್ತರು ಕೇಳಿ ಕೃತಾರ್ಥರಾಗಬೇಕೆಂದು ಬಸವರಾಜನಂ ಜಗಕ್ಕಱುಪಿಸಿ ಆ ಸುಜ್ಞಾನಿಗಳಂ ಜ್ಞಾನಾನಂದರುಂ ನನ್ನಪ್ಪ[11]ನಂ[11] ಅನರ್ಘ್ಯಮಣಿಖಚಿತನಪ್ಪ ಪುಷ್ಪಕದೊಳು ಕೈಲಾಸಕ್ಕೊಯಿದು ಶ್ರೀ ಮಹಾದೇವಾ[12]ದಿ[12]ದೇವ ಪರಮೇಶ್ವರಂ ಭಕ್ತಜನ ಬಾಂಧ[13]ವಂ ಅ[13]ತ್ಯತಿಷ್ಠರ್ದಶಾಂಗುಲಂ [14]ಪ[14]ಕೋರುದ್ರನನ್ನಿತಿಯುಮನಗಣಿತನಪ್ರಮೇಯ ನಿರಾಮಯ ನಿರುಪಮ ನಿರಪೇಕ್ಷ ನಿಸ್ಪೃಹ ನಿರವದ್ಯ ನಿರ್ಮಲ ನಿಷ್ಕೃಪ್ತ ನಿರಹಂಕಾರ ನಿರ್ದೋಷ ನಿರ್ಭಿನ್ನನಪ್ಪ ಪ್ರಸನ್ನರಾಮೇಶ್ವರನು ಸುಜ್ಞಾನಿಗಳು ನನ್ನಪ್ಪನಂ ಬೋಧಿಸಿದ ವಿವೇಕಮುಂ ನನ್ನಪ್ಪನ ಗುರುಭಕ್ತಿಯುಂ ನಂದೀಶ್ವ[15]ರ ಭೃಂಗೀಶ್ವ[15] ವೀರಭದ್ರಾದಿ ಗ[16]ಣೇಶ್ವರರಿ[16]ಗೆ ನಿರೂಪಿಸಿಯುಮರ್ಗೆ ಗಣಪದವಿಯುಂ ಕೊಟ್ಟರೆಂ[17]ಬ[17] ಪರಮಾ[18]ರ್ಥ[18]ಮುಕ್ತಿಯುಂ ಲೌಕಿಕಮಾರ್ಗಕ್ಕೆ ತಂದು ಕಂಡ ವೃತ್ತ [19]ವಚನಂಗ[19]ಳಾಗಿ ಜಿಲ್ಲಿಸತ್ತದ ಬಸವೇ[20]ಶ[20]ನಧಿಪತಿಯಪ್ಪ ಸಲ್ಲಲಿತ ಮುದ್ರಾಪುರಾಧೀಶ[21]ನನಪ್ಪ[21] ಪ್ರಸನ್ನರಾಮೇಶ್ವರನ ನಿರೂಪದಿಂ ಶಿವಕವಿಗಳ ಕೃಪೆ[22]ಯಿಂ[22] ಸದ್ಭಕ್ತರ ಪುತ್ರಂ ಸುಜ್ಞಾನಿಗಳ ಪುತ್ರಂ ಸುಜನಜನ ಮಿತ್ರನೆನಿಪ ವಾಮಶಿವಪುರದ ಮಾದಣ್ಣಂ ಬಿನ್ನವಿಸಿದ ನನ್ನಪ್ಪನ ಚಾರಿತ್ರಮುಮಂತೆಂದೆನೆ—

ಕಥಾಗರ್ಭ ಪ್ರಕರಣಂ ಸಂಪೂರ್ಣಂ.

---

[1] [illegible] (ಕ [illegible]) [2] [illegible] (ಗ) [illegible] (ಚ) [3] [illegible] ಆ ಶರೀರಕ್ಕೆ [illegible] (ಗ) [4] ಮೃತ್ತಿಕಾಶರೀರಮುಂ (ಗ) [5] [illegible] (ಗ) [6] [illegible] (ಚ) [7] [illegible] (ಚ) [8] [illegible] (ಗ ಚ) [9] [illegible] (ಗ [illegible]) [10] [illegible] (ಗ) [11] [illegible] (ಚ) [12] [illegible] (ಗ) [illegible] (ಚ) [13] [illegible] (ಗ ಚ) [14] [illegible] (ಗ ಚ) [15] [illegible] (ಗ ಚ) [16] [illegible] (ಗ ಚ) [17] [illegible] (ಗ) [18] [illegible] (ಗ ಚ) [19] [illegible] (ಗ) [illegible] [20] (ಗ) [21] [illegible]ನನ್ನಪ್ಪ (ಗ) [22] ಯಿಂ ಭಕ್ತಿ [illegible] ದೊಳು ಬಱುವಾತಿನ ಬೊಮ್ಮದ ಬೋಧೆಯೆಂಬ [illegible] ಬಂಧಿಸಿ ಮುದ್ರೆಯನ್ನಿಕ್ಕಿ ಆ ಪುರಕ್ಕಧೀಶ್ವರನಾದ ಪ್ರಸನ್ನ [illegible] ಗಳ ಕೃಪೆಯುಂ (ಕ ಚ ಡ)

ಪ್ರಥಮಸಂಧಿ

ಕಂದ : ಶ್ರೀಮ[1]ದ್ಗುರು[1] ಪದ ಕಮಲ
ಪ್ರೇಮಾಂದೋಳನ ಮಧುವ್ರತಂ ಗುರುಭಕ್ತ್ಯಾ
ದ್ದಾಮಂ ನನ್ನ[2]ಯ್ಯನು[2] ಮೆಱೆ[3]
ದಾ ಮಹಿಮೆಯುಮ ಪೇ[3]ಳ್ವೆ[3] ಕೇಳ್ವುದಖಿಳ ಜನಂಗಳು ೧

ನನ್ನಯ್ಯಂ ಗುರುಭಕ್ತ್ಯಾ
ಪ್ಪನ್ನಯ್ಯಂ ಸಕಲ ಧರ್ಮವರ್ತನದೊ[4]ಳು ಸಂ[4]
ಪನ್ನಯ್ಯಂ ದುರ್ಗುಣ ಗಣ
ಭಿನ್ನ[5]ಯ್ಯಸ[5] ಭಕ್ತಿ ಭಾವಿಸಲ್ಕ[6]ದು[6] ಚಿತ್ರಂ ೨

ಗುರುಚರಣ ಭಕ್ತಿ ಸುಸ್ಥಿರ
ಸಿರಿಯಿದು ಗುರುಭಕ್ತಿವನಧಿ ವರ್ಧನ ರಜನೀ
ಕರ[7]ವಿ[7]ದು ದುರ್ಗತಿ ತಮ ಭಾ
ಸ್ಕರ[7]ವಿ[7]ದು ನಿಸಯಾದ್ರಿ ಕುಲಿಶ[8]ಧರನೀಚರಿತಂ[8] ೩

ಆಗಮ ಪುರಾಣ ಸಾಕ್ಷಿಗ
ಳಾಗಿ ಸುವಾಕ್ಯಗಳ ಕೇಳಿ ಸೇರಿಸಿ ಮನಕಿಂ
ಬಾಗಿ ಬೋಧಿಸಿದ ಕೃತಿಯಿದ
ರಾಗದಿ ಕೇಳೂದು ಪ್ರಾಪ್ತ ರೂಪ ಸಮೂ[9]ಹಂ ೪

ವಚನ : ಈ ಕೃತಿಯ ಪೇಳೂದಕ್ಕೆ[9]—

ಉತ್ಪಲಮಾಲೆ

ಶ್ರೀ ಗುರುಪಾದಮಂ ನೆನೆದು ಸತ್ಕೃಪೆಯುಂ ಪಡೆದಜ್ಞಭಾವಮಂ
ನೀಗಿ ಮ[10]ನಃಸು[10]ಸಿರ್ಮಳದೊಳಂ ಸ್ತುತಿಗೆಯ್ವೆನುಮೇಶನಲ್ಲಿ ಮ
ಚ್ಚಾಗಿ ಸುಭಕ್ತಿ[11]ಯಿಂ[11] ನಮಿಸಿ ಮೆಚ್ಚಿಸಿ ಇಷ್ಟಫಲಂಗಳಂ ಮನೋ
ರಾಗ[12]ದೊಳೀ[12]ಶ[11]ನಿಂ[13] ಪಡೆದ ಭಕ್ತರ ಕೀರ್ತಿಯ ಪೇಳ್ವೆನರ್ತಿಯಿಂ ೫

---

[1] ಚ್ಛಿವ (ಡ) [2] ಯ್ಯಂ (ಚ) [3] ಳ್ವೆಂ (ಚ) [4] ಳ್ಸಂ (ಗ ಚ) [5] ಯ್ಯಂ (ಡ) [6] ಡು (ಚ) [7] ನಿ (ಗ) [8] ಮಾಚಾರಿತ್ರಂ (ಕ) [9] ಪಂ (ಕ ಡ) [10] ನಸ್ಸು (ಕ ಡ) [11] ಯಂ (ಗ) [12] ದಿನೀ (ಚ) [13] ನಂ (ಗ)

ಚಂಪಕಮಾಲೆ

ಹರನ ವರಪ್ರಸಾದದಲಿ ಪುಟ್ಟಿ ಮಹಾವ್ರತನಿಷ್ಠೆಯಿಂದ ಶಂ
ಕರನ ಮನಕ್ಕೆ ಬಂದು ಕರೆದೋಯೆನಿಸುತ್ತವೆ ಮಾತನಾಡಿ ತಾಂ
ಧರೆಯ ಜನಕ್ಕೆ ತೋಱಿಸು[1]ತ ದೃಷ್ಟಮ[1] ಮುದ್ರಪು[2]ರಾಧಿನಾಥ[2] ಮ
ಪ್ಪುರುವರ ರಾಮನಾಥನ ಪದಂಗಳು ಮತ್ಯತಿಗೀಗೆ ರಾಗ[3]ಮಂ[3] ೬

ಕಂದ: [4]ಗುರುಚರಣಸರಸಿಜವನುರು
ತರ ಸದ್ಭಕ್ತಿಯಲಿ ನೆನೆದುಮೇಶನ ಭಕ್ತಾ
ತುರರೆನಿಪ ಶರಣರೊಲವಿಂ
ಮೆಱೆ[5]ದ[5] ಚರಿತ್ರವನು ಪೇಳ್ವೆನತಿಮುದದಿಂದಂ[4] ೭

ಸ್ರಗ್ಧರೆ

ಶ್ರೀಮ[6]ನ್ನಾಕಾ[6]ದಿದೇವ ಪ್ರಕರ ಮಕುಟ ಮಾಣಿಕ್ಯ ಸಂ[7]ದೋಹ[7]ದೀಪ್ತಿ
ಸ್ತೋಮಂ ನಿಮ್ಮಂಘ್ರಿಪದದ್ವಯನಖ ನಿಕರ[8]ಜ್ಯೋತಿ[8]ಯಿಂದೊಪ್ಪುತಿಪ್ಪಾ
ರಾಮಂ ಸೋಮಾಬ್ಜ ಮಿತ್ರಾನಲನಯನನುಮಾರ್ಧಾಂಗ [9]ಹೇಮಾದ್ರಿವಾ[9]ಸ
ಪ್ರೇಮಂ ರಾಮೇಶನೀ ಮನ್ಮನವಸಥದೊಳೊಲ್ದಿರ್ಪುದಾನಂದ[10]ದಿಂದಂ[10] ೮

ಚಂಪಕಮಾಲೆ

ಎಲೆ ಪರಮೇಶ ನಿಮ್ಮಡಿಯ ಪೋಲಿಸಿದಾ ಕಮಲಕ್ಕೆ ತೇಜದಿಂ
ಜಲರುಹನೇತ್ರನಾದ ಹರಿ ಪದ್ಮಜನಾದ ವಿರಿಂಚಿ ಲಕ್ಷ್ಮಿಗಂ
ನಿಳಯಮುದಾಮಪರ್ಕಸಖನಾದನೆನಲ್ಕದನೇನನೆಂಬೆ ನಿ
ರ್ಮಲ ಶಿವ ನಿಮ್ಮ ಪಾವದ ಮಹಾತ್ಮೆಯ ಮುದ್ರಪುರಾಧಿನಾಯಕ ೯

ನಿರುಪಮ ನಿತ್ಯತೃಪ್ತ ನಿರಜಾತ್ಮಕ ನಿರ್ಮಲ ನಿತ್ಯಸತ್ಯ ಭಾ
ಸುರ ರವಿ ಕೋಟಿ ತೇಜ ನಖಪಾದಪಯೋರುಹ ದೇವ ನಿಮ್ಮ ಪಾ
ದದದಲಿ ಬೇಳ್ಪ ನೀನೊಲಿದ ಸತ್ಯ ಶಿವೈಕ್ಯನ [11]ಶಾಂತ[11]ರಪ್ಪ ಸ
ತ್ಪುರುಷರ ಕೀರ್ತಿಪೊಗಮ ನುತಿಯುಂ ಕೇಳು ಮುದ್ರಪುರಾಧಿನಾಯಕಾ ೧೦

---

[1]ಸ್ತು ತ ದೃಷ್ಟ [illegible] (ಗ) [2]ದೃಷ್ಟಮ (ಚ) [3][illegible] (ಗ) [illegible] (ಚ) [3][illegible] (ಗ) [4]ಗುರು[illegible] [illegible] [illegible] ಸಾರ್ದ್‌....ತಾರಾಚಲವೇಱಿದ ಕಳಹಂಸನ ಚರಿತೆಯ ಪೇಳ್ವೆನನ್ಮುದದಿಂದಂ (ಡ) [5]ವ (ಗ) [6]ದ ಬ್ರಹ್ಮಾ (ಚ) [7][illegible] (ಗ) [8][illegible] (ಗ) ಜ್ಯೋತಿ[illegible] (ಚ) [9][illegible] (ಚ) [10][illegible] (ಕ ಗ) [11]ಸೇವ್ಯ (ಗ ಚ)

ಕಂದ : ಆದಿಯ ಪುರಾತನರುಗಳ
ಪಾದವ ನೆನೆದಿಹಪರಂಗಳೆರಡಱ ಗತಿಯಂ
ಸಾಧಿಸುವಡಧಿಕ [1]ಮತಿಯಂ[1]
ನೀಂ ದಯೆಗೆ[2]ಯ್ವುದು[2] ಪ್ರಸನ್ನಗುರುರಾಮೇಶಾ ॥೧॥

ಭರದಿಂ [3]ತಪದುಗ್ರದೊಳಂ[3]
ಹರನಂ ಮ[4]ನವೊಲಿ[4]ಸಿ [5]ಶಿವನ ಅಂಗವನಂತಾ[5]
[6]ಗೆ[6]ರಡಾಗಿ ಹಂಚಿಕೊಂಡಾ
ಗಿರಿರಾ[7]ಜನ[7] ತ[8]ನೂ[8]ಜೆ ಮಾಳ್ಕೆ [9]ಮತ್ಕೃತಿಗೊಳ್ಪಂ[9] ॥೨॥

ಉತ್ಪಲಮಾಲೆ

ಅಂಬಿಕೆಯಾತ್ಮಜಂ ಶಿವಕುಮಾರ[10]ನು[10] ವೇದ ಪುರಾಣ[11]ಮಾ[11]ಗಮಾ
ರಂಭಕ[12]ಧೀ[12]ಶ ವಿಘ್ನರಿಪು ತಚ್ಚರಣಾಂಬುಜವಂ ಸುಭಕ್ತಿಯಿಂ
ನಂಬಿದ ಭಕ್ತಸಂಕುಲ[13]ದ[13]ಭೀಷ್ಟಫಲಂಗಳನೀವ ದೇವ ಹೇ
ರಂಬನುಮೇಶ ಕೀರ್ತ[14]ನೆಗವಿ[14]ಘ್ನತೆಯಂ [15]ಮಿಗೆ[15] ಮಾಳ್ಪನಾವಗಂ ॥೩॥

ಕಂದ : ಅಭವಸುತನಾ ಷಡಾನನ
ವಿಭು ಶರಣಚರಿತ್ರವಿದನು ಭೂಲೋಕದೊಳಂ
ಪ್ರಬಲವೆನೆ ನಡೆಸುವುದು ಮ
ತ್ಪ್ರಭುವೆ ಧರೆ ಶರಧಿ ತರಣಿ ಶಶಿಯುಳ್ಳನೆಗಂ ॥೪॥

ನಿಲ್ಲದೆ ಕೃತಿಜಡನಾಗದೆ
ಸಲ್ಲಲಿತಮು ಕೇಳಿ ಕೃತಿಯುಮಹುದೆಂಬಂತಿರೆ
ಬೆಲ್ಲನತ್ತದೊಳು ನೆರೆಶಿ[16]ದ[16]
ವಲ್ಲಭ ಬಸವಣ್ಣ ನಡೆಸುವನು ಮತ್ಕೃತಿಯಂ* ॥೫॥

---

[1]ತರಂಗಳ (ಗ) ವರಂಗಳ (ಚ) ವರಮಂ (ದ) [2]ಯ್ಯ್ಯ (ಗ) ಯ್ಯೈ (ಚ) [3]ದ ಉಗ್ರರಸದೊಳು (ಡ) [4]ನ ಒರ (ಚ) ನ ಬರಿ (ದ) [5]ಶಿವನಂಗ ಮಮಂ (ಗ ಚ) ಶಿವಲಿಂಗಮುಮಂ (ಡ) [6]ದೆ (ಗ ಚ) [7]ಜ (ಗ ದ) [8]ನೂ (ಗ ದ) [9]ಮದ್ಕೃತಿಗೊಪ್ಪಂ (ದ) [10]ನಂ (ಚ) [11]ವಾ (ಗ ಡ) [12]ವೀ (ಚ) [13]ಕ (ದ) [14]ನೆ (ಕ) ನವ (ಚ ದ) [15]ನಿಱಿ (ಗ ಚ ದ) [16]ಹ (ಡ)

*(ಗ) ಪ್ರತಿಯಲ್ಲಿ ೧೫ನೆಯ ಪದ್ಯವಿಲ್ಲ.

ಚಂಪಕಮಾಲೆ

ಘನತರ ಕಾಯನಂ ಘನಗುಣಾನ್ವಿತನಂ ಘನತೇಜನಮೂರ್ತಿಯುಂ
ಘನ ಕರುಣಾಳುವಂ ಘನಸು[1]ಕೇ[1]ಶನನಾ ಘನ[2]ದಿಗ್ವಿ[2]ವಾಸನಂ
ಘನ ಪರಿಪೂರ್ಣನಪ್ಪ ಘನಲಿಂಗವ ತಾಳಿಹ ಸಾಹಸಾಂಕನಾ
ಘನವೃಷಭೇಶನೀಕೃತಿಗಲಂಕೃತಿಯುಂ[3]ಕೊ[3]ಡುಗೊಲ್ದು ರಾಗದಿಂ ೧೬

ಕಂದ : ಸರಸಿಜಭವನ ಮನೋಹರೆ
ಸರಸತಿಯಿಾ ಶರಣಚರಿ[4]ತವಂ[4] ಪೇಳ್ವರ್ಗಂ
ನೆರವಪ್ಪಳೆಂಬುದದು ತಾಂ
ನೆರ[5]ಲ್ಲ[5]ದ ಬಲ್ಲೆನಾಗಿ ನಡೆಸುವೆ ಕೃತಿಯುಂ ೧೭

ಅಱುವತ್ತಮೂವರಂಘ್ರಿಯ
ಮೆಱೆದಾ ಪುರದೊಳಗೆ ಸಂದ ಶೋಳಸರಡಿಯುಂ
ಹರನನೊ[6]ಲಿಸಿ[6]ದರ ಸಲೆ ಸಿರಿ
ಚರಣನ ಪಶಗಣವಿಗೆ[7]ಱ[7]ಗಿ ಪೇಳ್ವೆನು ಕೃತಿಯುಂ* ೧೮

ಪ್ರಮಥ[8]ರ[8] ರುದ್ರಗಣಂಗ[9]ಳ[9]
ವಿಮಳ ಗುಣಾನ್ವಿತರ ಯೋಗಾಚಾರ್ಯ[10]ರ ತತ್ಪದ[10]
ಕಮಲ[11]ವನು[11]ನೆನೆದು ನಲವಿಂ
ಮಮತೆ ವಿಗ[12]ಲ್ದೆ[12]ಳ್ದೆ ಕೇಳ್ವುದೀ ಸತ್ಕೃತಿಯುಂ ೧೯

ಹರಿಣಿ

ಬಸವನನಲ್ಲಿಸುಪ್ರಭುವನಕ್ಕಗಳಂ ಮಡಿವಾಳದೇ[13]ವನಂ[13]
ಪೆಸರ್ವಡೆದಿಪ್ಪ ಚೆನ್ನಬಸವಣ್ಣ ಸ್ವಭಾಕರ ಸಿದ್ಧರಾಮನುಂ
ಮುಖುಟಿಮುಚೌಡನುದ್ಭಟ ಹಲಾಯುಧ ದಾಸನ ಕೇತಿರಾಜ[14]ನಂ[14]
ತೆಸೆನ ಪುರಾತನಗೆಱಗಿ ಪೇಳ್ವೆನೀ ಕೃತಿಯುಂ [15]ಸ[15]ರಾಗದಿಂ ೨೦

---

[1]ರೇ (ಡ) [2]ಧನ್ವ (ಡ) [3]ಕು (ಗ) [4]ತಮುಂ (ಗ ಚ) ತೆಯಂ (ಡ) [5]ಪ್ಪ (ಡ) [6]ಲಿ (ಚ) [7]ಆ (ಡ) [8]ರು (ಕ ಚ) [9]ಳು (ಚ) [10]ರ ತತ್ಪದ (ಗ ಚ) ರತ್ತ ರ ಕವ (ಡ) [11]ವ (ಕ ಡ) [12]ಬಿಟ್ (ಗ) [13]ರಂ (ಕ) [14]ನಂ (ಚ) [15]ಸು (ಚ)

*(ಕ) ಪ್ರತಿಯಲ್ಲಿ ೧೮ನೆಯ ಪದ್ಯ ೧೯ನೆಯ ಪದ್ಯದ ಅನಂತರ ಬಂದಿದೆ.

ಕಂದ : ಮುನ್ನ [1]ಭ[1]ವನನೊಲಿಸಿದ ಸಂ
ಪನ್ನರನಿನ್ನೊಲಿಸಿ [2]ಮೆಱೆದ[2] ಸದ್ಭಕ್ತರುಗಳ
ಗೆನ್ನ ಮನಸಹಿತ ವಂದಿಸಿ
ನಸ್ನಯ್ಯನು ಶಿವನನೊಲಿಸಿದನುಪಂ ಪೇಳ್ವೆಂ* ೨೧

ವಚನ : ಮತ್ತೆ—

ಮತ್ತೇಭವಿಕ್ರೀಡಿತ

ರಸಭಾ[3]ವಂ[3] ಮಿಗುವರ್ಥ ಚಿತ್ರಪದ ಸತ್ಪ್ರಾ[4]ಸಂ[4] ಕ್ರಮಂ ಲಕ್ಷಣಂ
ಪೊಸತಪ್ಪಾ ಬಗೆ ಜಾಣ್ ಸುವಾಕ್ಯ ಮೊದಲಾಗೇನುಳ್ಳ ವಾಗ್ಜಾಲದಿಂ
ವಸುಧಾ ಚಕ್ರದಿ ಪೇಳ್ವರಾದಿಕವಿಗಳ್ ಕಬ್ಬಂಗಳಂತಿನ್ನು ನಿ
ಟ್ಟಿಸಲೇನುಂಟುಮಪೂರ್ವ [5]ಕಾವ್ಯ[5]ಕೃತಿಯಂ [6]ಪೇ[6]ಳಲ್ಕಿಳಾ ಚಕ್ರದೊಳ್ ೨೨

ಕಂದ : ಮುನ್ನಿನ ಕವಿಗಳು ಪೇಳ್ದಾ
ವರ್ಣನೆಯಂ ಶಬ್ದಪಲ್ಲಟದಿ ಪೇಳ್ದುದಱಿಂ
ಮುನ್ನಿನವೆ ಸಾಲ್ಗುಮದಱಿಂ
ದುನ್ನತನಹ ಭಾವಮಿಲ್ಲನಱಿದುದನುಸುರ್ವೆಂ ೨೩

ಚಂಪಕಮಾಲೆ

ಬಿಸರುಹಪಂಕದಲ್ಲಿ ಪೊಸಮೌಕ್ತಿಕಮೆಯ್ದೆ ವರಾಹನಲ್ಲಿ ನಿ
ಟ್ಟಿಸೆ ಋಷಿಸಂಕುಳಂ ಕುಲವಿಹೀನರೊಳೊಪ್ಪುವ ರತ್ನಶೈಲದೊಳ್
ವಸುಧೆಯ ಮೇಲೆ ಲಿಂಗ ಜನಿಸಿರ್ಪ [7]ಧರಿ[7]ತ್ರಿಯೊಳೊಪ್ಪುನಂತೆ ಮಾ
ನಿಸರ ಸುಜಿಹ್ವೆಯೊಳ್ ಜನಿಸಿದೀ ಶಿವಕೀರ್ತನೆಯೊಪ್ಪದಿ[8]ರ್ಪು[8]ಮೇ ೨೪

ಕಂದ : ಅವರಿವರು ಪೇಳ್ದ ಕೃತಿಯೆಂ
ದವನಿಯಜನ ನುಡಿಯಬೇಡ ಪೂರ್ವದದಿನದೊಳ್
ಶಿವನನೊಲಿಸಿರ್ದ ಶರಣರ
ನಿನತಂ ಪೊಸತಲ್ಲ ನೋಡಿ ತಿಳಿವುದು ಕೃತಿಯಂ ೨೫

---

[1]ಬಸ (ಜ) [2]ಪಸ್ಪ (ಗ) [3]ನ (ಗ) [4]ಸ (ತ) [5]ವಾಕ್ಯ (ಗ ಜ ಪ) [6]ಕೇ (ಜ) [7]ಧಾ (ಡ) [8]ಕ್ಕು (ಜ)

*(ಡ) ಪ್ರತಿಯಲ್ಲಿ ೨೧ನೆಯ ಪದ್ಯವಿಲ್ಲ.

ಚಂಪಕಮಾಲೆ

ಕೃತಿ ಪೊಸತಾನಡೇನದಕೆ ಕುಂದೆ ಮಹಾರಸವರ್ಥಭಾವ [1]ಶು[1]
ದ್ಧತಿ ರಚನೋಕ್ತಿ ಪ್ರಾ[2]ಸ ಪದ[2] ಕೋಮಲವಾಕ್ಯ ಸುಮಾರ್ಗಭಕ್ತಿಯು
ನ್ನ[3]ತೆ[3]ಯಿವು ತಪ್ಪದೊಪ್ಪಿ[4]ರಲು[4] ಸಾಲದೆಯಂತದ ನೋಡಿ ಸತ್ಕವಿ
ಪ್ರತತಿಗಳ್ಪೆದೆ ಮೆಚ್ಚುವುದು ಸಾಯುಸ[5]ಮಂ[5] ನೆಱ[3] ಬಲ್ಲ ಸೂಜಂಗಳ್ ೨೬

ಉತ್ಪಲಮಾಲೆ

[6]ಓದಿ[6]ಸಿ [7]ನೋಡಿ ಕೇಳ್[7] ಕೃತಿ ಪೊಲ್ಲೆನಲಾ[8]ದುದ[8]ದೇನು[9]ಲ್ಲಾ[9]ಭ ನು
ತ್ತಾದರಿಪುತ್ತ ಕೀರ್ತಿಸುತ ಲಾಲಿಪುತಿಪ್ಪಡಪೇನು ಭೇಗೆ ಯಿಾ
ಭೇದವ ನೋಡಿ ಸತ್ಕವಿಗಳುಂ ಸುಜನಾ[10]ಳಿ[10]ಗಳೆಲ್ಲರರ್ಥಿಯಿಂ
[11]ದಾದಿ[11]ಪುರಾತನರ್ನೆಱ[3]ದ ಭಕ್ತಿಯ ಮುಕ್ತಿಯ [12]ಕೇಳ್ಪುದ[12] ರ್ಥಿಯಿಂ ೨೭

ಚಂಪಕಮಾಲೆ

ಕಳೆವುದು ತಿದ್ದಿ ಶೋಧಿಸುವುದೀ [13]ಕಥೆ[13]ಯೊಳ್ಕೃಱವಿರ್ದ ತಪ್ಪು[14]ವಂ[14]
ತಿ[15]ಳುಪಿ[15]ಸದರ್ಥವಂ ರಸ[ಮು]ಭಾವವನು ತಕ್ಕುದನಿಕ್ಕಿ ಕಬ್ಬವಂ
ಸಲಿಸುವದೊಳ್ಪಿತೆಂದೆನೆ ಮಹೇಶನ ಭಕ್ತರ ಭಕ್ತಿಕೀರ್ತಿ[16]ಯಂ[16]
ಪಲರಱಿ ನಂ[17]ತೆ[17] ಪೇಳ್ವರಿಗೀ[18]ನಂ ಮಹೇ[18]ಶ್ವರನಿಷ್ಟಸಿದ್ಧಿಯಂ ೨೮

ಉತ್ಪಲಮಾಲೆ

ಸತ್ಕೃತಿನ್ಯೈಕ್ಯರಾಲಿ[19]ಸುವುದೀ[19] ಕೃತಿಯೊಳ್ಪುಸು ತಪ್ಪು ಸಂಧಿಸಲ್
[20]ಕರ್ತನು[20] ನೀವು ತಿ[21]ದ್ದುವು[21]ದು ಮಿಕ್ಕಿನವರ್ಗೆಡ[22]ರಾಗ[22]ದಂತೆ ನಾಂ
ಭೃತ್ಯನು ಕೇಳಿ ನಿಮ್ಮ ಶಿಶುವೆನ್ನ ತೊಡಲ್ನುಡಿ[23]ಯಂ[23] ಸರಾಗದಿಂ
[24]ವರ್ತಿಸಿ ಸಂದು[24] ಪಾಲಿಸು[ವು]ದೀಶ ಪುರಾತನಚರಿತ್ರ ಕೀರ್ತಿಯಂ ೨೯

ಮತ್ತೇಭವಿಕ್ರೀಡಿತ

ಕವಿತಾಬಲ್ಮೆ[illegible]ಕ [25]ಕಾವ್ಯದೋ[illegible]ಸಿಂ[25]ಮತ್ತೆ[illegible]ಕ್ಷೆಯುತ್ಪ್ರತ್ಯದಿಂ
ತರಿ ಪೇಳ್ವಾ ಕೃತಿಯ[26]ಲು[26] [illegible]ಶರ[27]ಣರ್[27] ಸದ್ಭಕ್ತಿಯಿಂ ಸತ್ಯದಿಂ
[28]ಭ[28]ವನಂ ಮುಚ್ಚಿಸಿ [29][illegible][29]ಇಷ್ಟಸಿದ್ಧಿಗಳುಮಂ ಸಾಯುಜ್ಯ ಸಂಪತ್ತಿಯಂ
ಶಿವಕಾರುಣ್ಯ[30][illegible][30]ಲ್ಲರೊಲ್ದು ಪಡೆವಾ ಚಾರಿತ್ರಮಂ [31]ಬಣ್ಣಿ[31]ಪೆಂ ೩೦

[1]ಪಶಿ (ಗ) [2]ಪುಪದೇಮಪದ (ಗ) [3]ಱ (ಗ) [4][illegible] (ಕ ಚ ಗ) [5]ಮೊ (ಕ ಗ) [6]ಶೋಧಿ (ಕ) [7][illegible] (ಗ) [8]ಮು (ಕ ಚ ಗ) [9][illegible] (ಚ) [10]ಕು (ಗ ಚ) [11][illegible] (ಚ) [12]ಪೇಳ್ವನ (ಗ) [13][illegible] (ಗ) [14][illegible] (ಗ) [15][illegible] (ಚ) [16][illegible] (ಗ) [17][illegible] (ಗ) [18]ವನುಮೋ (ಗ ಚ ಗ) [19][illegible] (ಕ) [20][illegible] (ಗ ಚ) [21][illegible] (ಗ) [22][illegible] (ಗ ಚ) [23][illegible] (ಕ) [24][illegible] (ಗ) [25][illegible] (ಗ) [26][illegible] (ಕ) [27][illegible] (ಚ) [28][illegible] (ಗ) [29][illegible] (ಗ) [30][illegible] (ಗ ಚ) [31][illegible] (ಗ)

[1]ಶುಕನಿಂ[1] ಕೌಶಿಕನಿಂ ಮಯೂರ ಬಕನಿಂ ಪೆಣ್ಣಾನೆ[2]ಳಿಂ[2] ಸಿಂಹ ಜಂ
ಬುಕ ಸಂಜೀವಕ[3]ನಿಂ ಸಿಳೀ[3]ಮುಖಗಳಿಂದುತ್ಪತ್ತ್ಯಮಾಗೊಪ್ಪುವಾ
ಕುಕವೀಮಾರ್ಗವಿದಲ್ಲವಿಶಶರಣರ್ ದಾಸೋಹಕಂ ಭಕ್ತಿಗಂ
ದಕಳಂಕಂ ಪರಮೇಶಮೆಚ್ಚಿಸುಜಿಃದಾ ಚಾರಿತ್ರಮಂ ಬಣ್ಣಿಪೆಂ* ೩೧

ಕಂದ : ಉಳ್ಳುದ ಸಾ[4]ವಿ[4]ರಕೊಂದುಮ
ನಲ್ಲದೆ [5]ಪೇಳಲ್[5] ಫ[6]ಣೀಶ[6]ಗರಿದೆನೆ[7]ನಾನಿ
ನ್ನಿ[7]ಲ್ಲದ ರಚನೆಯ ರಚಿಸಲ್
ಬಲ್ಲೆನೆ [8]ಸುಜನಾಳಿ ಕೇಳ್ವುದೀ ಸತ್ಕೃತಿಯಂ[8] ೩೨

ಎಱಗು[9]ವೆ[9] ದುರ್ಜನರಿಂಗೊ
ಲ್ದೆಱಗೆನು ಸುಜನಾಳಿಗಳ್ಗೆ ಡೆಂಕೆನೆ [10]ಪಥದೊಳ್[10]
ಬರುತಿರೆ ಚೋರರ್ಗಂಜುವ
ತೆಱ[11]ದಿಂ[11] ಪಿರಿಯರು ಬರಲ್ಕದೇನಂಜುವರೇ ೩೩

[12]ಪ[12]ಡೆದಾಲವಟ್ಟಲಮಂ
ಪಿಡಿವುದು ಕಳಹಂಸೆಯೆಂತುಟ ಕೃತಿಯೊಳ್ [13]ತ್ರ[13]ಪ್ಪಿ
ರ್ದಡೆ ತಿದ್ದಿ ಬಯಲನಾತಂ
ನುಡಿಯದೆ [14]ಸುಜನಾ[14]ಳಿ ಕೇ[15]ಳ್ವುದೀಶನ[15] ಕೃತಿಯಂ ೩೪

ದುರ್ಜನರೀ ಕೃತಿಯಂ ಕೇ
ಳ್ವುಜ್ಜುಗ ಸಮನಿಸದದಾಗಿ ಸಾಕ್ಷ[16]ರ[16]ರಪ್ಪಾ
ಸಜ್ಜನರಾಲಿಸಿ ಭಕ್ತಿ ಜ
ಗಜ್ಜನಕಪ್ಪಂತು ಮಾಳ್ಪುದೀ [17]ಸತ್ಕೃತಿಯಂ[17] ೩೫

---

[1]ಮುಕುರಂ (ಪ) [2]ಳಂ (ಗ) [3]ನಂ ಬಲೀ (ಗ) ನಾ ಬಲೀ (ಪ) [4]ಸಿ (ಚ ಪ) [5]ಬಲ್ (ಗ) ಪೇಳಲ್ಕೆ (ಪ) [6]ಜನ (ಪ) [7]ಲವನು ಸ (ಪ) [8]ಪ್ರಮಥರ ಚರಿತ್ರಮಂ ಸತ್ಕೃತಿಯೊಳ್ (ಗ ಚ) ಶಿವಶರಣರ ಕಥೆಂಬಸತಿಮುದದಿಂದಂ (ಪ) [9]ಗು (ಗ) [10]ಪವನವಲಿ (ಗ) [11]ಪಾ (ಡ) [12]ಓ (ಗ ಚ) [13]ಅ (ಚ) [14]ಭಕ್ತ (ಗ) [15]ಳುಪ್ಪುದು ಮತ್ (ಗ) ಳ್ವುದೀಶತ್ (ಚ ಡ) [16]ತ (ಕ) [17]ಕೃತಿಯೊಳ್ಪಂ (ಗ ಚ ಡ)

*(ಚ) ಪ್ರತಿಯಲ್ಲಿ ೩೧ನೆಯ ಪದ್ಯವಿಲ್ಲ.

ಕೊಳನಂ [1]ಹಂ[1]ಸೆಯ ನ್ನೈದಿಲೆ
ನಳಿನವ ಶುಕ ಪಿಕ ಮಯೂರತತಿಯಂ ಮಂದಾ
ನಿಲ[2]ನಂ[2] ವರ್ಣಿಸಿ ಪೇ[3]ಳುವ[3]
ಗಲಭೆಯು ಕೃತಿಯಲ್ಲಮಿಾಶ ಶರಣಚರಿತ್ರಂ ೩೬

ಚಂಪಕಮಾಲೆ

ರದನನು ವ[4]ಜ್ರ[4]ವೆಂಬು ಸಮಸಂಗಳ ಸ್ನೈದಿಲೆಸಳ್ಗಳೆಂದು ತ
ದ್ವದನವನಾ ಸರೋಜ ಶಶಿಯೆಂದುಜ[3] ಪೋಲಿಸಿ ಒಪ್ಪನೆ[5]ತ್ತುತ್ತೋ
ರ್ಪ[5]ಧರವು ಬಿಂಬವುಂ ಪ್ರವಳವೆಂದನ[6]ಸಾ[6]ರಿಯ ಪೇಳ್ವುದಲ್ಲ[7]ಮಿಾ[7]
ಸದಮಲ[8]ಮಿಾ[8]ಶಭಕ್ತರ ಚರಿತ್ರವನುಳ್ಳುದ ಪೇಳ್ಪೆನ[9]ಳ್ತಿ[9]ಯಿಂ ೩೭

ಕಂದ : ಮನಮುಚ್ಚರದಿಂ ಪೊಲ್ಲೆಂ
ದೆನೆ ಕೃತಿಯುಂ ಕೇಳ್ದು ಶರಣರನುಪಂ ಪೊಲ್ಲೆಂ
ದೆನಲವ[10]ರ್ಗಳಿಗೊದಗೂದತಿ[10]
ಘನತರ ಕರ್ಮಂಗಳೆಂದುದೀಶನ ವಾಕ್ಯಂ ೩೮

ಅದಕ್ಕೆ ಸಾಕ್ಷಿ॥ ಗ್ರಂಥ॥

ಮದ್ಭಕ್ತ ದ್ವೇಷಿಣೋ ಮರ್ತ್ಯ ಮಮದ್ವೇ[11]ಷಿ[11] ನ ಸಂಶಯಃ
ಮತ್ಕೀರ್ತಿ[12]ದ್ವೇಷಿ[12]ಣೋ ಪುಂಸಾಂ ರೌರವಂ ನರಕಂ ವ್ರಜೇತ್

ವಚನ : ಇಂತೆಂದುದಾಗಿ*—

ಕಂದ : ಇದು ಶಿವನೊಲುವೆಯು ಶರಣ[13]ರ[13]
ಸದಮಲಚಾರಿತ್ರ ಕೃತಿಯಿದಂ ಕೇಳುತ್ತಂ
ಪದುಳಂ [14]ಮನದೊಳು ಮುದದೊಳ[14]
ಗೊದ[15]ವಿ[15]ದ ಸಂತೋಷದಿಂದ ಕೇಳ್ವುದು ಕೃತಿಯಂ ೩೯

ಪುರಮುಂ ವನಮುಂ ಲತೆಯುಂ
ತರುಣಿಯರಂ ಗಿರಿಯ ಕರಿಯ ಶರಧಿಯ ಪೊಗಳು
ತ್ತಿರದೆ ಶಿವಶರಣರೆಲ್ಲರ
ಚರಣವ ನೆನೆ ಮನವೆ ಬೇಡಿಕೊಂ[16]ಬೆನು[16] ನಿನ್ನಂ ೪೦

---

[1]ಪಂ (ಕ) [2]ಪಂ (ಕ) [3]ಪ್ಪು [illegible] (ಕ) [4][illegible] [5][illegible] (ಕ [illegible]) [6][illegible] (ಕ) [7][illegible] (ಗ ಚ) [8][illegible] (ಗ) [9][illegible] [10][illegible] (ಗ) [illegible] ನು (ಚ [illegible]) [11][illegible] (ಗ) [illegible] [12][illegible] [13][illegible] [14][illegible] ದೊಳ ಗ ಚ) [15]ಗಿ (ಕ) [16]ಬೆಂ (ಗ ಚ)

* (ಕ ಗ ಚ) ಪ್ರತಿಗಳಲ್ಲಿ ಈ ವಚನ ಇ[illegible].

ದಿನದಿನಕೆ ಘಳಿಗೆಘಳಿಗೆಗೆ
ಪ್ರನಿಮಿಷ ನಿಮಿಷಕ್ಕೆಯಾಯುತೀರದ ಮುನ್ನಂ
ನೆನೆ ಶಿವನ ಶರಣರಂಘ್ರಿಯ
ಮನ[1]ವೇ[1] ಸೆಱಗೊಡ್ಡಿ ಬೇಡಿಕೊಂ[2]ಬೆಂ[2] ನಿನ್ನಂ ೪೧

ಸುಟ್ಟುರುಗಾಳಿಯ ಮಧ್ಯ[3]ದ[3]
[4]ಲಿ[4]ಟ್ಟಹ ಸೊಡರಂತೆಯಾತ್ಮತನು[5]ಸಂಗವಿಱದಂ[5]
ನೆಟ್ಟನಱಿಂದೀಶಪದವಂ
ಬಿಟ್ಟಿರದಿರು ಮನವೆ ಬೇಡಿಕೊಂ[6]ಬೆಂ[6] ನಿನ್ನಂ ೪೨

ಅರೆಗಳಿಗೆ ತನು[7]ವ[7] ಮನೆಯೊಳ
ಗಿ[8]ರಲೀಯರು[8] ಹಂಸ ಹಾಱಿಂದಾಕ್ಷಣವೆಂಬುದ
ನಱಿದು ಬಱಿ ಮೋಹವೆಂಬೀ
[9]ಸೆಱೆ[9]ಯೊಳು ಬೀಳದಿ[10]ರು[10] ಬೇಡಿಕೊಂ[11]ಬೆಂ[11] ನಿನ್ನಂ* ೪೩

ನರಸೇವೆ[12]ಗಿಂ[12]ದ ಕಷ್ಟವೆ
ಹರಸೇವೆ[13]ಯು[13]ದೇಕೆ ಬಱಿದೆ ಬಳಲುತ್ತಿಹೆ[14]ಯ್ಯೆ[14]
ಹರಮಾಡದುದಂ [15]ಕೀಟಕ[15]
[16]ನರರೇನು ಮಾಳ್ಪರೈ[16] ವಿಚಾರಿ[17]ಸು ಮನವೇ[17] ೪೪

ಅದು ಕಾರಣದಿಂದೀಶನ
ಪದಕಮಲವ ಬಿಡದೆ ಭಜಿಸಿ ಭಕ್ತಿಯ ಸುಖಸಂ
ಪದಮಂ ತಾ ನೆಱೆ ಪಡೆವುದ
[18]ಕಿಮು ಸಲ್ಲದ[18] ಬುದ್ಧಿ ನಿನಗೆ ಕೇಳಲೆ ಮನವೇ ೪೫

ಅಷ್ಟಮ[19]ಹದೈಶ್ವರ್ಯವ ನೀ[19]
ಸೃಷ್ಟಿ[20]ಯೊಳೆ[20]ಲ್ಲರಿಗೆ ಕೊಡುವ ಶಿವನಿರ್ದಂ[21]ತಿ[21]
ಭ್ರಷ್ಟಮಾನವರ ಬೇಡುವ
ಕಷ್ಟವನುಳಿ ಮನವೆ ಬೇಡಿಕೊಂಬೆಂ ನಿನ್ನಂ ೪೬

---

[1]ಮಂ (ಚ) [2]ಬೆನು (ಪ) [3]ದೊ (ಗ) [4]ಲಿ (ಗ ಚ ಪ) [5]ಸಂಬಂಧಂ (ಚ) [6]ಬೆನು (ಪ) [7]ವಮ (ಪ) [8]ರಿಸರುಸರ್ತ (ಪ) [9]ಸಱೆ (ಗ) [10]ರು ಮನವೆ (ಗ ಚ) [11]ಬೆನು (ಗ) [12]ಯಿಂ (ಗ ಚ) [13]ಯಿ (ಗ ಚ) [14]ಈ (ಚ ಪ) [15]ಶೃಂಕಟ (ಪ) [16]ನರನಾವಬಲ್ಲನೆ (ಪ) [17]ಸಿ ನೋಡಾ (ಕ) [18]ಸಿ ಬಹುಕುಮನವು (ಗ) ಕಿಮಂ (ಚ) ಕಿಮುಸನ್ಮತ (ಪ) [19]ಹಾಸ್ಯಾಭೂತಿಯುಮಂ (ಗ) ಹಾದ್ಭುತಿಯುಮ್ಮಂ (ಚ) [20]ಯುಳೆ (ಗ) [21]ತಾ (ಪ)

*(ಚ) ಪ್ರತಿಯಲ್ಲಿ ೪೩ನೆಯ ಪದ್ಯವಿಲ್ಲ.

ಕೆಡದಿರು ಕೆಡದಿರು ಸಾಱಿದೆ
ಬಿಡದಿರು ಬಿಡದಿರು [1]ಉನ್ಮೇ[1]ಶನಂಘ್ರಿದ್ವಯಮಂ
ದೃಢವಿಡಿ ದೃಢವಿಡಿ [2]ಮು[2]ಕ್ತಿಯ
ಕಡೆಗಿದು ಕಡೆಗಿದುವೆ ಸಿದ್ಧಿ ಕೇಳೆಲೆ ಮನವೇ ೪೭

ಚಂಪಕಮಾಲೆ

ಸುರಪತಿಗಂ ಸುರದ್ರುಮ[3]ಕ್ಕೆಯಾ[3] ಸುರಧೇ[4]ನುಗೆ[4] ದೇವರತ್ನಕಂ
ಪರಶಿವನದ್ರಿಗಂ ವೃಷಭನೊಳ್ಪಿಗೆ[5]ಯೊ[5]ಪ್ಪ[6]ವ[6] ದುಗ್ಧವಾರ್ಧಿಗಂ
[7]ಸುರಗಿ[7]ರಿಯೊಂದು[illegible]ಶಿಗವಿನಾ[illegible]ಗುಣಕ್ಕೆ ಜಕ್ಕೆ [8]ಮ[8]ತ್ತೆ ದು
ರ್ನರರ ಪೊಗಳ್ಪು ದುರ್ಗತಿಯನೈದುವೋಶನ ಕೀರ್ತಿಸರ್ತಿಯಿಂ ೪೮

ವಚನ : ಅದೆಂ[9]ತೆನೆ[9] ಇದು ನೋಡಲು ಪೊಡವಿ[10]ಯ[10] ಜಡಜನದ ಬಡವುನದಲಡಿಯಿಟ್ಟೆಡೆವಿಡದೆಡೆನೆಱು ಮಡಲಿಱಿದು ಕಡುನೆಚ್ಚಿದಜ್ಞಾನವೆಂಬಡವಿಯನಡ್ಡಗಟ್ಟಿ ಬಿಡದಡಸಿ ಕಡಂಗಿ ಸುಡುವ ಧೂಮಧ್ವಜಂ ಮತ್ತಂ ದುಷ್ಟನರಕವೆಂಬ [11]ಕಷ್ಟ[11]ಬೆಟ್ಟಂಗಳೊಟ್ಟಲಂ ಕುಟ್ಟಿ ಹಿಟ್ಟುಮಾಡಿ [12]ಉಃಪೆಂದೂ[12]ದಿ ಹಾಱಿಸುವ ವಜ್ರಧರನುಂ ಮತ್ತಂ ದು[13]ರ್ಗತಿ[13] ದುಶ್ಚಾರಿತ್ರ ದುರಾಚಾರ ದುರ್ನೀತಿ ದುರ್ಬೋಧೆಯೆಂ[14]ದೆನಿಸುವ[14] ಕ್ರೂರ ಸರ್ಪನಿಚಯಮುಮಂ [15]ಚ[15]ಣದಿಂ [16]ಪಿಡಿದಡಸಿ ಮೋಘಮಂಡಲಕ್ಕೆ ಪುಟನೆಗೆದು[16] ಚಂಚುಪುಟದಿಂ ಚರಣನಖಂಗಳಿಂ[17]ದಿಱಿ[17]ದಿಱಿದು ಶಿರಮಂ [18]ತಱಿ[18]ತಱಿದು [19]ಪಱಿ ಪಱಿದು ಕಣ್ಣಂ ಕದ್ರುಂಕಿ ಗರ್ಭಮಂ ಸೀಳ್ದುಮುಳ್ಳಿಂದೊ[19] ಸರ್ಪ ಪೊಸರುಧಿರಮಂ ಸುಱಿ[20]ಸುಱಿದು ಸುಱಿದುಕುಡಿಕುಡಿದು ಕುಡಿದು[20] [21]ಢಱ್ಱು ಢಱ್ಱೆಂದು ತೇಗಿ ದಣ್ಣ[21]ದಣ್ಣನೆದಣಿದು ಮಣ್ಣ [22]ನಿ[22]ಪ್ಪ ಖಗೇಶ್ವ[23]ರ[23] ಮತ್ತಂ ಶರಣಚಾರಿತ್ರವೆಂಬಗ್ನಿಯಿಂ ಕರಣಾದಿಗುಣಗಳೆಂಬ ಕಾಳಾಯಸಮುಂ ಕರಂಗಿಸಿದುರುಳಿಯುಂ ಶರೀರವ್ಯಾಪ್ತಿಯೆಂಬ [24]ಇಕ್ಕುಳದಿಂ ಪಿಡಿದು ಶಿವಸಕೃಪೆಯೆಂಬ ಚ[24]ಮ್ಮಟಿಗೆಯಿಂ ಪೊಡೆದು ನಿಮಿರಿಚಿ ಪರಶುವೆಂಬಾಯುಧಮುಂ ಮಾಡಿ ವಿವೇಕವೆಂಬ ಜಲದಿಂ [25]ದೂಡಿ[25] ಅರಿಷಡ್ವರ್ಗಮುಂ ಅಷ್ಟಮದಂಗ[26]ಳಂ[26] ಸಪ್ತವ್ಯಸನಂ

[1]ಮಹೇಶ (ಗ ಚ ದ) [2]ಭ (ಗ) [3]ವನಾ (ಗ) [4]ನು (ಚ) [5]ನೊ (ಕ ಚ ದ) [6]ವದು (ಚ) [7]ಸುರಗಿರಿ (ಕ) ಸುರಗಿರಿ (ಚ) ಸುರಶಿರಿ (ಗ) [8]ಮು (ಗ) [9]ತೆಂತೊಡೆ (ಗ ಚ ದ) [10]ಜ (ಚ ದ) [11]ಗಟ್ಟಿ (ಗ) [12][illegible] (ಗ) [illegible] (ದ) [13]ನಿರ್ಗ (ಚ ದ) [14][illegible] (ಗ ಚ) [15]ಜ (ಕ) [16][illegible] (ಗ ದ) [17]ಬಿ (ಗ ದ) [18]ತ (ಗ ದ) [19][illegible] (ಗ ಚ) [20]ದು (ಗ ಚ) [21]ದ (ಗ ಚ) [22]ವ (ಗ) [23]ರನು (ಗ) [24][illegible] (ಗ ಚ ದ) [25]ನೀರೂಡಿ (ಗ ಚ) [26][illegible] (ಗ ಚ)

ಗಳೆಂಬ ಬಳ್ಳಿಗಳ ಗೊಂದ[1]ಣಂಗಳಂ[1] ಕಡಿದು ಕೊಱದೊಣಗಿಸಿ ನಿಕ್ಷೇಪಮಂ [2]ಮಾಳ್ಪ[2] ಸಾಮರ್ಥ್ಯವನ್ನುಳ್ಳ ಜ್ಞಾನಚಕ್ರೇಶ್ವರಂ ಬೋಧೈಕ ಸಾಧಕಂ ಜ್ಞಾನದ ಮಾನನಿ[3]ಧಿ[3] ಅಱಿವಿನ ಪರಮಾಯುಷ್ಯ[4]ಮುಂ[4] ಶಿವನ ಸಾಮ[5]ರ್ಥ್ಯ[5] ಹರಭಕ್ತಿಯುಕ್ತಿಯುಂ ಕರತಳಾಮಳಕಮಾ[6]ಗಿ ತೋಱಿಸುವ[6] ಬೋಧಿಸುವ ಗುರುಪ್ರಭಾವ[7]ಮುಂ[7] ಮತ್ತಂ ಜನನ ಮರಣ ಭಯಮಂ ನಿವಾರಿಸಿ ಚತುರ್ವಿಧ ಪ[8]ದಂಗಳಂ[8] ನೆನೆದಾಗ[9]ವೆ[9] ಕೊಡುವ ಸಾಮರ್ಥ್ಯವನುಳ್ಳ ನನ್ನ[10]ಯ್ಯಂಗಳ[10] ಚಾರಿತ್ರದೊಳು ಪ್ರಥಮ ಸಂ[11]ಧಿ[11]

ಕಂದ: **ಇದಱ ನನ್ನಯ್ಯನ ಚರಿ[12]ತ್ರೆ[12]ಯ**
ಮೊದಲೊ[13]ಳ್ಪ್ಪನುದೊಂ[13]ದು ಸಂಧಿಯಿಲ್ಲಿಂದಂ ಮುಂ
ದೊದ[14]ವಿ[14]ದ ಕ[15]ಥೆ[15]ಗಳ ರಚನೆಯ
ಸದಮಲ ಭಕ್ತಾಳಿ ಸುಜನರಾಲಿಪುದೊಲವಿಂ ೪೯

[1]ದ ಬಂಧನಂ (ಗ) [2]ಹಾಡಿಸುವ (ಚ) [3]ಧಿಯುಂ (ಗ) ಧಿಯುಂ (ಚ) [4]ಮುಂ (ಗ ದ) [5]ರ್ಥ್ಯವುಂ (ಚ) [6]ಗಿ (ಗ) [7]ಮುಂ (ಗ ದ) [8]ದಮಂ (ಗ ಚ ದ) [9]ಳ (ಗ) [10]ಯ್ಯನ (ದ) [11]ಧಿ ಸಮಾಪ್ತಂ (ದ) [12]ತ್ರೆ (ಚ) [13]ಳು ಪೇಳ್ದುಂ (ಗ ಚ) [14]ಗಿ (ಕ) [15]ಥಿ (ದ)

ದ್ವಿತೀಯ ಸಂಧಿ

ಕಂದ: ಶ್ರೀ[1]ಗೌರೀ[1]ಕುಚಕುಂಕುಮ
ರಾಗಂ[2]ಬೆ[2]ರಸೊಪ್ಪುವೆ[3]ತ್ತ[3] ವಕ್ಷಸ್ಥಲ ಸಂ
ಯೋಗಂ ಸದ್ಭಕ್ತಿಯನೆ[4]ಮ[4]
ಗೀಗೆ ಮನೋರಾಗದಿಂ[5]ದೆ[5] ಗುರುರಾಮೇ[6]ಶಂ[6]* ೧

ಉತ್ಪಲಮಾಲೆ

ವ್ಯಾಧನ ಚಿತ್ತಮುಂ ತಿಳಿಪಲೋಸುಗ[7]ರಂ[7] ಮೊದಲಲ್ಲಿ ಪೇಳ್ದಿನೀ
ಮೇದಿನಿಯಲ್ಲಿ ವರ್ತಿಸುವ ಪೇಳಿಯುಮಂ[8]ತದ[8]ಱಿಂದ ಮುಂದೆ ವೇ
ದಾದಿ ಪುರಾಣ ಸಾಕ್ಷಿ ಶ್ರು[9]ತ[9] ದೃಷ್ಟನುಮಾನ ಪುರಾತನಾ[10]ಕ್ಯ[10] ಸಂ
ಪಾದಿಸಿ ಪೇಳ್ದಿನೀ ಕೃತಿಯನಾಲಿಪುದೊಲ್ದು ಮನೋನುರಾಗದಿಂ ೨

[11]ಮ[11]ತ್ತೇಭ ವಿಕ್ರೀಡಿತ

ನೆಲೆಯಂ ನೋಡಲಸಾಧ್ಯವಾದ ಗುಣದಿಂ ತಾಳಿರ್ದ ಸಂತೋಷದಿಂ
ಕುಲವಂ ನೋಡಲು ಕಾಣಲೀಯ[12]ದ[12] ಮಹಾಗಾಂಭೀರ[13]ಸ್ಥೈಕ್ಷ[13]ರ್ಯದಿಂ
ಬಲದಿಂದಗ್ನಿಯನಾವಗಂ ಧ[14]ರಿಸಿ[14]ವಿ[15]ರ್ಪ[15]ನಂದದಿಂದೀಶ[16]ನಂ[16]
ಸಲೆ ನಾಂ ಪೋಲುವೆನೆಂಬುವೊಂದುಮಹಿಮೆ[17]ಯಿಂ[17]ದೊಪ್ಪಿತ್ತು ರತ್ನಾಕರಂ ೩

ಗಿರಿಶಂಗೊಲ್ದು ವಿಭೂಷಣಕ್ಕೆ ಶಶಿಯುಂ ದೈತ್ಯಾರಿಗಂ ಪ್ರೇಮದಿಂ
ಸಿರಿಯುಂ ಕೌಸ್ತುಭಮಂ ಸುರರ್ಗೆ ಸುಧೆಯುಂ ದೇವೇಂದ್ರಗೈಶ್ವರ್ಯಮಂ
ಹರುಷಂ ಕೈಮಿಗಲಿತ್ತುದೊಂದು ಘ[18]ದಿಂ ಸುತ್ತುಂ[18] ಧರಾಚಕ್ರದೊಂ
ದಿರ[19]ವುಂ[19] ತನ್ನೊಳಗೆಂಬ ತೇಜದೊ[20]ಳ[20]ವಿಂದೊಪ್ಪಿತ್ತು ರತ್ನಾಕರಂ† ೪

ವಚನ : [21]ಅಂತುಮಲ್ಲದೆಯುಂ[21]—

---

[1]ಗೌರಿಯ (ಕ) ಗಪ್ಪುರ (ಗ) [2]ವೆ (ಗ) [3]ತ್ತಿ (ಚ) [4]ಮ (ಚ) [5]ದ (ಕ) [6]ಶಾ (ಕ ಡ) [7]ರ (ಕ ಗ) [8]ತ (ಕ ಗ ಚ) [9]ತ (ಚ) [10][illegible] (ಕ ಗ ಚ) [11][illegible] (ಕ) [12]ಮ (ಗ) [13][illegible] (ಗ ಚ ಡ) [14][illegible] (ಚ) [15][illegible] (ಗ) [16][illegible] (ಚ) [17][illegible] (ಗ) [18]ದಿಂ (ಗ) [illegible] (ಚ) [19][illegible] (ಗ) [20][illegible] (ಗ ಚ ಡ) [21][illegible] (ಗ) ಅಂತುಮಲ್ಲದೆ (ಚ)

*(ಚ ಡ) [illegible]

†(ಡ) [illegible]

ಕಂದ : ಶರಧಿಯು ಗುಣಮಂ ಪೇಳ್ವ
ಗರ್ಗರಿಪೆನಲಂತದುವೆ ಮುನ್ನ ಭಯದಿಂ ದಾಮೋ
ದರನುಂ ಗಿರಿಗಳ್ಮಱೆ[3][1]ವೊ[1]ಗೆ
ಸುರರಸುರರ ಭಯುವ ಬಿಡಿಸಿತೆಂದು ಸಮುದ್ರಂ ೫

ಚಂಪಕಮಾಲೆ

ಬಳಸಿಯನೇಕನಾಮವಿಡಿದೊಪ್ಪುವ ಗೋತ್ರಸಿಕಾಯ ಮಧ್ಯದೊಳ್
ನೆಲಸಿದ ಮೇರುಮಸ್ತಕ ನಿವಾಸದೊಳಂ ಸುಖದಿ[3]ಪ್ಪ[3] ದೇವತಾ
ಕು[4]ಳ[4]ವು ಸುಸಿದ್ಧ ಸಾಧ್ಯ[5]ಸುರ[5] ಕಿನ್ನರ ಕಿಂಪುರುಷಾದಿಯಕ್ಷರಂ
ತಳೆದು ಸಭಾ[6]ಟ[6]ದಿಂ ದೆಸೆವುತಿರ್ಪುದು ನೋಳ್ಪಡೆ ಮೇರುಭೂಧರಂ ೬

ವಚನ : [7]ಆ[7] ಮೇರುವಿನ ದಕ್ಷಿಣದಿಶಾಭಾಗದಲ್ಲಿ—

ಚಂಪಕಮಾಲೆ

ಸುರಗಿರಿಯಿಂದ ದಕ್ಷಿಣವಿಭಾಗದ[8] ದೇಶದ ಪಟ್ಟಣಂಗಳೊ
ಪ್ಪಿರುತಿಹ ಬಾವಿಯಂತಿಹ ತಟಾಕಗಳಿಂದವೆ ನಂದನಾಳಿಯಿಂ
ಪುರವರ ಶಾಳಿಯೋಳಿಗಳನೊಳ್ಗೊಂಡ ಭೂಮಿ ಸಮಗ್ರದಿಂದವೊ
ಪ್ಪಿರುತಿಹ ದೇಶಮಧ್ಯದೊಳಗಿಪ್ಪುದು ಮಂಗಳವಾಡ ಗ್ರಾಮದಿಂ* ೭

ಸುರಗಿರಿಯಂತೆ ವಾರಿಧಿಯ ಘೋಷದಲಿಂದ್ರ[9]ನ[9] ವಾಸದಂತೆ ವಾ
ಹರಿಯ ಸುಪಕ್ಷದಂತೆ ಪರಮೇಷ್ಠಿ[10]ಯೋಲ್ದೊ[10]ಪ್ಪುವ ವಕ್ತ್ರದಂತೆ[11]ಯೊ[11]
ಪ್ಪಿರುತಿಹುದಾ ಪುರಕ್ಕೆ ಧರಣೀತಳದಲ್ಲೆಣೆಯಿಲ್ಲ ನೋಡಲಾರ್
ಸರಿ ಜೋರೆ ಪಾಟ ಪಾಟಿಗಳಿಲ್ಲೆನೆ ಮಂಗಳವಾಡವೊಪ್ಪುಗುಂ ೮

[12]ಶರನಿಧಿ[12]ಯಂದದಿಂದೆಸೆವ ಪೂರ್ಣತಟಾಕಗಳಾಶ್ರಯಂಗಳಿಂ
ದಿರುತಿಹ ತೆಂಗು [13]ಕ್ರಮು[13]ಕಗು ಪಲಸಾಮ್ರದಿ ಜಂಬು ಕುಜಂಗಳಿಂದ ವಿ
ಸ್ತರವಿಡಿದೀಳೆ ಬಾಳೆಗಳ ಸಾಲುಗಳೊಪ್ಪುವ ನಂದನಾಳಿ ಕ
ಣ್ಣಜಕೆಯನೀವುತಂ ಮೆಱೆವುದಾವೊಗಳ್ವೆಂ ವನದೊಂದು ಚೆಲ್ವನುಂ ೯

---

[1]ಯೊ (ಗ) ಯು (ಚ) [2]ದ (ಗ ಚ ಡ) [3]ರ್ದ (ಗ ಚ) ರ್ದ (ಡ) [4]ಲ (ಗ ಚ ಡ) [5]ರುಮ (ಗ ಚ ಡ) [6]ಟ (ಗ) [7]ಅಂತಾ (ಡ) [8]ದ (ಗ ಚ) [9]ನ (ಗ) [10]ಯೊಲ್ದೊ (ಡ) [11]ಮೊ (ಗ ಡ) [12]ಸುರನದಿ (ಗ) [13]ಕವುಂಗು (ಗ ಚ ಡ)

*(ಡ) ಪ್ರತಿಯಲ್ಲಿ ೭ನೆಯ ಪದ್ಯವಿಲ್ಲ.

ಕಂದ : ಸುರ[1]ಗಿ[1]ಯು [2]ಅಶೋ[2]ಕೆ ಬಕುಳದ
ಸುರಹೊನ್ನೆಯು ನಾಗಸಂಪಗೆಯು ವೃಕ್ಷಂಗಳ
ಪರಿ[3]ದಡರ್ವ[3] ಮೊಲ್ಲೆ ಮಲ್ಲಿಗೆ
ಇರವಂತಿಗ[4]ಳಿಂದ[4] ನಂದನಂ [5]ಕಣ್ಗೆ[5]ಸೆಗುಂ ೧೦

ಬಾಳೆಗಳಿಂ ಘನತರ ಮುಡಿ
ವಾಳಗಳಿಂದಧಿಕ ಪರಿಮಳಂಗಳೊಳಂ ಹೊಂ
ಬಾಳೆಗಳೊಳೆಸೆವ ಪರಿಮಳ
ಜಾಳಂ ಪಸರಿಸು[6]ವ[6] ವನ ಕರಂ ರಂಜಿಸುಗುಂ ೧೧

ಜಲರುಹ ಕುಮುದ ಸಮೂಹ[7]ದಿ[7]
ಬೆಳವಿಗೆ[8]ಯಿಂ[8] ಚಕ್ರವಾಕದಿಂ ಹಂಸೆಗಳಿಂ
[9]ಎಳೆತುಂ[9]ಬಿಗಳ[10]ಸುಗೆಯುದ[10]
ನಲವಿಂದಂ ಸರಸಿ ಮೆಱೆವುತಿಹುದನವರತಂ ೧೨

ಕಳಮಕ್ಷೇತ್ರ ಸಮಗ್ರ[11]ದಿ[11]
ಬೆಳೆ ಕಾಲವಕಾಲವೆನ್ನದೆಲ್ಲಾ ದಿನದೊಳ್
ಬೆಳದು ಫಳವೀವ ಶುಭಲತೆ
[12]ಗಿ[12]ಳೆಯೊಳ್ ಪ್ರತಿಯಿಲ್ಲವೇನನಭಿವರ್ಣಿಸುವೆಂ ೧೩

ಕಳಮಕ್ಷೇತ್ರದ ಫಳಕಂ
ದೆಳಸಿ ಬರುತಿಪ್ಪ ಗಿಣಿಗಳಂ ಕಂಡಾಗ[13]ಲು[13]
ನಳಿನಾನನೆಯ[14]ರು ತಮ್ಮಯ
ಬಳೆಗಯ್ಯಲಿ[14]ಚಪ್ಪಳಿಕ್ಕಿ ಸೋವುತ್ತಿರ್ಪರು ೧೪

ಚಂಪಕಮಾಲೆ

ಪರೆದ ಕುರುಳ್ಗ[15]ಳಂ[15] ನಿಜಕರಾಂಗುಲಿಯಿಂ ತಿದಿವುತ್ತ ಮೇಲುದೋ
ಸರಿಸೆ ಕುಚಂಗಳಂ ಬಿಗಿದು ಬಿಂಬಫಳಾಧರೆಯರ್ಕಳೆಯ್ದೆ ಬಂ
ದರಗಿಣಿವಿಂಡ [16]ಸೋವುತಿರುತಿರ್ಪರು ನೋಡುತ ಬಂದ[16] ಪಾಂಥರಂ
ಸ್ಮರಶರಪಂಜರಕ್ಕೊಳಗುಮಾಡು[17]ವ[17]ರಾ ಕಳಮಪ್ರದೇಶದೊಳ್ ೧೫

---

[1]ಗಿರಿ (ಗ ಚ ರ) [2]ಶೋ (ಗ ಚ ರ) [3][illegible] (ರ) [illegible] (ರ) [4][illegible] (ರ) [illegible]ಳಂದಿದೆ (ಚ ರ) [5]ಪೆ (ಚ ರ) [6]ವ (ಗ ಚ) [illegible] (ರ) [7]ದಿ (ಗ) [8][illegible] (ಗ ಚ) [9][illegible] (ಗ ಚ ರ) [10]ಸುಗೆಯು ದಿ (ಚ) [illegible] (ರ) [11]ದ (ರ) [12][illegible] (ಗ) [13][illegible] (ರ) [14][illegible] (ಗ) [illegible] (ಚ) [15][illegible] (ಚ) [16]ಸೋವುತಿರುತಂ ಪಥದೊಳ್ ಬರುತಿರ್ಪ (ಗ) [17][illegible] (ಗ ಚ ರ)

ಕಂದ: ಶುಕದ ಮೃದುನುಡಿ ಮೃದಂಗಂ
ಪಿಕಸಂದೋಹದ ಸುನಾದ ಗೇಯಂಗಳ್ ಸಾ
ರಕಿಗಳ ಸರದುಗ್ಗಡಣೆಯೊ
ಳಖಿಳ ಮಯೂರಗಳ ನರ್ತನಂ ಕಣ್ಗೆಸೆಗುಂ ೧೬

ವಚನ: ಅಂತುಮುದ್ಯಾನವನದಿಂದುಪವನ ಶಾಳಿವನದಿಂ ಕಲ್ಯಾಣ [1]ಒಪ್ಪುತ್ತಿರೆಯಿರೆ[1]—

ಕಂದ: ಪುರವಂ ಬಳಸಿರ್ದಗಳಂ
ಬರದುದ್ದವನ್ನೈದಲಿಪ್ಪ ವಪ್ರದೊಳಂ ಗೋ
ಪುರದಿಂ ಪೆರ್ಬಾಗಿ[2]ಲುಗಳ್[2]
ಮೆಱೆ[3]ದಿ[3]ಪ್ಪ ಸನಂತ[3]ವಿಭವದಿಂ ಕಲ್ಯಾಣಂ ೧೭

ಶಶಿರವಿಗಳದಾಯಾದ್ಯರ
ವಿಷಯಕ್ಕಂ ಕಮಲಗರ್ಭನಾ ಕಲ್ಯಾಣ[4]ವ[4]
ಹಸುಗೆಯ ಮಾಡಿದ ತೆಱದಿಂ
ಶಶಿ ರವಿನಾಮದಲಿ ವೀಥಿಗಳ್ಱದಿರ್ಪವು ೧೮

ನರಪತಿಯರಮನೆ ಬಾಹ
[5]ತ್ತರ[5] ತಂತ್ರದ ನಿಳಯ ಸರ್ವಜನದಾವಾಸಂ
ಪರಿ[6]ಪರಿ[6]ಯ ದೇವತಾಲಯ
ಮಿರೆ ಮೆಱೆದು[7]ದು[7] ವಿಭವದಿಂದಲಾ[8] ಕಲ್ಯಾಣಂ ೧೯

ಅಂಗಡಿಗಳು ಪಲವದಱೊಳು
ಮಿಂಗಡದಿಂದಿಪ್ಪ ಸಕಲ ಭಂಡಂಗಳನು ಮ
ನಂಗೊಳೆ ಕ್ರಯಮಂ ಕೊಂಬ ಜ
ನಂಗಳ ಸಂಭ್ರಮ[9]ವನೇಸನಭಿವರ್ಣಿಸುವೆಂ[9] ೨೦

ಅರಿ ಸಿನಮಿಲ್ಲೆಂಬರಸಿಂ
ಗರಿಸಿನ[10]ಮುಂ[10]ಬೆಸಸಿ ಕೊಟ್ಟು ವಣಿಜರ್ಮತ್ತಾ
ಗರಸಿನ ಕೃಪೆಯುಂ ಪಡೆ[11]ದವ
ರ[11]ರಿಸಿನ ಗುಣ ಪೂರ್ವದಿರ್ಪ ಸಿರಿಯಿಂದಿರ್ಪರು ೨೧

---

[1]ಮೊಪ್ಪುತ್ತಿರೆ (ಗ ಚ) [2]ಲ್ (ಗ) [3]ಪ್ಪಸ್ಪನ (ಕ) ಪ್ಪವಸಂತ (ಗ) ಪ್ಪಾವನಂತ (ಚ) [4]ದ (ಚ) [5]ತ್ರದ (ಚ) [6]ಪಿಡಿ (ಚ) [7]ಪಸಂತ (ಗ ಚ) [8]ದಿಂ (ಗ ಚ) [9]ದೊಳೆಸೆಯೆ ವಿಕ್ರಮವಸರಂ (ಗ) ದೊಳೆಸೆಯೆ ವಿಕ್ರಯವಸರಂ (ಚ) [10]ಉಂ (ಗ) [11]ದರು ಅ (ಕ ಡ)

ಚಂಪಕಮಾಲೆ

ಎಸೆವ ಸುರತ್ನಜಾತಿಗಳನಾಣೆಯ ವಾಣಿಯ ರೀತಿ ಧಾತ ನಿ
ಟ್ಟಿಸಲರಿದಾ ಪುಲಿಂಗಗಳಿಡದೆತ್ತುವ ತಂಗವಿದೆಂಬ ಭೇದವಂ
ಪಸಿಸದ ತೂಕದಿಂ ಬೆಲೆಯ ತಪ್ಪದೆ ಪೇ[1]ಳುವ[1] ದೃಷ್ಟಿವಾಳರೊಳ್
ಪೆಸರ್ವಡೆದಿರ್ಪ ರತ್ನದ ಪರೀಕ್ಷಕತಿರ್ಪರನಂತ[2]ರೂಪ್ಪಿದರ್[2] ೨೨

ಒರೆಯೊ[3]ಳು ಬಣ್ಣ [illegible][3]ಸಿಂಗು ತಾ ಸಿನ ತಟ್ಟುವ ತೂಗಿಕೊಟ್ಟೊಡಂ
[4][illegible][4]ದು [illegible] ಪೊರ್ದ[5]ದಾ[5]ವು ಬಂ
ದರೆ ಕ್ರಯಸಿ[illegible]ಗಳೊ[illegible] ತಪ್ಪದೆ ಮಾಜುವ ಕೊಂಬ ಚಿನ್ನಗೊ
ಟ್ಟರ ಸಮುದಾಯ[illegible]ಯ[6]ಲಿಪ್ಪರು[6] ನೋ[illegible]ಪಲನಂತಸೌಖ್ಯದಿಂ ೨೩

ತುರಗದ ಜಾತಿ[illegible] ಪೆಸರ ವರ್ಣವನಾಯುವಲಕ್ಷಣಂಗಳಂ
ಪರಿಕಿ[7][illegible][7] ಬಂದ [illegible]ಗಳ ರಕ್ಷಿಸಲು[8]ತ್ತ[illegible][8]ವಪ್ಪ ಭೇದವಂ
ಹರದರು [illegible] ರೀತಿಯುಂ ಅಳತಂಗಳ ಮೇಲೆ ಕಟ್ಟುವಾ
ತುರಗಪರೀಕ್ಷಕ[illegible]ವೃತಿರ್ಪರು ತತ್ಪುರದೊಳ್ ನಿರಂತರಂ ೨೪

ಕಂದ : ವಸುಮಣಿಯಂ ತ್ರೈಜಸದಿಂ
ದೆಸೆವ ಸುವಸ್ತ್ರಂಗಳಧಿಕ ಸೌಗಂಧಂಗಳ
[9]ಪ್ರ[9]ಸರದ ಪಸರಂ [10]ವಿ[10]ಕ್ರಯ
ಪಸರಂ [11]ಮೆಱೆದಿರ್ಪವೇನಸಭಿವರ್ಣಿ[illegible][11] ೨೫

ಹರಿ ಕೌಸ್ತುಭಮಂ ಧನ್ವಂ
ತರಿಯೌಷಧಿಗ[12]ಳುಮನಸುರ[12]ನಿಕರಂ ಸುಧೆಯಂ
ದೊರೆಕಿಸೆ ಕಲ್ಯಾಣದ ಪುರ
[13]ವರ[illegible][13]ಣಿಗ್ಗರೊಳಲ್ಲದಿಲ್ಲೆ ಸರಿಸೆಗುಂ ೨೬

ವಚನ : ಅಂತು[14]ಮಲ್ಲದೆ[14]—

---

[1][illegible] (ಕ) [2][illegible] (ಗ) [3][illegible] (ಕ) [4][illegible] (ಗ ಚ) [5][illegible] (ಗ) [6][illegible] (ಗ ಚ ದ) [7][illegible] (ಚ) [8][illegible] (ಗ) [illegible] (ಗ) [9][illegible] (ಚ) [10][illegible] (ಕ ಚ ದ) [11]ರಂಜಿಸಲು ಮೆಱಿಉತಿರ್ಪರ್ಪರವರ್ (ಗ ಡ) ರಂಜಿಸಲು ಮೆಱಿಉತಿರ್ಪರ್ ಪುರ[illegible] (ಚ) [12][illegible] (ಕ) [illegible] (ಚ) [13][illegible] (ಕ ಗ) [illegible] (ಗ) [14]ಮುದಲ್ಲದೆಯುಂ (ಕ ಡ)

ಚಂಪಕಮಾಲೆ

ಧರಣಿಯನಬ್ಧಿಯುಂ ಕ್ಷಿತಿಧರಂಗಳನಾವನನುಂ ವಿಹಾಯಮುಂ
ಸರಸಿಯನುರ್ವಿ[1]ಜಂ[1]ಗಳ ಮೃಗಾಧಿಪನಂಗಜವಿಂತಿವೆಲ್ಲಜಱಾಳ್
ಮೆಱೆವ ಗುಣಂಗಳ ತಳೆದಘಾಟದ ಜೆಲ್ವುಮನಾಂತು ಭಾವಿಸ
ಲ್ಕರಿದೆನಿಸಿರ್ಪ ರೂಪಿನೊಳು ವಾರವಧೂಜನರಿಪ್ಪರೊಪ್ಪದಿಂ ೨೭

ಪೊಸತೆನಿಪಬ್ಜದಲ್ಲಿ ಸೆನ ಭೃಂಗಗಳಂಗಜಚಾಪ ಕೈರವಂ
ಮಿಸುಪ ಸುಚಂಪಕಂ ಮುಕುರಮೌಕ್ತಿಕ ಬಿಂಬಫಲಂಗಳಿಂತು ಸಂ
ಧಿ[2]ಸಿ[2] ಜನಿಸಿರ್ದುವೊಪ್ಪವೊಲಾ ಸತಿಯರ್ಕಳ ವ[3]ಕ್ತ್ರ ಕಂಜ ರಂ[3]
ಜಿಸುತಿಹುದೇನ ಬಣ್ಣಿಸೆನಗಣ್ಯದ [4]ಪಣ್ಯ[4] ವಧೂ ಸಮೂಹವಂ ೨೮

ಕಂದ : ನುಡಿ ನ[5]ಡು ನಡೆಯೆಂ[5]ಬಿವನೆಡೆ
ವಿಡದೊಲ್ವಿ ಶುಕಾಳಿ ಹರಿ ಮರಾಳಂಗಳ್ ನೆಱೆ
ಪಡೆದವು ಸತಿಯರೊಳಂದೊ
[6]ಳ್ನುಡಿ[6] ಬಡನಡು ನಡೆಯು[7]ನೇನನೆನಲ್ ನೆಱೆದರ್ ಸತಿಯರ್[7] ೨೯

ಚಂಪಕಮಾಲೆ

ಹುರುಡಿಸಿ ನೋಹದಿಂ ಮುನಿದು ಮುದ್ದಿ[8]ಸಿ[8] ಕೋಪಿ[8]ಸಿ[8] ಸೋಲ್ತರಂದದಿಂ
ಸುರಿ[9]ದು ನೃಗಾಂ[9]ಬುಸಂ ಧನದಪೇಕ್ಷೆಯುಂ ಮಾಡದೆ ಕೂರ್ತು [10]ಕೂಡುತಂ[10]
ತಿ[11]ರೆ[11] ವಿಟ ಸೋಲ್ವ ಭಾವನನು ಕಂಡವನರ್ಥವ ಕೊಂಬುದೆಂದುಮಾ
ಪರಿವಿಡಿಯಿಂ[12]ದ[12] ಮುಗ್ಧೆಯರ [13]ಪ್ರ[13]ಧ್ಧೆಯರೋದಿಸುತಿ[14]ರ್ಪು
ತೊಪ್ಪಿದರ್[14] ೩೦

ವಚನ : ಮತ್ತಂ*—

ಚಂಪಕಮಾಲೆ

[15]ಹು[15]ಸಿನಗೆಯೊರ್ವನಲ್ಲಿ ವಸುನೋಟನವೊರ್ವನ [16]ಕೂಡೆ[16] ಕೂರ್ತರಂ
ತೊಸೆದಿಹುದೊರ್ವನಲ್ಲಿ ಬಱುಮಾತು[17]ಮದೊ[17]ರ್ವನ ಕೂಡೆಯಾಡಿ ಸಂ
ತಸ[18]ದಲಿ[18] ಕೂರ್ತು ಕೂಡಿ ಸುಖಮಿರ್ಪವರೊರ್ವನೊಳಿಂತನೇಕ ದು
ರ್ವ್ಯಸನಿಯರಪ್ಪ ಸರ್ವಜನವಲ್ಲಭೆಯರ್ಕಳಸಂತ[19]ರೊ[19]ಪ್ಪುಗುಂ ೩೧

---

[1]ಯ ಜನಂ (ಕ ಪ) [2]ಸೆ (ಚ) [3]ರಂ (ಕ) [4]ಪುಣ್ಯ (ಕ) ಪಣ್ಯದ (ಗ) [5]ಡೆ ನಡುವೆಂ (ಕ) ಡು ನಡೆಯುಂ (ಚ) [6]ಳ್ನುಡಿಯುಂ (ಚ) [7]ನೇನನಭಿವರ್ಣಿಸುವೆಂ (ಕ) ನೆನಲ್ ಮೆಱೆವರ್ ಸತಿಯರ್ (ಚ) [8]ಸು (ಗ) [9]ಸಂಪನಾಂ (ಗ) [10]ಕೊಂಡುತಿಂ (ಗ) [11]ರು (ಗ ಡ) [12]ಡೆ (ಗ ಡ) [13]ಪ್ರ (ಚ) [14]ರ್ಪವರೊಪ್ಪದಿಂ (ಗ) [15]ಪು (ಗ [16]ಸೋಕೆ (ಗ ಚ) [17]ಗಳೊ (ಗ ಚ) [18]ದೊಳು (ಗ ಚ) [19]ವೊ (ಗ ಚ)

*(ಗ ಚ ಡ) ಪ್ರತಿಗಳಲ್ಲಿಲ್ಲ.

ಹುಸಿನುಡಿ ಹುಟ್ಟಿದಾಲಯುವಸಹ್ಯದ[1]ಗೊತ್ತು[1] ಅಮಾರ್ಗದೇಳ್ಗೆ ವಂ
ಚಿಸಿ ಪರರರ್ಥವಂ ಕವರ್ವ ಚಾವಡಿ ಗನ್ನದ ಬೈಕೆ ಕೂರ್ತುರ್ಗೆ ಛಿ
ದ್ರಿಸುವ ವಿಷಾ[2]ನ್ನವೆಂ[2]ದೆನಿಸಿ ವೈಶಿಕವೆ ಸಥುರೂಪನಾಂತು ಬಂ
ದೆಸವವೊಲಿರ್ಪ [3]ಪ[3]ಣ್ಯವನಿತಾಜನ[4]ವಿ[4]ರ್ಪರನಂತಗಾಡಿಯಿಂ ೩೨

ವಚನ : [5]ಅಲ್ಲಿಂದಂ ಮುಂದೆ—

ಕಂದ : ಅ[5]ರಸೆನಲೀಯದೆ ಕರುವಂ
ಸರಿಗೊ[6]ಳ್ಳ[6]ದೆ ತುರಗ ಗಜ ರಥಂ ಬಲಮಿರ್ದಂ
ತಿರಲರಸ ನಡುವೆ ಕಟ್ಟುವ
ಸಿರುತದ ಚದುರಂಗದವರು ಮೆಱೆದರ್ ಪುರದೊಳ್ ೩೩

ಥಾಳಿಸಿ ಹಾಸಂಗಿಗಳಂ
ಹೇಳಿದ ದಾಯವ[7]ನು ಹಾಯ್ಕಿ[7] ಹೆಚ್ಚಿಸಿ ಗುಣಮಂ
ಸೋ[8]ಲದೆ[8] ಸಮವೆನಲಾಡುವ
ಲೀಲೆಯು ನೆತ್ತದಲಿ ಜೂಜುಗಾಱರ್ ಮೆ[9]ಱೆದ[9]ರ್ ೩೪

ಉತ್ಪಲಮಾಲೆ

ವೇದವನೋದಿ ಕೇಳಿದ ಪರೀ[10]ಕ್ಷಿತ[10]ರಾಯೆನಲುತ್ತರಂಗಳಂ
ವೇದಿಪ ಶಬ್ದಶಾಸ್ತ್ರದೊಳು [11]ಪೆಂಪತಿ[11] ಭಾವಿಪ ತರ್ಕತಂತ್ರದೊಳ್
ವಾದಿ[12]ಸಿ[12] ವಾದಮಂ ಗೆಲುವ ಸರ್ವಕಳಾಕುಶಲಾಗಮಜ್ಞ [13]ರಂ[13]
ಮೇದಿನಿಯೊಳ್ ವಿಶೇಷಮೆನಲೊಪ್ಪುವರಾ ಪುರದೊಳ್ ನಿರಂತರಂ ೩೫

ಕಂದ : ಪಲತೆಱದ ವೀಣೆಗಳುಮಂ
ಪಲತೆಱದಾಳಾಪದಿಂದ ಬಾ[14]ಜಿ[14]ಸಿ ಕರ್ಣಂ
ಗಳಿಗೆ ಸೊಗಸುಗಳ ಬೀಱು
ತ್ತಿಳೆಗಚ್ಚರಿಯೆನಿ[15]ಪ[15] ಗಾಯಕರ್ ಮೆಱೆವಿಪ್ಪರ್ ೩೬

---

[1]ಗೋತ್ರದ (ಗ) ಗೊತ್ತುವ (ಚ) ಮತ್ತವ (ತ) [2]ಲ್ನವೆಂ (ಕ) ನ್ನವೆಂ (ಗ) [3]ಪ (ಕ ಚ ತ) [4]ಬಿ (ಚ) ಬು (ಗ) [5]ಅಲ್ಲಿಂ ಮುಂದೆ ಅ (ಚ) ಅ (ಗ) [6]ಳ್ಳ (ಕ) [7] ನೆಯಾಯಿಕಿ (ಗ ಚ) [8]ಲಿಕೆ (ತ) [9]ಱ (ಗ) [10]ಕ್ಷಕ (ಗ) [11]ಪೆಂಪಲ (ಗ) [illegible] (ತ) [12]ಪೆ (ಗ) [13]ರೀ (ಚ) [14]ಚ (ಗ ತ) [15]ಪ್ಪ (ಕ)

ಎಲ್ಲಾ ದಿನದೊಳ್ ದುಃಖಮ
[1]ನಲ್ಲಿ[1]ಯ ಜನ[2]ವಱ[2]ಯದುದಱ[3]ನ[3]ಜನಾ ಪುರನುಂ
ಕಲ್ಯಾಣವೆಂಬ [4]ಪೆಸರದು[4]
ಸ[5]ಲ್ಪ[5]ದು ಗುಣನಾಮನೆಂದು ಪೆಸರಂ ಕರೆದಂ ೩೭

ಆ ಪುರವನಾಳ್ವ ಭೂಪಂ
ರೂಪಿಂ ಮನ್ಮಥನ[6]ಚಾ[6]ಗದಿಂ ಕರ್ಣ[7]ನನಾ[7]
ಕೋಪ[8]ದಿ[8] ಯಮ[9]ರಾಜನ[9] ಸಿರಿ
[10]ಮಾ ಪದದಿ[10] ಕುಬೇರನಂತೆ ಬಿಜ್ಜಳನೆಸೆ[11]ಗುಂ[11] ೩೮

ವಚನ : ಅಂತು ಸಕಲಸೌಭಾಗ್ಯದಿಂ ಪೊಗ[12]ಳ್[12] ನೆಗ[13]ಳ್ತ್ವ[13]ಡೆದ ಕಲ್ಯಾ[14]ಣ[14]ವೊಪ್ಪು[15]ತ್ತ ಮಿ[15]ರೆಯಿ[16]ರೆ ಮತ್ತಂ[16]—

ಕಂದ : ಪದಿನೆಂಟು ಶಿವಪುರಕ್ಕಂ
ಮೊದಲದು ಕಲ್ಯಾಣಮಲ್ಲಿಯಮರಗಣಂ ಬಂ
ದುದಿಸಿದರು ಶಿವ[17]ನ[17] ನೇಮದಿ
ಸದಮಲ ಬಸವಣ್ಣ ಬಿಜ್ಜಳಾ[18]ಧಿಪ[18] ಸಹಿತಂ ೩೯

ಚಂಪಕಮಾಲೆ

